# ಕರ್ನಾಟಕದ ಹಿಂದುಳಿದ ವರ್ಗಗಳ ಚಳುವಳಿಗಳು (ವಿಶೇಷವಾಗಿ ವಿಶ್ವಕರ್ಮ ಸಮುದಾಯದ ಕುರಿತು ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ)

**ಡಾ. ಆಕ್ಕಸಾಲಿ ಶಿವಕುಮಾರಚಾರಿ**
ಸಮಾಜಶಾಸ್ತ್ರ ಅಧ್ಯಯನ ವಿಭಾಗ, ರಾಯಚೂರು ವಿಶ್ವವಿದ್ಯಾಲಯ ರಾಯಚೂರು
shivuvskub@gmail.com

**ಅಮೂರ್ತ ವಿಚಾರಗಳು / ಸಾರಾಂಶ**

**ಪ್ರಸ್ತಾವನೆ:**

ಭಾರತವು ಸುದೀರ್ಘ ಮತ್ತು ಭವ್ಯವಾದ ಇತಿಹಾಸವನ್ನು ಹೊಂದಿರುವ ವಿಶಾಲವಾದ ದೇಶವಾಗಿದೆ. ಅದರ ಸಮಾಜ ಮತ್ತು ಸಂಸ್ಕೃತಿಯು ಯುಗಗಳ ಮೂಲಕ ವಿಕಸನಗೊಂಡಿವೆ. ಭಾರತೀಯ ಸಮಾಜವು ವಿವಿಧ ಧರ್ಮಗಳು, ವಿವಿಧ ಭಾಷೆಗಳು, ವಿವಿಧ ಬುಡಕಟ್ಟುಗಳು, ವಿವಿಧ ಜನಾಂಗ, ಮತ್ತು ಜಾತಿ–ಉಪಜಾತಿಗಳ ತಳಹದಿಯ ಮೇಲೆ ಬಹು ಶ್ರೇಣಿಕೃತಗೊಂಡಿರುವ ವೈವಿಧ್ಯತೆಗಳ ದೇಶವಾಗಿದೆ. ಹೀಗಾಗಿ ಭಾರತೀಯ ಸಮಾಜವು ವಿಪರೀತ ಸಂಕೀರ್ಣ ಸಂಸ್ಕೃತಿಗಳನ್ನು ಪ್ರತಿನಿಧಿಸುತ್ತದೆ. ಕರ್ನಾಟಕದಲ್ಲಿ ಹಲವಾರು ಹಿಂದುಳಿದ ವರ್ಗಗಳಿದ್ದು ಅದರಲ್ಲಿ ವಿಶ್ವಕರ್ಮ ಸಮುದಾಯವು ಸಹ ಒಂದು. ಮಾನವನು ಸಂಘಜೀವಿಯಾಗಿರುವುದರಿಂದ ಸಮೂಹ ಹಾಗು ಸಮಾಜಗಳಲ್ಲಿ ವಾಸಿಸುವುದು ಅವನಿಗೆ ಅನಿವಾರ್ಯವಾಗಿದೆ. ಆದ್ದರಿಂದ, ಸಾಮಾಜಿಕ ವ್ಯವಸ್ಥೆಯ ರೀತಿ–ನೀತಿಗಳಿಗೆ ಹಾಗೂ ಕಟ್ಟುಪಾಡುಗಳಿಗೆ ಒಳಪಟ್ಟು ಅವರ ಬದುಕು ಸಾಗಬೇಕಾಗಿದೆ. ಸಾಮಾಜಿಕ ವ್ಯವಸ್ಥೆಯ ರೀತಿ–ನೀತಿಗಳು ಅವನಿಗೆ ಸದಾ ತೃಪ್ತಿ ನೀಡುತ್ತವೆ ಎನ್ನುವಂತಿಲ್ಲ. ಸಮಾಜದ ಜೀವನ ಕ್ರಮದಲ್ಲಿ ಏನೋ ಕೊರತೆ ಕಾಣಬಂದು ಅಲ್ಲೊಂದು ಬದಲಾವಣೆ ಬೇಕು ಎಂದು ಆತನಿಗೆ ಅನಿಸಬಹುದು. ಅಥವಾ ಹಳೆಯದರ ಜೊತೆಗೆ ಹೊಸತೆನಿಸುವ ಕೆಲವು ಸಂಗತಿಗಳು ಸೇರಿಕೊಂಡಾಗಲೇ ಜೀವನದ ಮೆರುಗು ಹೆಚ್ಚುವುದು ಎಂದು ಆತ ಭಾವಿಸಬಹುದು. ತಾನು ಬಯಸುವ ರೀತಿಯಲ್ಲಿ ಬದಲಾವಣೆಯನ್ನು ತರಲು ಆಥವಾ ಬದಲಾವಣೆಯನ್ನು ಬಯಸುವವರನ್ನು ವಿರೋಧಿಸಲು ಜನಮತವನ್ನು ಕ್ರೋಢಿಕರಿಸಿ ಹೋರಾಟವನ್ನು ಹುಟ್ಟು ಹಾಕುವುದಕ್ಕೆ "ಸಾಮಾಜಿಕ ಆಂದೋಲನ" ಎನ್ನಬಹುದು. ಸಾಮಾಜಿಕ ಆಂದೋಲನಗಳು ಏಕೆ ಹುಟ್ಟಿಕೊಳ್ಳುತ್ತವೆ? ಎಂಬುದು ಒಂದು ಜಟಿಲವಾದ ಪ್ರಶ್ನೆಯಾಗಿದ್ದು ಈ ಬಗ್ಗೆ ಕೆಲವು ಸಿದ್ಧಾಂತಗಳಿವೆ. ಅದರಲ್ಲಿ ಸಾಪೇಕ್ಷ ವಂಚಿತತೆಯ ಸಿದ್ಧಾಂತವು ಪ್ರಮುಖ ಪಾತ್ರವಹಿಸಿದೆ.

**ಮಾಹಿತಿ ಸಂಗ್ರಹಣೆ:**

ಈ ಅಧ್ಯಯನ ಪತ್ರಿಕೆಗೆ ಅಳವಡಿಸಿಕೊಂಡ ವಿಧಾನವು ಸಮಾಜ ವಿಜ್ಞಾನಕ್ಕೆ ಸಾಮಾನ್ಯವಾಗಿದೆ. ಲೇಖಕರು ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲವನ್ನು ಸಂಶೋಧನಾ ಪುಸ್ತಕಗಳು, ಪ್ರಬಂಧಗಳು, ಲೇಖನಗಳು ಮತ್ತು ಎಲೆಕ್ಟ್ರಾನಿಕ್ ಮಾಧ್ಯಮದಿಂದ ಮಾಹಿತಿ ಸಂಗ್ರಹಿಸಲಾಗಿದೆ.

**ಅಧ್ಯಯನದ ಉದ್ದೇಶಗಳು:**

1. ವಿಶ್ವಕರ್ಮ ಸಮುದಾಯದ ಐತಿಹಾಸಿಕ ಹಿನ್ನೆಲೆ ತಿಳಿಯುವುದು. 2. ವಿಶ್ವಕರ್ಮರ ರಕ್ಷಣಾತ್ಮಕ ಹೋರಾಟ / ಅಂದೋಲನದ ಬಗ್ಗೆ ತಿಳಿಯುವುದು.

**ಸಂಶೋಧನೆಯ ಅಂಶಗಳು:**

1. ಸಾಮಾಜಿಕವಾಗಿ– ಆರ್ಥಿಕವಾಗಿ ಹಿಂದುಳಿದಿರುವ ಸಮುದಾಯವಾಗಿದೆ. 2. ವಿಶ್ವಕರ್ಮ ಸಮುದಾಯವನ್ನು ಸರ್ಕಾರ ನಿರ್ಲಕ್ಷ್ಯಗೊಳಿಸಿದೆ. 3. ಸರ್ಕಾರದ ಸೌಲಭ್ಯ ಪಡೆಯುವಲ್ಲಿ ವಂಚಿತವಾಗಿದೆ.

**ಉಪ ಸಂಹಾರ:**

ಸಾಮಾಜಿಕ ಆಂದೋಲನ ಎಂಬುದು ಮಾನವನ ಸಾಮೂಹಿಕ ವರ್ತನೆಯ ಒಂದು ಪ್ರಕಟಿತ ರೂಪವಾಗಿದೆ. ಅದು ಸಾಮೂಹಿಕ ಹೋರಾಟದ ಇನ್ನೊಂದು ಹೆಸರಾಗಿದೆ. ಈ ಆಂದೋಲನಗಳು ವಿವಿಧ ರೂಪಗಳಲ್ಲಿ ಕಾಣಬರಬಹುದು. ಅವು ಕ್ರಾಂತಿಕಾರಕ, ಸುಧಾರಾಣಾತ್ಮಕ ಪ್ರತಿಕ್ರಿಯಾತ್ಮಕ, ಪ್ರತಿರೋಧಕ ಹಾಗೂ ಅವಾಸ್ತವಿಕ ಆದರ್ಶಾಂದೋಲನಗಳ ಸ್ವರೂಪದಲ್ಲಿ ಹೀಗೆ ಬೇರೆ ಬೇರೆ ರೂಪಗಳಲ್ಲಿ ಬೇರೆ ಬೇರೆ ಉದ್ದೇಶ ಸಾಧನೆಗಾಗಿ ಬೇರೆ ಬೇರೆ ತಂತ್ರ ವಿಧಾನಗಳನ್ನು ಅನುಸರಿಸುತ್ತಾ ಜನಬೆಂಬಲವನ್ನು ಪಡೆಯುವ ಯತ್ನ ನಡೆಸುವುದನ್ನು ಗಮನಿಸಬಹುದು.

**ಪ್ರಮುಖ ಟಿಪ್ಪಣಿಗಳು:**

ವಿಶ್ವಕರ್ಮ ಸಮುದಾಯ, ಕ್ರಾಂತಿಕಾರಕ, ಸುಧಾರಾಣಾತ್ಮಕ, ಸಾಮಾಜಿಕ ಆಂದೋಲನ ಇತ್ಯಾದಿ.

**1. ಪ್ರಸ್ತಾವನೆ:**

ಮಾನವ ಸಮಾಜವನ್ನು ವಿವಿಧ ಶ್ರೇಣಿ ಅಥವಾ ವರ್ಗ (ಪಂಗಡ) ಗಳಾಗಿ ವಿಭಜಿಸಲಾಗಿದೆ. ಜಗತ್ತಿನಾದ್ಯಂತ ಇದೊಂದು, ಎಲ್ಲಾ ಸಮಾಜಗಳಲ್ಲೂ ಕಂಡುಬರುವ ಸರ್ವಮಾನ್ಯ ಲಕ್ಷಣ. ಈ ಸಾಮಾಜಿಕ ತಾರತಮ್ಯವನ್ನು ಸಾಮಾಜಿಕ ಪ್ರಭಾವ, ವೃತ್ತಿ, ಸಂಪತ್ತು, ಅಥವಾ ಅಂತಸ್ತುಗಳ ಆಧಾರದ ಮೇಲೆ ಗುರುತಿಸಲಾಗುತ್ತದೆ. ವಿವಿಧ ಗುಂಪು, ಪಂಗಡ ಅಥವಾ ವರ್ಗಗಳ ಶ್ರೇಣಿಕೃತ ಸ್ಥಾನಮಾನವನ್ನು ಸಾಮಾನ್ಯವಾಗಿ ಸಾಮಾಜಿಕ ಸ್ತರಗಳಲ್ಲಿ ಗುರುತಿಸಬಹುದಾಗಿದೆ. ಈ ರೀತಿಯ ವಿವಿಧ ವರ್ಗೀಕೃತ ಗುಂಪುಗಳನ್ನು ಕ್ರಮಾನುಗತ ಶ್ರೇಣಿಗಳಂದು ಕರೆಯಲಾಗಿದೆ.

ವಿಶ್ವಕರ್ಮ ಸಮುದಾಯ ಕುಶಲಕರ್ಮಿಗಳ ವಲಯವು ಭಾರತೀಯ ಆರ್ಥಿಕತೆಯು ಅತಿದೊಡ್ಡ ವಿಕೇಂದ್ರೀಕೃತ ಮತ್ತು ಅಸಂಘಟಿತ ವಲಯವಾಗಿದೆ. ಭಾರತದ ಎರಡನೇ ಅತಿದೊಡ್ಡ ಉದ್ಯೋಗ ಕ್ಷೇತ್ರದ ಕುಶಲಕರ್ಮಿಗಳು, ಕೃಷಿಗೆ ಎರಡನೆಯದು. ಭಾರತದಲ್ಲಿ ಇಂದು ಇಪ್ಪತ್ಮೂರು ದಶಲಕ್ಷ ಕುಶಲಕರ್ಮಿಗಳು ಇದ್ದಾರೆ. ಭಾರತದಲ್ಲಿ ಕರಕುಶಲಕತೆಯು ಕೇವಲ ಒಂದು ಉದ್ಯಮವಲ್ಲ ಆದರೆ ಸಮುದಾಯದ ಅಂತರಿಕ ಆಸೆ ಮತ್ತು ನೆರವೇರಿಕೆಯನ್ನು ಸಂಕೇತಿಸುವ ಸೃಷ್ಟಿಯಾಗಿದೆ. ಕುಶಲಕರ್ಮಿಗಳು ಕಮ್ಮಾರರು, ಮರಗೆಲಸ, ಕಂಚಿನ ಕೆಲಸಗಾರರು, ಶಿಲ್ಪಿಗಳು ಮತ್ತು ಅಕ್ಕಸಾಲಿಗರು. ಇವರೆಲ್ಲರೂ ಸಮಾಜದ ಜನರ ದೈನಂದಿನ ಜೀವನದಲ್ಲಿ ಸಕರಾತ್ಮಕ ಅಗತ್ಯವನ್ನು ಪೂರೈಸುತ್ತಾರೆ. ಅವು ಸ್ವಯಂ ಅಭಿವ್ಯಕ್ತಿ ಮತ್ತು ಪ್ರಜ್ಞಾಪೂರ್ವಕ ಸೌಂದರ್ಯದ ವಿಧಾನವಾಗಿಯೂ ಕಾರ್ಯನಿರ್ವಹಿಸುತ್ತದೆ.

ಸಾಮಾಜಿಕ ಬದಲಾವಣೆಯು ಬಹು ಅಯಾಮದ ಪರಿಕಲ್ಪನೆಯಾಗಿದ್ದು, ಆದಾಯ, ಶಿಕ್ಷಣ ಮತ್ತು ವೃತ್ತಿಯಲ್ಲಿನ ಬದಲಾವಣೆಯ ದೃಷ್ಟಿಯಿಂದ ಇದನ್ನು ಅರ್ಥೈಸಲಾಗುತ್ತದೆ. ಇದು ಒಂದು ಸಾರ್ವತ್ರಿಕ ವಿದ್ಯಾಮಾನವಾಗಿದೆ. ಇದು ಎಲ್ಲಾ ಸಮಾಜಗಳಲ್ಲಿ ಮತ್ತು ಎಲ್ಲಾ ಐತಿಹಾಸಿಕ ಅವಧಿಗಳಲ್ಲಿ ಒಂದು ಅಥವಾ ಇನ್ನೋಂದು ರೊಪದಲ್ಲಿ ಕಂಡುಬರುತ್ತದೆ. ಯಾವುದೇ ಸಮಾಜವು ಸ್ಥಿರವಾಗಿಲ್ಲ, ಔದ್ಯೋಗಿಕ ಬದಲಾವಣೆಗಳು ಅತ್ಯಂತ ಮಹತ್ವದ ಪ್ರಕ್ರಿಯೆಯಾಗಿದ್ದು, ಉತ್ತಮ ಉದ್ಯೋಗದ ಹುಡುಕಾಟದಲ್ಲಿ ಕಾರ್ಮಿಕರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುವುದನ್ನು ಸೂಚಿಸುತ್ತದೆ, ಉದ್ಯೋಗವಿಲ್ಲದಿರುವಿಕೆ, ಕನಿಷ್ಟ ಉದ್ಯೋಗ ಮತ್ತು ಕಡಿಮೆ ಆದಾಯವು ಉದ್ಯೋಗಗಳಿಗೆ ವಲಸೆ ಹೋಗಲು ಅಥವಾ ಪ್ರಸ್ತುತ ಉದ್ಯೋಗದಲ್ಲಿನ ಬದಲಾವಣೆ ಮೂಲಭೂತ ಕಾರಣಗಳಾಗಿವೆ. ಈ ಸಮುದಾಯಕ್ಕೆ ಶೈಕ್ಷಣಿಕ ಸಾಧನೆ ಮತ್ತು ಸುಧಾರಣೆ ಹೆಚ್ಚು ಮುಖ್ಯವಾಗಿದೆ.

ಭಾರತೀಯ ಸಮಾಜವು, ಧಾರ್ಮಿಕ ಮತ್ತು ಭಾಷಾ ಆಧಾರದ ಮೇಲೆ ವಿವಿಧ ಜಾತಿ ಪಂಗಡಗಳಾಗಿ, ಅಸಂಖ್ಯೆ ರೀತಿಯಲ್ಲಿ ಹಂಚಿಹೋಗಿದೆ. ಪ್ರತಿಯೊಂದು ಪಂಗಡವೂ ತನ್ನ ಸಾಂಸ್ಕ್ರತಿಕ ಜೀವನವು, ಬೇರೆ ಪಂಗಡಗಳಿಗಿಂತಲೂ

ಅನನ್ಯ ಮತ್ತು ವಿಭಿನ್ನವೆಂದು ಹಕ್ಕು ಸಾಧಿಸುತ್ತದೆ. ಜೀವನ ಶೈಲಿ, ವೈಯಕ್ತಿಕ ಕಲ್ಪನೆ ಮತ್ತು ಬದುಕಿನ ಇತರೆ ವಿಧಾನಗಳು ಆಯಾ ಜನಾಂಗಗಳನ್ನು ಪ್ರತಿಬಿಂಬಿಸುತ್ತವೆ. ಭಾರತೀಯ ಸಮಾಜವು, ಜಾತಿಗಳೆಂಬ ವರ್ಗೀಕೃತ ಹೋಳುಹೋಳಾಗಿರುವುದನ್ನು, ಜಾತಿಗಳು ಹುಟ್ಟಿನಿಂದ ನಿರ್ಧರಿಸಲ್ಪಟ್ಟು, ಸಾಮಾಜಿಕವಾಗಿ ಶ್ರೇಣಿಕರಣಗೊಂಡಿರುವುದನ್ನು, ಸಮಾಜಶಾಸ್ತ್ರಜ್ಞರು ಒಪ್ಪಿಕೊಳ್ಳುತ್ತಾರೆ. ಜಾತಿ ಪದ್ಧತಿಯು ಭಾರತ ನೆಲಕ್ಕೆ ವಿಚಿತ್ರವಾದುದು. ಭಾರತವನ್ನು ಹೊರತುಪಡಿಸಿ, ಬೇರೆ ಯಾವುದೇ ರಾಷ್ಟ್ರದ ಸಮಾಜವು ಇಷ್ಟು ಸಂಕೀರ್ಣ, ಮುಚ್ಚಿದ ಶ್ರೇಣಕೃತ ಜಾತಿ ವ್ಯವಸ್ಥೆಯನ್ನು ಹೊಂದಿಲ್ಲ.

**2. ಮಾಹಿತಿ ಸಂಗ್ರಹಣೆ:**

ಈ ಅಧ್ಯಯನ ಪತ್ರಿಕೆಗೆ ಅಳವಡಿಸಿಕೊಂಡ ವಿಧಾನವು ಸಮಾಜ ವಿಜ್ಞಾನಕ್ಕೆ ಸಾಮಾನ್ಯವಾಗಿದೆ. ಲೇಖಕರು ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲವನ್ನು ಸಂಶೋಧನಾ ಪುಸ್ತಕಗಳು, ಪ್ರಬಂಧಗಳು, ಲೇಖನಗಳು ಮತ್ತು ಎಲೆಕ್ಟ್ರಾನಿಕ್ ಮಾಧ್ಯಮದಿಂದ ಮಾಹಿತಿ ಸಂಗ್ರಹಿಸಲಾಗಿದೆ.

**3. ಸಿದ್ಧಾಂತಗಳು:**

ಸಾಮಾಜಿಕ ಆಂದೋಲನಗಳು ಏಕೆ ಹುಟ್ಟಿಕೊಳ್ಳುತ್ತವೆ? ಎಂಬುದು ಒಂದು ಜಟಿಲವಾದ ಪ್ರಶ್ನೆಯಾಗಿದ್ದು ಈ ಬಗ್ಗೆ ಕೆಲವು ಸಿದ್ಧಾಂತಗಳಿವೆ. ಸಾಪೇಕ್ಷ ವಂಚಿತತೆಯ ಸಿದ್ಧಾಂತ, ತ್ರಾಸ ಅಥವಾ ಪ್ರಯಾಸದ ಸಿದ್ಧಾಂತ ಹಾಗೂ ಪುನಶ್ಚೈತನ್ಯತೆಯ ಸಿದ್ಧಾಂತ ಇತ್ಯಾದಿ.

ಇವುಗಳಲ್ಲಿ **ಸಾಪೇಕ್ಷ ವಂಚಿತತೆಯ ಸಿದ್ಧಾಂತವೇ** ಹೆಚ್ಚು ಅರ್ಥಪೂರ್ಣವಾಗಿದೆ ಎನ್ನಬಹುದು. ಈ ಕಲ್ಪನೆಯನ್ನು ಪರಿಚಯಿಸಿದವರು ಸ್ಟೌಪರ್ 1949 ಎಂಬಾತ. ಆತನ ಪ್ರಕಾರ ವಂಚಿತತೆಯ ಭಾವನೆಯು ನಿರೀಕ್ಷೆಗಳು ಮತ್ತು ವಾಸ್ತವಿಕತೆಗಳ ನಡುವಿನ ಅಂತರವನ್ನು ಹೊಂದಿಕೊಂಡಿರುತ್ತವೆ. ಏನೂ ಇಲ್ಲದಾತ ಮತ್ತು ಹೆಚ್ಚಿನದೇನನ್ನು ಬಯಸದಾತನಿಗಿಂತಲೂ, ಆಗಲೇ ಸಾಕಾಷ್ಟು ಪಡೆದಿದ್ದು ಇನ್ನೂ ಹೆಚ್ಚಿನದನ್ನು ಬಯಸುವವನೇ ಸ್ಟೌಪರ್ ಪ್ರಸ್ತಾಪಿಸಿರುವ ವಂಚಿತತೆಯ ಭಾವನೆಗೆ ಒಳಗಾಗುತ್ತಾನೆ ಎನ್ನುತ್ತಾರೆ ಹರ್ಟನ್ ಮತ್ತು ಹಂಟ್.

ಯಾವುದೋ ಕೆಲವು ನಿರ್ದಿಷ್ಟ ವರ್ಗಗಳ ಜನರಿಗೆ ಹೋಲಿಸಿದಾಗ ತಾವು ತುಂಬಾ ದುರ್ದೆಸೆಯಲ್ಲಿದ್ದೇವೆ ಎಂದು ಭಾವಿಸಿರುವ ಜನರು ವಂಚಿತತೆಯ ಅನುಭವಕ್ಕೆ ಸಿಲುಕುತ್ತಾರೆ ಹಾಗೂ ಅಂತಹ ಪರಿಸ್ಥಿತಿಯನ್ನು ಬದಲಿಸಬೇಕೆಂಬ ಬಲವಾದ ತುಡಿತಕ್ಕೆ ಒಳಗಾಗುತ್ತಾರೆ ಮತ್ತು ಅವಕಾಶ ಸಿಕ್ಕಿದಾಗ ಸ್ಪಂದಿಸುತ್ತಾರೆ. ಹೀಗೆ ಸಾಪೇಕ್ಷ ವಂಚಿತತೆ ಎಂಬುದು ಒಂದು ನಿರ್ದಿಷ್ಟ ಹೋಲಿಕೆಯಿಂದ ಉತ್ಪನ್ನಗೊಳ್ಳುವ ಗೃಹೀತ ಅನಾನುಕೂಲವಾಗಿರುತ್ತದೆ.

ತಮಗೆ ನ್ಯಾಯೋಚಿತವಾಗಿ ಸಲ್ಲಬೇಕಾದ್ದು ಅಥವಾ ಲಭಿಸಬೇಕಾದ್ದು ಲಭಿಸಿಲ್ಲ. ತಮಗೆ ಅನ್ಯಾಯವಾಗಿದೆ ಅಥವಾ ತಾವು ಬಹು ಮುಖ್ಯವಾದ ಯಾವುದೂ ಒಂದು ವಸ್ತು ವಿಷಯ ಅಥವಾ ಹಕ್ಕಿನಿಂದ ನಮ್ಮ ಸಮುದಾಯ/ ಸಮಾಜ ವಂಚಿತರಾಗಿದ್ದೇವೆ ಎಂಬ ಭಾವನೆಯನ್ನು ಹೊಂದಿರುವ ಜನ ಅಂತಹ ಅರಿವಿನಿಂದಾಗಿಯೇ ಆಂದೋಲನಕ್ಕೆ ಸಿದ್ಧರಾಗಿರುತ್ತಾರೆ. ತಮ್ಮ ನಿರಾಶೆ ಅಥವಾ ಹತಾಶೆಗೆ ಕಾರಣವನ್ನು ತಿಳಿಸಿಕೊಡುವ ಮತ್ತು ಅದನ್ನು ನಿವಾರಣೆ ಮಾಡುವೆನೆಂಬ ಭರವಸೆ ನೀಡುವ ಸಮರ್ಥ ನೇತಾರನೊಬ್ಬ ಸಿಕ್ಕಾಗ ಅವರು ಆಂದೋಲನದ ಪ್ರವಾಹದಲ್ಲಿ ಸೇರಿಕೋಳ್ಳುತ್ತಾರೆ.

ಆಂದೋಲನಗಳ ಕಾರಣಗಳು ಹಾಗೂ ರೂಪಗಳು ಏನೇ ಇರಲಿ ಅವು ನಮ್ಮ ಅಧುನಿಕ ಸಮಾಜದ ಎಲ್ಲಾ ರಂಗಗಳಲ್ಲೂ ಕಾಣಬರುತ್ತವೆ. ಎಷ್ಟೋ ಬಾರಿ ನಾವು ಅವುಗಳೊಂದಿಗೆ ಸೇರಿಕೊಳ್ಳುವುದು ಇದೆ. ಈ ಆಧುನಿಕ ಯುಗವು ಸಂಘಟನೆಯ ಯುಗ ವಾಗಿರುವುದರಿಂದ ಆಂದೋಲನಗಳನ್ನು ಹುಟ್ಟಹಾಕುವುದರಲ್ಲಿ ಮತ್ತು ಮುನ್ನಡೆಸುವುದರಲ್ಲಿ ಈ ಸಂಘಟನೆಗಳ ಪಾತ್ರ ಗಣನೀಯವಾಗಿದೆ.

ಈ ತೆರನಾದ ಸಾಪೇಕ್ಷ ವಂಚಿತತೆಯ ಭಾವನೆಯು ಹಿಂದುಳಿದ ದೇಶಗಳ ಪ್ರಪಂಚಕ್ಕೆ ತೀರಾ ಸಹಜವಾಗಿರುತ್ತದೆ ಎಂಬುದು ಹಾರ್ಟನ್ ಮತ್ತು ಹಂಟ್ ರವರ ಅಭಿಪ್ರಾಯ. ಹಿಂದುಳಿದ ಜಗತ್ತಿನ ಈ ಬಡಜನರು ಬಡತನ, ಹಸಿವು, ನಿರುದ್ಯೋಗ, ಅನಾರೋಗ್ಯ ಮುಂತಾದವು ಅನಿವಾರ್ಯವೇನಲ್ಲ ಎಂಬುದನ್ನು ತಿಳಿದಿದ್ದಾರೆ.

**4. ಸಾಹಿತ್ಯವಲೋಕನಗಳು**

**ಜಿ. ಎನ್. ಎಮ್, ಆಚಾರ್ಯ (2012):**

ಇವರು ರಚಿಸಿರುವ "ಮಹಾವಿಶ್ವಕರ್ಮ" ಎಂಬ ಪುಸ್ತಕದಲ್ಲಿ ಜಗತ್ತಿಗೆ ಬೆಳಕನ್ನು ಜೀವಶಕ್ತಿಯನ್ನು ಕೊಡುವ ಸೂರ್ಯನು ಸದ್ಯೋಜಾತ ಮುಖನಾದರೆ, ಅಗೋರ ಮುಖನಾದ ವಿಷ್ಣು, ಈಶಾನ್ಯ ಮುಖನಾದ ಶಿವನು, ತತ್ಪುರುಷನಾದ ಬ್ರಹ್ಮನು, ಕೊನೆಗೆ ವಾಮದೇವ ಮುಖನಾದ ಇಂದ್ರನು ಈ ಪಂಚಮುಖಗಳೇ ವಿಶ್ವಕರ್ಮ ದೇವನ ಪಂಚಮುಖದ ವಿಶ್ಲೇಷಣೆಯಾಗಿದೆ. ಇವು ಪಂಚಭೂತಗಳ, ಪಂಚತತ್ವಗಳ ಪ್ರತೀಕವಾಗಿದೆ. ಈ ವಿಶ್ವಕರ್ಮ ದೇವನನ್ನೇ ಜಗದ ಸೃಷ್ಟಿಕಾರ್ಯದ ಮೊದಲ ದೇವ ವಿಶ್ವಬ್ರಾಹ್ಮಣ ಕುಲದ ಆರಾಧ್ಯ ದೈವವಾಗಿದೆ, ಸಕಲ ವಿಶ್ವಗಳ ಒಡೆಯನೆಂದು ಸಕಲ ವಿಶ್ವಗಳ ಸೃಷ್ಟಿಗೆ ಕಾರಣನೆಂದು ವಿಶ್ವಕರ್ಮನು ವೇದರ್ಷಿಗಳಿಂದ ಸ್ತುತಿಸಲ್ಪಟ್ಟಿದ್ದಾನೆ, ವಿಶ್ವಕರ್ಮನೇ ಆದಿ ಜಗದ್ಗುರು, ವಿಶ್ವಕರ್ಮನೇ ಇಲ್ಲವೆಂದರೆ ಈ ಜಗತ್ತಿಗೆ ಅಸ್ತಿತ್ವವೇ ಇಲ್ಲ ಎಂದಿದ್ದಾರೆ. ಈ ನನ್ನ ಸಂಶೋಧನೆಗೆ ಸಂಬಂಧಿಸಿದಂತೆ ವಿಶ್ವಕರ್ಮನ ಸೃಷ್ಟಿ, ಮೂಲಪುರಾಣ ತಿಳಿಯಲು ಸಹಾಯಕವಾಗುತ್ತದೆ.

**ಎ.ಇ. ರಾಬರ್ಟ್ಸ್ ರವರು**

'ವಿಶ್ವಕರ್ಮ ಮತ್ತು ಆತನ ಸಂತತಿ' ಎಂಬ ತಮ್ಮ ಗ್ರಂಥದಲ್ಲಿ ವಿಶ್ವಕರ್ಮನ ಹುಟ್ಟು, ವಿಶ್ವಕರ್ಮ ಮತದ ಏಳುಬೀಳುಗಳ ಬಗೆಗೆ, ಚಾರಿತ್ರಕ ಸತ್ಯಾಂಶಗಳ ಸಮರ್ಥನೆಯೊಂದಿಗೆ, ವಿದ್ವತ್ಪೂರ್ಣವಾಗಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ

**5. ಅಧ್ಯಯನದ ಉದ್ದೇಶಗಳು:**

1. ವಿಶ್ವಕರ್ಮ ಸಮುದಾಯದ ಐತಿಹಾಸಿಕ ಹಿನ್ನೆಲೆ ತಿಳಿಯುವುದು. 2. ವಿಶ್ವಕರ್ಮರ ರಕ್ಷಣಾತ್ಮಕ ಹೋರಾಟ / ಅಂದೋಲನದ ಬಗ್ಗೆ ತಿಳಿಯುವುದು.

**1. ವಿಶ್ವಕರ್ಮ ಸಮುದಾಯದ ಐತಿಹಾಸಿಕ ಹಿನ್ನೆಲೆ ತಿಳಿಯುವುದು:**

ಈ ವಿಶ್ವಕರ್ಮರು ಸಾಂಪ್ರದಾಯಿಕ ಕುಶಲಕರ್ಮಿಗಳು. ಇವರು ಕಮ್ಮಾರ, ಬಡಗಿ, ಲೋಹಶಿಲ್ಪಿ, ಸ್ಥಪತಿ ಮತ್ತು ಸ್ವರ್ಣಕಾರ ಎಂದು ಐದು ವೃತ್ತೀಯಾ ಪಂಗಡಗಳಾಗಿ ಗುರುತಿಸಲ್ಪಟ್ಟಿದ್ದಾರೆ. ಭಾರತದಲ್ಲಿ 3000 ಕ್ಕೂ ಹೆಚ್ಚಿನ ಜಾತಿಗಳಿವೆ. ವಿಶ್ವಕರ್ಮರು ಮತ್ತು ಇವರ ಜೀವನ ವಿಧಾನಗಳ ಬಗೆಗೆ ಈವರೆವಿಗೂ ಶಾಸ್ತ್ರೀಯವಾಗಿ ಸಮಾಜಶಾಸ್ತ್ರರು ಅಧ್ಯಯನ ಮಾಡದಿರುವುದು ವಿಸ್ಮಯಕಾರಿ ನಿರಾಶಾದಾಯಕ ಸಂಗತಿ. ಇವರ ಮೂಲ, ವೃತ್ತಿಗಳು ಮತ್ತು ಸಮಾಜದಲ್ಲಿ ಇವರ ಸ್ಥಾನಮಾನಗಳ ಬಗೆಗೆ ಖಚಿತವಾಗಿ ತಿಳಿದುಕೊಳ್ಳದೆ ನಡೆದಿರುವ ಅಲ್ಪಸ್ವಲ್ಪ ಅಧ್ಯಯನವೂ ಗೊಂದಲಕಾರಿ. ಹೀಗಾಗಿ ಇವರ ಮೂಲ, ಕುಶಲಕರ್ಮಿಗಳಾಗಿ ಇವರ ವೃತ್ತೀಯ ಪ್ರಾಮುಖ್ಯತೆಗಳ ಬಗೆಗೆ ಸ್ಪಷ್ಟ ನೋಟದ ಆಳವಾದ ಅಧ್ಯಯನ ಅವಶ್ಯ.

ಭಾರತದಾದ್ಯಂತ ವಿಶ್ವಕರ್ಮರನ್ನು ಗುರುತಿಸಲು ಬಳಸಿರುವ ಹಲವು ಪರಿಭಾಷೆಗಳು ಪ್ರಾಂತದಿಂದ ಪ್ರಾಂತಕ್ಕೆ, ಭಾಷೆಯಿಂದ ಭಾಷೆಗೆ ವಿಭಿನ್ನಗೂಂಡಿರುವುದು, ಆವುಗಳಲ್ಲಿ ಕೆಲವು ಮಾತ್ರ ಕೆಲವು ಕಡೆ ಒಂದೇ ಆಗಿರುವುದು ಕುತೂಹಲಕಾರಿ.

ದಕ್ಷಿಣ ಭಾರತದಲ್ಲಿ ವಿಶ್ವಕರ್ಮ ಜನಾಂಗವನ್ನು ಕಮ್ಮಾಲಾರ್, ಕಂಸಾಲ, ದೇವಕಮ್ಮಾಲಾರ, ಆಚಾರ್ಯ, ಆಸಾರಿ, ಶಿಲ್ಪಿ, ಪತ್ತಾರ,ಬಡಿಗೇರ, ಅಕ್ಕಸಾಲಿ, ರಥಕಾರ, ಸೋನಾರ್, ಸ್ಥಪತಿ, ಸ್ವರ್ಣಕಾರ, ದೈವಜ್ಞ, ವಿಶ್ವಬ್ರಾಹ್ಮಣ, ತಚ್ಚನ್, ತಟ್ಟನ್, ಕನ್ನನ್, ಕಲ್ತಚ್ಚನ್, ಕೊಲ್ಲನ್, ಪಾಂಚಾಲ, ಬಡಿವಡ್ಲ, ಮುಂತಾದ ಹೆಸರುಗಳಿಂದ ಗುರುತಿಸಲಾಗಿದೆ.

ಉತ್ತರ ಭಾರತದಲ್ಲಿ ವಿಶ್ವಕರ್ಮ ಜನಾಂಗವನ್ನು ಲೋಹರ್, ಸೋನಾರ್, ಪಾಂಚಾಲ, ಧೀಮನ್, ಜಾಂಗೀಡ್, ಬಾದಲ್, ಕೋಕಸಬ್ರಾಹ್ಮಿನ್, ನಾರಶಾಂಸ ಬ್ರಾಹ್ಮಿನ್ ಮುಂತಾದ ಹೆಸರುಗಳಿಂದ ಗುರುತಿಸಲಾಗಿದೆ.

ಹೀಗೆ ಸ್ಥಾನಿಕವಾಗಿ ವಿವಿಧ ಹೆಸರುಗಳಿಂದ ನಿರ್ದೆಶಿಸಲ್ಪಟ್ಟ ವಿಶ್ವಕರ್ಮ ಜನಾಂಗದ ಪಂಗಡಗಳು, ಭಾರತದ ಎಲ್ಲಾ ರಾಜ್ಯಗಳಲ್ಲೂ ವಾಸಿಸುತ್ತಿರುವ ಸಾಂಪ್ರದಾಯಿಕ ಕುಶಲಕರ್ಮಿಗಳು. ಅಲ್ಪಸಂಖ್ಯಾತರಾಗಿದ್ದರೂ, ಇವರು ಕಲೆ, ವಾಸ್ತುಶಿಲ್ಪ, ಗೃಹಕೈಗಾರಿಕೆಗಳ ಉನ್ನತೀಕರಣಕ್ಕಾಗಿ ಶ್ರಮಿಸುವಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಲೋಹ, ಕಾಷ್ಟ, ಶಿಲೆ, ದಂತ ಉದ್ಯಮಗಳ ಕಲಾ ಕೌಶಲ್ಯಕ್ಕೆ ಮತ್ತು ಕುಶಲ ಕಲೆಗಳಿಗೆ ಇವರು ಪ್ರಸಿದ್ದರು.

ವಿಶ್ವಕರ್ಮರ ಮೂಲೋತ್ಪತ್ತಿ, ಪ್ರಾಚೀನ ಶಿಲ್ಪ ಸಮಾಜ ಪರಂಪರಾ ಸಂತತಿ, ಈ ಬಗೆಗಿನ ಸಂಶೋಧನೆ ಶತಮಾನಗಳಷ್ಟುಕಾಲದ ವಿಸ್ತರಣೆಯಾಗಿದ್ದು, ಸುಮಾರು 5000 ವರ್ಷಗಳ ಅಥವಾ ಅದಕ್ಕೂ ಹಿಂದಿನ ಕಾಲದ

ಸಂಶೋಧನೆ ಅಗತ್ಯವನ್ನು ಪ್ರತಿಪಾದಿಸುತ್ತದೆ. ವಿಶ್ವಕರ್ಮರ ಮೂಲದ ಸುಳಿವು, ಶಿಲೆಗಳನ್ನು ವಿನ್ಯಾಸಗೊಳಿಸಿ, ಕೆತ್ತಿ, ನಯಪಡಿಸುತಿದ್ದ ಮತ್ತು ಉಪಕರಣ ಹಾಗೂ ಸಲಕರಣೆಗಳನ್ನೂ ಸಿದ್ದಪಡಿಸುತಿದ್ದ ಶಿಲಾಯುಗ ಮತ್ತು ಲೋಹಯುಗಗಳ ಕಾಲದಷ್ಟು ಪ್ರಾಚೀನತೆಗೆ ಹೋಗುತ್ತದೆ. ಆ ಕಾಲದಲ್ಲಿಯೇ ಇವರು ತಾಮ್ರ, ಕಂಚು, ಕಬ್ಬಿಣ, ಚಿನ್ನ, ಬೆಳ್ಳಿ ಮುಂತಾದ ಲೋಹಗಳನ್ನು ಕಂಡುಹಿಡಿದು, ಆ ಲೋಹಗಳನ್ನು ಕಂಡು ಹಿಡಿದು, ಆ ಲೋಹಗಳನ್ನು ಕರಗಿಸಿ ಆಯುಧ, ಉಪಕರಣ, ಸಲಕರಣೆ, ರಥ, ಆಭರಣ ಮುಂತಾದವುಗಳನ್ನು ತಯಾರಿಸುತಿದ್ದವರು. ಹೀಗೆ ಇವರು ಸಾರ್ವತ್ರಿಕವಾಗಿ ನಾಗರಿಕತೆ ಮತ್ತು ಸಂಸ್ಕೃತಿಯ ರೂಪಕರಾಗಿದ್ದರು.

**2. ವಿಶ್ವಕರ್ಮರ ರಕ್ಷಣಾತ್ಮಕ ಹೋರಾಟ / ಅಂದೋಲನದ ಬಗ್ಗೆ ತಿಳಿಯುವುದು:**

ಪ್ರತಿ ಜಾತಿಯು ತನ್ನ ಮಟ್ಟಿಗೆ ತಾನೊಂದು ಸಾಮಾಜಿಕ ಘಟಕ. ಈ ರೀತಿಯಾ ಎಲ್ಲಾ ಬೇರೆಬೇರೆ ಸಾಮಾಜಿಕ ಘಟಕಗಳೂ, ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲಿ , ವಿವಿಧ ಸ್ಥಾನಗಳನ್ನು ಗುರುತಿಸಿಕೊಂಡು, ಒಂದು ಸಂಘಟಿತ ವ್ಯವಸ್ಥಿತ ಸಮಾಜವಾಗಿ ಒಗ್ಗೂಡಿವೆ. ಜಾತಿ ಶ್ರೇಣಿಕರಣ ವ್ಯವಸ್ಥೆಯಲ್ಲಿ, ಬ್ರಾಹ್ಮಣರು ಅತ್ಯಂತ ಮೇಲಿನ ಸ್ಥಾನವನ್ನು ಹೊಂದಿರುವ ಜಾತಿ ಶ್ರೇಣಿಕರಣ ವ್ಯವಸ್ಥೆಯಲ್ಲಿನ, ಮಧ್ಯದ ಸ್ಥಾನಗಳನ್ನು, ವಿವಿಧ ಮಟ್ಟದ ಶ್ರೇಣಿ ಸ್ಥಾನವನ್ನು ಹೊಂದಿ ಇತರ ಜಾತಿಗಳು ತುಂಬಿವೆ. ಹೀಗಾಗಿ, ಭಾರತೀಯ ಸಾಮಾಜಿಕ ವ್ಯವಸ್ಥೆಯು, ವಿವಿಧ ಜಾತಿಗಳ ಒಂದು ಶ್ರೇಣಿಕರಣ ವ್ಯವಸ್ಥೆಯಾಗಿ ರೊಪುಗೂಂಡಿದೆ. ಕರ್ನಾಟಕದಲ್ಲಿ ಹಲವಾರು ಹಿಂದುಳಿದ ವರ್ಗಗಳಿದ್ದು ಅದರಲ್ಲಿ ವಿಶ್ವಕರ್ಮ ಸಮುದಾಯವು ಸಹ ಒಂದು. ಈ ವಿಶ್ವಕರ್ಮರು ಸಾಂಪ್ರದಾಯಿಕ ಕುಶಲಕರ್ಮಿಗಳು. ಇವರು ಕಮ್ಮಾರ, ಬಡಗಿ, ಲೋಹಶಿಲ್ಪಿ, ಸ್ಥಪತಿ ಮತ್ತು ಸ್ವರ್ಣಕಾರ ಎಂದು ಐದು ವೃತ್ತೀಯಾ ಪಂಗಡಗಳಾಗಿ ಗುರುತಿಸಲ್ಪಟ್ಟಿದ್ದಾರೆ.

ಈ ಸಮುದಾಯದವರು ಸಮಾಜದಲ್ಲಿನ ಎಲ್ಲಾ ವರ್ಗದವರಿಗೂ ಅತೀ ಅವಶ್ಯಕವಾಗಿ ಬೇಕಾಗಿರುವ ಜನಾಂಗದವಾರಾಗಿದ್ದಾರೆ. ಮಾನವನು ಸಂಘಜೀವಿಯಾಗಿರುವುದರಿಂದ ಸಮೂಹ ಹಾಗು ಸಮಾಜಗಳಲ್ಲಿ ವಾಸಿಸುವುದು ಅವನಿಗೆ ಅನಿವಾರ್ಯವಾಗಿದೆ. ಆದ್ದರಿಂದ, ಸಾಮಾಜಿಕ ವ್ಯವಸ್ಥೆಯ ರೀತಿ–ನೀತಿಗಳಿಗೆ ಹಾಗೂ ಕಟ್ಟುಪಾಡುಗಳಿಗೆ ಒಳಪಟ್ಟು ಅವರ ಬದುಕು ಸಾಗಬೇಕಾಗಿದೆ. ಸಾಮಾಜಿಕ ವ್ಯವಸ್ಥೆಯ ರೀತಿ–ನೀತಿಗಳು ಅವನಿಗೆ ಸದಾ ತೃಪ್ತಿ ನೀಡುತ್ತವೆ ಎನ್ನುವಂತಿಲ್ಲ. ಸಮಾಜದ ಜೀವನ ಕ್ರಮದಲ್ಲಿ ಏನೋ ಕೂರತೆ ಕಾಣಬಂದು ಅಲ್ಲೊಂದು ಬದಲಾವಣೆ ಬೇಕು ಎಂದು ಆತನಿಗೆ ಅನಿಸಬಹುದು. ಅಥವಾ ಹಳೆಯದರ ಜೊತೆಗೆ ಹೊಸತೆನಿಸುವ ಕೆಲವು ಸಂಗತಿಗಳು ಸೇರಿಕೊಂಡಾಗಲೇ ಜೀವನದ ಮೆರುಗು ಹೆಚ್ಚುವುದು ಎಂದು ಆತ ಭಾವಿಸಬಹುದು. ತಾನು ಬಯಸುವ ರೀತಿಯಲ್ಲಿ ಬದಲಾವಣೆಯನ್ನು ತರಲು ಆಥವಾ ಬದಲಾವಣೆಯನ್ನು ಬಯಸುವವರನ್ನು ವಿರೋಧಿಸಲು ಜನಮತವನ್ನು ಕ್ರೋಢಿಕರಿಸಿ ಹೋರಾಟವನ್ನು ಹುಟ್ಟು ಹಾಕುವುದಕ್ಕೆ “ಸಾಮಾಜಿಕ ಆಂದೋಲನ” ಎನ್ನಬಹುದು.

ವಿಶ್ವಕರ್ಮರ ತಮ್ಮ ಸ್ಥಾನ ಮಾನಗಳ ಪುನರುಜ್ಜೀವನ ಹೋರಾಟದ ಸ್ಪೂರ್ತಿಯ, ಮತ್ತೊಂದು ಮೂಲ ಆಕರವೆಂದರೆ ಜಾತೀಯ ಸಂಘಗಳ ಪ್ರಾರಂಭ ಮತ್ತು ಅವು ಸಂಘಟಿತಗೊಂಡು ನಡೆಸಿದ ಸಮಾವೇಶಗಳು, ಅವು ಹೂರತರಲಾರಂಭಿಸದ ಜಾತಿ ಸಂಚಿಕೆಗಳು ಹಾಗೂ ಬೆಳೆಸುತ್ತಾ ಹೋದ ವಿಶ್ವಕರ್ಮ ಸಾಹಿತ್ಯವಾಗಿದೆ.

ವಿಶ್ವಕರ್ಮರು ಅನೇಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಮತ್ತು ನಿರ್ಧಿಷ್ಟ ಗುರಿ–ಉದ್ದೇಶಗಳನ್ನು ಮುಟ್ಟಲು ಅವಶ್ಯವಾದ ಹುರುಪು ಉತ್ತೇಜನಗಳನ್ನು ನೀಡಿರುವ ಸಾಮಾನ್ಯವಾಗಿ, ಸಂಘಗಳ ಸ್ಥಾಪನೆಯ ಉದ್ದೇಶ, ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಸ್ಥಾನಮಾನಗಳು ಲಭಿಸುವಂತೆ ಅಲ್ಲಲ್ಲಿ ಅನೇಕ ಬಾರಿ ಹೋರಾಟ/ ಅಂದೋಲನಗಳನ್ನು ಪ್ರಾರಂಭಿಸಿದರು. ಹಳ್ಳಿಗಳಿಂದ ಹಿಡಿದು, ಜಿಲ್ಲೆ ಮತ್ತು ರಾಷ್ಟ್ರ ಮಟ್ಟದಲ್ಲಿ ಸಂಘಟನೆಗೊಳ್ಳಲೂ ಪ್ರಾರಂಭಿಸಿದರು. ಹಿಂದೂ ಸಮಾಜದಲ್ಲಿನ ತಮ್ಮ ಅನುವಂಶಿಕ ಸ್ಥಾನಮಾನಗಳ ಬಗೆಗೆ 1840 ರಲ್ಲಿಯೇ ಸಂಘ ಸ್ಥಾಪನೆ ಮಾಡಿಕೊಂಡು ಕ್ರಮೇಣ ಸಂಘಗಳನ್ನು ಎಲ್ಲಮಟ್ಟಗಳಲ್ಲಿಯೂ ವಿಸ್ತರಿಸುತ್ತಾ ಹೋದರು. ಸಮಾಜದಲ್ಲಿನ ತಮ್ಮ ಸ್ಥಾನಮಾನಗಳ ಬಗೆಗೆ, ವಿಶ್ವಕರ್ಮ ಸಾಹಿತ್ಯ ಪ್ರಚಾರದ ಮೂಲಕ ಸಮುದಾಯದವರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸಿದರು.

ವಿಶ್ವಕರ್ಮರು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಹಿಂದುಳಿಯುವಿಕೆಯ ಕಡೆ ಗಮನ ಸೆಳೆಯಲು ಮತ್ತು ಈ ಸಾಂಪ್ರದಾಯಿಕ ಕುಶಲಕರ್ಮಿಗಳ ಹಿತಾಸಕ್ತಿಗಳನ್ನು ಕಾಪಾಡಲೂ ಮುಂದಾದರು.

ವಿಶ್ವಕರ್ಮರು ಭಾರತದಲ್ಲಿ ಬಹು ವಿರಳವಾಗಿ ಹರಡಿರುವುದರಿಂದ ಅವರನ್ನು ಸಂಗಟಿಸುವುದು ನಿಧಾನಗತಿಯ ಶ್ರಮದಾಯಕ ಕೆಲಸ ಪ್ರಾರಂಭಿಕಕಾಲದ ಸಂಘಗಳು, ಪಂಗಡ, ಭಾಷೆ, ವೃತ್ತಿ ಮತ್ತು ಪ್ರದೇಶಗಳೆಂಬ ಸಂಕುಚಿತ

ನಿಷ್ಟೆಯ ಸಂಘಗಳು ಮಾತ್ರವಾಗಿದ್ದವು. ಕುಶಲಕರ್ಮಿಗಳು ತಮ್ಮ ವೈಭವದ ಬಗೆಗೆ ಜಾಗೃತಗೊಳ್ಳುವ, ನಶಿಸಿಹೋಗಿರುವ ತಮ್ಮ ಆತ್ಮಗೌರವವನ್ನು ಪುನರುಜ್ಜೀವನಗೊಳಿಸುವ ಮತ್ತು ಹೊಸದಾಗಿ ಗೌರವ ಗಳಿಕಾ ಸಾಮಾರ್ಥ್ಯವನ್ನು ರೂಢಿಸಿಕೊಳ್ಳುವ ಆಯಾಮಗಳ ಬಗೆಗೆ ಮನವರಿಕೆ ಮಾಡಿಕೊಡಲು ಅನೇಕ ಗೋಷ್ಠಿ ಮತ್ತು ವಿಚಾರ ಸಂಕೀರ್ಣಗಳನ್ನು ಆ ಸಂಘಗಳ ಮೂಲಕ ನಡೆಸಲಾಯಿತು, ಈ ಎಲ್ಲಾ ಅಂಶಗಳು ವಿಶ್ವಕರ್ಮರ ರಕ್ಷಣಾತ್ಮಕ ಹೋರಾಟ ಸಂಘಟಿತ ಪ್ರಯತ್ನಗಳಾಗಿವೆ.

**6. ಸಂಶೋಧನೆಯ ಕೊನೆಯ ಅಂಶಗಳು:**

1. ಸಾಮಾಜಿಕವಾಗಿ- ಆರ್ಥಿಕವಾಗಿ ಹಿಂದುಳಿದಿರುವ ಸಮುದಾಯವಾಗಿದೆ. 2. ವಿಶ್ವಕರ್ಮ ಸಮುದಾಯವನ್ನು ಸರ್ಕಾರ ನಿರ್ಲಕ್ಷ್ಯಗೊಳಿಸಿದೆ. 3. ಸರ್ಕಾರದ ಸೌಲಭ್ಯ ಪಡೆಯುವಲ್ಲಿ ವಂಚಿತವಾಗಿದೆ.

**7. ಉಪಸಂಹಾರ :**

ಈ ಅಧುನಿಕ ಸಂಕೀರ್ಣ ಸಮಾಜದಲ್ಲಿಯೂ ಸಹ ಇಂತಹ ವಿಶ್ವಕರ್ಮ ಸಮುದಾಯಗಳ ಬಗ್ಗೆ ಅಂದೋಲನಗಳು ಮತ್ತು ಪ್ರತ್ಯಾಂದೋಲನಗಳು ನಡೆಯುತ್ತಲೇ ಇದ್ದು ಆ ಸಮಾಜವನ್ನು ಹಲವು ದಿಕ್ಕುಗಳ ಕಡೆ ಎಳೆದಾಡುತ್ತಿರುತ್ತವೆ. ಈ ಬಗೆಯ ಅಂದೋಲನ-ಪ್ರತ್ಯಾಂದೋಲನಗಳ ಸಮರ ಸ್ವಲ್ಪ ಸಮಯದವರೆಗೆ ಸಾಗಿ ಕೊನೆಗೆ ಅದು ಅಂದೋಲನದ ಪರವಾಗಿಯೇ ಅಂತ್ಯಗೊಳ್ಳುವುದಿದೆ. ಆಗ ಅದು ಸಾಮಾಜಿಕ ಸಂರಚನೆಯ ಒಂದು ಭಾಗವಾಗುವುದು. ಯಶಸ್ವಿಯಾಗುವ ಯಾವುದೇ ಅಂದೋಲನವಾದರೂ ಸಾಮಾಜಿಕ ವ್ಯವಸ್ಥೆಯ ಒಂದು ಹೊಸ ಸಾಧನವೆಂಬಂತೆ ಸಾಮಾಜಿಕ ಪ್ರಕ್ರಮದೊಂದಿಗೆ ಸೇರಿಕೊಂಡು ತನ್ನದೇ ಆದ ಸ್ಥಾನವನ್ನು ಗಳಿಸಿಕೊಳ್ಳುವುದಾಗಿದೆ.

**8. ಗ್ರಂಥಗಳು :**


1. ಗೂಡೆ ಮತ್ತು ಹಟ್ಟ್: ಸಂಶೋಧನಾ ವಿಧಾನಗಳು, ದೆಹಲಿ.2010.
2. ಜಿ,ಎಸ್, ಗುರ್ಯೆ: ಭಾರತದಲ್ಲಿ ಜಾತಿ ಜನಾಂಗಗಳು. (1970)
3. ಡಾ. ಕೆ.ವಿ. ಕೃಷ್ಣಮೂರ್ತಿ (2012): ದಕ್ಷಿಣ ಭಾರತದ ಪಾರಂಪರಿಕ ಕುಶಲಕರ್ಮಿಗಳು. ವಿಶ್ವಶ್ರೀ ಪಬಿಷರ್ಸ್, ತುಮಕೂರು, ಕರ್ನಾಟಕ.
4. ದೀಕ್ಷೀತ್ ವಿ.ಜಿ. 1975 : ಕರ್ನಾಟಕದಲ್ಲಿನ ವಿಶ್ವಬ್ರಾಹ್ಮಣ ಧರ್ಮ ಮತ್ತು ಸಂಸ್ಕೃತಿ. ದಾರವಾಡ.
5. ಮುತ್ತಾಚಾರ್ಯ ಟಿ.ವಿ. 1968 : ವಿಶ್ವಕರ್ಮ ವಂಶ ವಿಕಾಸ, ತುಮಕುರು.
6. ಚ.ನ. ಶಂಕರ್ ರಾವ್ : ಭಾರತೀಯ ಸಮಾಜಶಾಸ್ತ್ರ
7. ಎಮ್,ಎಸ್,ಎ, ರಾವ್: ಭಾರತೀಯ ಸಾಮಾಜಿಕ ಚಳುವಳಿಗಳು.
8. ಸ್ಮೆಲ್ಸರ್ ಜೆ 1993 : ಸಮಾಜಶಾಸ್ತ್ರ
9. ಎಮ್,ಎಫ್, ಅಬ್ರಾಹಾಮ್ 2008 : ಕಾಂಟೆಂಪೋರರಿ ಸೊಶೀಯಾಲಾಜಿ.
10. ಯಂಗ್ ಪಿ. ವಿ. 1977: ಸಾಮಾಜಿಕ ಸಂಶೋಧನಾ ವೈಜ್ಞಾನಿಕ ವಿಧಾನಗಳು, ದೆಹಲಿ.
11. ರಾಬರ್ಟ್ಸ್ ಎ.ಇ.: ವಿಶ್ವಕರ್ಮ ಮತ್ತು ಅವನ ಸಂತತಿ, ಜ್ಞಾನಭಂಡಾರ, ಕೆಜಿಎಫ್,ಕರ್ನಾಟಕ, 1973.


***************************

# ಸರ್ಕಾರಿ ಶಾಲೆಗಳು ಸರಿಯಾಗಿ ಕೆಲಸ ಮಾಡದೆದರುವುದೇ ಬಾಲ ಕಾರ್ಮಿಕತೆಗೆ ಮೂಲ ಕಾರಣ

**ಡಾ. ಹಣಮಂತ್ರಾಯ ಸಿ, ಕರಡ್ಡಿ**
ಸಮಾಜ ಕಾರ್ಯ ಅಧ್ಯಯನ ವಿಭಾಗ, ರಾಯಚೂರ ವಿಶ್ವವಿದ್ಯಾಲಯ ರಾಯಚೂರ
9886108774

ನಮ್ಮ ದೇಶದಲ್ಲಿ 11 ಲಕ್ಷ ಸರ್ಕಾರಿ ಶಾಲೆಗಳಿದ್ದು (ಇಡೀ ಜಗತ್ತಿನಲ್ಲಿ ಹೆಚ್ಚು) ಬಹುಪಾಲು ಹಳ್ಳಿಗಳಲ್ಲಿಯೇ ಇದ್ದರೂ ಈ ಶಾಲೆಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಹಾಗಾಗಿ ಬಾಲ ಕಾರ್ಮಿಕ ಪದ್ಧತಿ ಯತಾವತ್ತಾಗಿದೆ. 'ರಾಜ್ಯವು ಮಕ್ಕಳ ಸ್ವಾತಂತ್ರ್ಯ ಹಾಗೂ ಅಭಿಯಾನಕ್ಕೆ ಪೂರಕವಾಗಿ ಮಗುವಿನ ಆರೋಗ್ಯ ಪೂರ್ವ ವಿಕಾಸಕ್ಕೆ ಅನುಗುಣವಾಗುವಂತಹ ಅವಕಾಶ ಮತ್ತು ಸೌಲಭ್ಯಗಳನ್ನು ಒದಗಿಸಿ ದೌರ್ಜನ್ಯಕ್ಕೆ ತುತ್ತಾಗದಂತೆ ಸಂರಕ್ಷಿತ ವಾತಾವರಣ ನೀಡುವ ಜವಾಬ್ದಾರಿಯನ್ನು ಹೊಂದಿದೆ' ಎಂದು ನಿರ್ದೇಶನ ಪೂರ್ವಕವಾಗಿ ನಮ್ಮ ಘನ ಸಂವಿಧಾನವು ಮಾರ್ಗದರ್ಶಿಸಿದೆ. ದೇಶದ ಸಂವಿಧಾನ ಜಾರಿಗೊಂಡು ಆರು ದಶಕಗಳೆ ಕಳೆದು ಹೋದರು ಸದ್ಯದ ಪರಿಸ್ಥಿತಿಯಲ್ಲಿ ಮಕ್ಕಳ ಸಂರಕ್ಷಣೆ ಮತ್ತು ಅವರಿಗೆ ಪೂರಕವಾದ ವಾತಾವರಣವನ್ನು ಒದಗಿಸುವಲ್ಲಿ ಗಣನೀಯವಾಗಿ ಸೋತಿದ್ದೇವೆ. ಹಾಗೆಂದು ನಮ್ಮ ಸಾಧನೆ ಕಳಪೆ ಎಂದೆನಿಸಬೇಕಿಲ್ಲ, ಆದರೆ ಮಕ್ಕಳ ಕ್ಷೇತ್ರದಲ್ಲಿ ಇನ್ನೂ ಸಾಧಿಸಬೇಕಾದುದ್ದನ್ನು ಜ್ಞಾಪಿಸುವ ಸಮಯವೆಂದು ಭಾವಿಸಬೇಕು.

ಮಗು ಎಂದರೆ ಮುಗ್ದತೆ ಅದನ್ನು ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಹೇಳಿಕೆಯಂತೆ 'ಈ ಪ್ರಪಂಚದಲ್ಲಿ ನಾವು ನಿಜವಾದ ಶಾಂತಿಯನ್ನು ಹೊಂದಬೇಕಾದರೆ, ನಾವು ಮೊದಲು ಅದನ್ನು ಮಕ್ಕಳಿಂದ ಪ್ರಾರಂಭಿಸಬೇಕು. ಮಕ್ಕಳ ವಿಕಾಸವೇ ಸರ್ವಸ್ವ'. ನಮ್ಮ ಸರ್ಕಾರ ಅಧಿಕಾರ ಶಾಹಿ ಮಕ್ಕಳನ್ನು 'ಭವಿಷ್ಯದ ಪ್ರಜೆಯೆಂದು' ನೋಡುತ್ತಿದೆ. ಅದಕ್ಕೇನೇ ಅವರ ಹಕ್ಕುಗಳನ್ನು ಕೂಡ 'ನಾಳೆಗೆ ಕೊಟ್ಟರಾಯಿತು' ಎಂದು ಭಾವಿಸಿರಬೇಕು. ಸಂಖ್ಯೆಯಲ್ಲಿ ಭಲಾಢ್ಯವಾದ ಮಕ್ಕಳು ರಾಜಕೀಯವಾಗಿ ಅಶಕ್ತರೇ, ಮತದಾನ ಮಾಡಲು ಹದಿನೆಂಟು ವರ್ಷ ತುಂಬಬೇಕಾಗಿರುವುದರಿಂದ ಅವರ ಕೂಗೂ ಸಂಸತ್ತಿಗೆ ಮುಟ್ಟುವುದಿಲ್ಲ. ಸದ್ಯದಲ್ಲಿ ಕರ್ನಾಟಕವನ್ನು ಬಾಲ ಕಾರ್ಮಿಕ ಪದ್ಧತಿ ಮುಕ್ತ ರಾಜ್ಯವನ್ನಾಗಿ ಮಾಡಲಾಗುವುದು ಎಂದು ಘೋಷಿಸುತ್ತಲೇ ಇರುತ್ತೆವೆ ಆದರೆ ಕನಸು ನನಸಾಗುತ್ತಿಲ್ಲ. ತಂದೆ ತಾಯಿಯರ ಅಜ್ಞಾನ, ನಿರಾಸಕ್ತಿ, ಪ್ರೀತಿ–ವಾತ್ಸಲ್ಯ ಕಾಣದ ಮಕ್ಕಳು, ಮನೆಯಿಂದ ಗ್ರಾಮದಿಂದ ನಗರ, ಪಟ್ಟಣಗಳಿಗೆ ಓಡಿ ಹೋಗುವ ದುಸ್ಸಾಹಸಕ್ಕೆ ಕೈ ಹಾಕುತ್ತಾರೆ, ಹೊಟ್ಟೆ ಪಾಡಿಗಾಗಿ ಬಾಲ ಕಾರ್ಮಿಕನಾಗಿ ಕೆಟ್ಟ ಚಟ, ಸಂಘದೋಷದಿಂದಾಗಿ ಅಪರಾಧ ಕೃತ್ಯಗಳಿಗೆ ಕೈ ಹಾಕಿ ಕಾನೂನಿನ ಸಂಘರ್ಷಕ್ಕೆ ಸಿಲುಕಿ ತಮ್ಮ ಸುಂದರವಾದ ಬಾಲ್ಯದಿಂದ ವಂಚಿತರಾಗುತ್ತಾರೆಂದು ಹಾಗೂ ಶಾಲೆ ಬಿಟ್ಟ ಮಗು ಸಮಾಜ ಘಾತುಕ ಕಾರ್ಯದಲ್ಲಿ ತೊಡಗಿ ಸದೃಢ ಸಮಾಜಕ್ಕೆ ಕಂಟಕವಾಗುತ್ತಾರೆಂದು ವರದಿ ತಿಳಿಸುತ್ತವೆ ಕಾರಣ ಸರ್ಕಾರಿ ಶಾಲೆಗಳು ತಮ್ಮ ಕೆಲಸ ಸರಿಯಾಗಿ ಮಾಡಿದರೆ ಬಹಳಷ್ಟು ಸಮಸ್ಯೆಗಳು ನಿವಾರಣೆಯಾಗುತ್ತವೆ. 'ಈ ಪ್ರಪಂಚ ಮಕ್ಕಳೊಂದಿಗೆ ಹೊಂದಿರುವ ನಂಬಿಕೆಗಿಂತಲೂ ಪವಿತ್ರವಾದುದ್ದು ಮತ್ತೊಂದಿಲ್ಲ. ಮಕ್ಕಳ ಹಕ್ಕನ್ನು ಗೌರವಿಸುವ ಅವರ ಅಭಿವೃದ್ಧಿಯನ್ನು ರಕ್ಷಿಸುವ ಅವರು ಭಯ ಮುಕ್ತ ವಾತಾವರಣದಲ್ಲಿ ಶಾಂತಿಯೋದು ಬೆಳೆಯುವ ವ್ಯವಸ್ಥೆಯನ್ನು ಖಾತ್ರಿ ಪಡಿಸುವುದಕ್ಕಿಂತ ಬೇರೆ ಯಾವುದೇ ಕೆಲಸ ಮುಖ್ಯವಾಗಲಾರದು' ಎಂದು ಕೋಫಿ ಅನ್ನಾನ್ ಅವರ ಮಕ್ಕಳ ಬಗೆಗೆ ಇರುವ ಪ್ರೀತಿಯನ್ನು, ಕಾಳಜಿಯನ್ನು, ಕಾರ್ಯತಂತ್ರವನ್ನು ರೂಪಿಸಲು ಸಹಾಯಕವಾಗುತ್ತದೆ.

'ಜ್ಞಾನದ ಬಲಕ್ಕೆ ಅಜ್ಞಾನದ ಕೇಡು ನೋಡಯ್ಯ'ಎನ್ನುವಂತೆ ನಮ್ಮ ಭಾರತವು ಸರ್ವ ಜನಾಂಗದ ಶಾಂತಿಯ ತೋಟ ನಿರ್ಮಾಣವಾಗಬೇಕಾದರೆ ಶಿಕ್ಷಣವೇ ಶಕ್ತಿಯಾಗಿರುವುದರಿಂದ ಸಾಮಾಜಿಕ, ಆರ್ಥಿಕ, ನೈತಿಕ, ಭಾವನಾತ್ಮಕ ಬೆಸುಗೆಗೆ ಮಗುವಿನ ಸರ್ವಾಂಗೀಣ ಪ್ರಗತಿಗೆ ಶಿಕ್ಷಣವೇ ಮದ್ದಾಗಿರುವುದರಿಂದ ಮಕ್ಕಳು ವಿದ್ಯಾವಂತರಾಗಬೇಕು ಆಗ ಮಾತ್ರ ದೇಶ ಅಭಿವೃದ್ಧಿಯಾಗಲು ಸಾಧ್ಯ 14 ವರ್ಷದೊಳಗಿನ ಮಕ್ಕಳು ದುಡಿಮೆಗೆ ದೂಡಬಾರದು ಸರ್ಕಾರ ಇದಕ್ಕಾಗಿಯೇ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುತ್ತಿರುವುದಲ್ಲದೆ ಶಿಕ್ಷಣಕ್ಕೆ ಅತಿ ಹೆಚ್ಚಿನ ಅನುದಾನ ಖರ್ಚು ಮಾಡುತ್ತಿದೆ. ಇದನ್ನು ಮಕ್ಕಳು ಹಾಗೂ ಪೋಷಕರು ಉಪಯೋಗಿಸಬೇಕು.

ಮಕ್ಕಳ ಆರೋಗ್ಯಕ್ಕೆ ಹಾನಿಯುಂಟಾಗುವಂತಹ ಎಲ್ಲಾ ಉದ್ಯೋಗಗಳ ಆಧಾರದ ಮೇಲೆ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ದುಡಿಸಿಕೊಳ್ಳಬಾರದು. ಕೃಷಿ ತಾಂತ್ರಿಕ ಸಲಕರಣೆಗಳಾದ ಹೊಲ ಉಳುವ ಟ್ರ್ಯಾಕ್ಟರ್ ಚಾಲನೆ, ಬೆಳೆಗಳಿಗೆ ರಸಾಯನಿಕ, ಕ್ರೀಮಿನಾಶಕಗಳನ್ನು ಸಿಂಪಡಿಸುವುದು, ಹತ್ತಿ ಬೀಜ ಕ್ರಾಸಿಂಗ್ ಮಾಡುವುದು, ಕಲ್ಲು ಹೊಡಿಯುವುದು ಶಿಕಾರ್ಹ ಅಪರಾಧ 14 ರಿಂದ 18 ವರ್ಷದ ಒಳಗಿನವರಿಗೆ ನಿಷಿದ್ಧವೆಂದು 1986ರ ಬಾಲ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆಯ ತಿರುಳು. ದೇಶದಲ್ಲಿ ಇಂತ

ಕಠಿಣ ಕಾನೂನುಗಳಿದ್ದರೂ ಬಾಲಕಾರ್ಮಿಕ ಪದ್ಧತಿ ಜೀವಂತವಾಗಿರುವುದು ನಮ್ಮೆಲ್ಲರ ದುರ್ದೈವ, ಸಂವಿಧಾನಕ್ಕೆ ಮಾಡುವ ಅಪಚಾರ. ಅಂಕಿ ಅಂಶಗಳನ್ನು ಗಮನಿಸಿದರೆ ವರ್ಷದಿಂದ ವರ್ಷಕ್ಕೆ ಬದಲಾಗುತ್ತಿರುವ ಪ್ರಕರಣಗಳು ತಗ್ಗುತ್ತಿವೆ, ಹಾಗೆಂದು ಬಾಲ ಕಾರ್ಮಿಕ ಪದ್ಧತಿ ಕಡಿಮೆಯಾಗುತ್ತದೆ ಎಂದೇನೂ ಇಲ್ಲ ಅದು ಗ್ರಾಮೀಣ ಪ್ರದೇಶದಲ್ಲಿ ಹಾಗೂ ಸಣ್ಣ ಪುಟ್ಟ ನಗರಗಳಲ್ಲಿ ನಿರಂತರವಾಗಿ ನಡೆದಿದೆ.

ಬಾಲ ಕಾರ್ಮಿಕರನ್ನು ರಕ್ಷಿಸಿ ಪುನರ್ ವಸತಿ ಕಲ್ಪಸುವಲ್ಲಿ ಸರ್ಕಾರ ಹಗಲು ಸೇತುಬಂಧ ಶಾಲೆಗಳನ್ನು ಸ್ಥಾಪಿಸವೆ ಆದರೆ ಕೆಲಸ ತೃಪ್ತಿ ತಂದಿಲ್ಲ ಮುಂದಿನ ದಿನಗಲ್ಲಿ ವಸತಿಸಹಿತ ಶಾಲೆಗಳನ್ನಾಗಿ ಪರಿವರ್ತಿಸಬೇಕು. ಜೊತೆಗೆ ಪುನಃ ಶಾಲೆಯಿಂದ ಹೊರಗುಳಿಯುವದನ್ನು ತಡೆಗಟ್ಟಬೇಕು, ಸಾಧ್ಯ ಹಾಗೂ ಗುಣಮಟ್ಟದ ಶಿಕ್ಷಣ ನೀಡಲು ಭಾರತ ಸಂವಿಧಾನದ 6 ರಿಂದ 14 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣ ನೀತಿಯ ಪರಿಣಾಮಕಾರಿ ಯೋಜನೆಗಳಾದ ಮಧ್ಯಾನದ ಬಿಸಿಯೂಟ, ಉಚಿತ ಪಠ್ಯ ಪುಸ್ತಕ, ಶಿಷ್ಯವೇತನ, ಪ್ರೋತ್ಸಾಧನ, ವಸತಿ ನಿಲಯ, ವಸತಿಸಹಿತ ಶಾಲೆಗಳು ಹಾಗೂ ಇನ್ನಿತರ ಶೈಕ್ಷಣಿಕ ಸೌಲಭ್ಯದ ಅರಿವು ಮೂಡಿಸಲು ಜಾಗೃತಿ ಕಾರ್ಯಕ್ರಮ ಅಪಾಯಕಾರಿ ಅಲ್ಲದ ಕೆಲಸದಲ್ಲಿರುವ ಬಾಲಕಾರ್ಮಿಕರ ದುಡಿಯುವ ಸಮಯವನ್ನು ದಿನವೊಂದಕ್ಕೆ 5 ಗಂಟೆಗಳಿಗೆ ನಿಯಂತ್ರಿಸಬೇಕು ಮತ್ತು ಕನಿಷ್ಠ 2 ಗಂಟೆಗಳ ಕಾಲ ಶಿಕ್ಷಣ ಒದಗಿಸಬೇಕು. ಹಾಗೂ ದೌರ್ಜನ್ಯಕ್ಕೊಳಗಾದ ಮಕ್ಕಳ ರಕ್ಷಣೆ, ಪೋಷಣೆ, ಪಾಲನೆಗಾಗಿ ಬಾಲ ನ್ಯಾಯ ಕಾಯ್ದೆ, ಮಕ್ಕಳ ಸಹಾಯವಾಣಿ 1098. ಪ್ರತಿ ಜಿಲ್ಲೆಯಲ್ಲಿ ಮಕ್ಕಳ ಕಲ್ಯಾಣ ಸಮಿತಿ, ರಕ್ಷಣಾ ಘಟಕ, ಸೇತು ಬಂಧ ಶಾಲೆಗಳು, ನಮ್ಮ ದೇಶದ ಶ್ರೀ ಕೈಲಾಶ್ ಸತ್ಯಾರ್ಥಿಯವರು ಮಕ್ಕಳ ಹಕ್ಕುಗಳ ದುಡಿಮೆಗಾಗಿ ನೋಬೆಲ್ ಶಾಂತಿ ಪ್ರಶಸ್ತಿ ಬಂದುದ್ದು ಕೆಲಸ ಮಾಡುವವರಿಗೆ ಸ್ಪೂರ್ತಿಯಾಗಬೇಕು ಮತ್ತು ಮಾಸಿಕ ಪುಸ್ತಕ ಹರಳು ಮಲ್ಲಗೆಯಂತ ಯೋಜನೆಗಳನ್ನು ಜಾರಿಗೆ ಮಾಡಿವೆ.

18 ವರ್ಷದ ಒಳಗಿನ ಎಲ್ಲಾ ಮಕ್ಕಳು ಶಾಲಾ ಸಮಯದಲ್ಲಿ ಓದು, ಬರಹ, ಲೆಕ್ಕಚಾರ ಕಲಿಯುವ, ಆಟೋಟಗಳಲ್ಲಿ ಭಾಗವಹಿಸುವ, ಮನೋರಂಜನೆ ಪಡೆಯುವ, ಶಾಲಾ ವಾತಾವರಣದಲ್ಲಿ ಶಿಕ್ಷಕ ಸಮುದಾಯದಲ್ಲಿರಬೇಕು. ಮಕ್ಕಳು ದೇಹ ಮನಸ್ಸುಗಳಿಗೆ ತೊಂದರೆ ಮಾಡುವ ಯಾವುದೇ ಕೆಲಸದಲ್ಲಿ ತೊಡಗಬಾರದು. ಮಕ್ಕಳು ದುಡಿಯುತ್ತಿದ್ದಾರೆ ಎಂದರೆ ಅದು ಆ ಸಮೂದಾಯ, ಸ್ಥಳೀಯ ಸರ್ಕಾರ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತಲೆ ತಗ್ಗಿಸುವ ಸಂಗತಿ ಎಂದು 1989ರಲ್ಲಿ ವಿಶ್ವ ಸಂಸ್ಥೆಯು ಮಕ್ಕಳ ಒಡಂಬಡಿಕೆಯಲ್ಲಿ 'ಮಕ್ಕಳ ದುಡಿಮೆ ಬೇಡ' ಸಂಪೂರ್ಣವಾಗಿ ನಿಷೇಧಿಸಬೇಕು. ಹೆಣ್ಣು ಮಕ್ಕಳಿಗೆ ಶಾಲೆ ಬಿಡಿಸಿ ಹೊಲ ಗದ್ದೆ, ತೋಟ, ಮನೆ ಕೆಲಸಕ್ಕೆ ದೂಡುವುದು. ಹುಡುಗರನ್ನು ಹೋಟೆಲ್, ಗ್ಯಾರೇಜ್‌ಗಳಿಗೆ ಸೇರಿಸುವುದು. ತಮ್ಮ ಚಿಕ್ಕ ಪುಟ್ಟ ಕೆಲಸಗಳನ್ನು, ಮನೆಗೆಲಸಗಳಿಗೆ ಸಂಬಂಧಿಸಿದ ಕೆಲಸಗಳನ್ನು ಬಿಟ್ಟು ಹಣ ಸಂಪಾದನೆಗೆ ಒತ್ತಾಯಾಳಾಗಿ, ಅಡವಾಗುವುದು, ಜೀತದ ಹಣ ತೀರಿಸಲು ದುಡಿಯುವುದು ಅಪರಾಧವೆಂದು  ಶಾಲಾ ಸಮಯದಲ್ಲಿ ಯಾವುದೇ ಮಗು ಶಾಲೆಯ ಹೊರಗಿದ್ದಲ್ಲಿ ಆ ಬಗ್ಗೆ ಯಾರೇ ಆಗಲಿ ಪ್ರಶ್ನಿಸುವ, ವಿಚಾರಿಸುವ, ಸಂಪ್ರದಾಯ ಬೆಳೆಯಬೇಕು, ಬೆಳೆಸಬೇಕು ಇದು ನಮ್ಮೆಲ್ಲರ ಕರ್ತವ್ಯವು ಆಗಬೇಕು

# ಅಲೋಪತಿಯೇತರ ವೈದ್ಯರಿಗೆ ಸಾಮಾನ್ಯ ಶಸ್ತ್ರಚಿಕಿತ್ಸೆಗಳನ್ನು ನಿರ್ವಹಿಸಲು ಕೇಂದ್ರದ ಅವಕಾಶ - ಒಂದು ಅವಲೋಕನ

(Socioeconomic Research Article)

**ವಿಜಯ್ ಸರೋದೆ, ಸಿರವಾರ**
ಪತ್ರಕರ್ತ ಮತ್ತು ಪತ್ರಿಕೋದ್ಯಮ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

**ಪೀಠಿಕೆ:**

ಆಯುರ್ವೇದದ ಕೆಲವು ನಿರ್ದಿಷ್ಟ ವಿಭಾಗಗಳಲ್ಲಿ ಅಧ್ಯಯನ ಮಾಡಿರುವ ಸ್ನಾತಕೋತ್ತರ ಪದವೀಧರ ಆಯುಷ್ ವೈದ್ಯರಿಗೆ ಒಂದಷ್ಟು ಸರಳ ಶಸ್ತ್ರಚಿಕಿತ್ಸೆಗಳನ್ನು ಕೈಗೊಳ್ಳಲು ಬೇಕಾದ ತರಬೇತಿ ನೀಡಲು ಕೇಂದ್ರ ಸರ್ಕಾರ ಇತ್ತೀಚೆಗೆ ಅಧಿಸೂಚನೆಯೊಂದನ್ನು ಹೊರಡಿಸಿದೆ. ಹಾನಿಕರವಲ್ಲದ ಗೆಡ್ಡೆಗಳ ಛೇದನ, ಮೂಗು, ಕಿವಿ, ಗಂಟಲು ಮತ್ತು ಕಣ್ಣು ಸೇರಿದಂತೆ ಒಟ್ಟು 39 ಸರಳ ಶಸ್ತ್ರಚಿಕಿತ್ಸೆಗಳನ್ನು ಇದು ಒಳಗೊಂಡಿದ್ದು, ಸದ್ಯ ಈ ವಿಚಾರ ಆಧುನಿಕ ಶಸ್ತ್ರಚಿಕಿತ್ಸಕರ ಕೆಂಗಣ್ಣಿಗೆ ಕಾರಣವಾಗಿದೆ.
ಆಯುಷ್ ಸಚಿವಾಲಯದ ಅಡಿಯಲ್ಲಿ ಸ್ಥಾಪಿತವಾಗಿರುವ ಶಾಸನಬದ್ಧ ಸಂಸ್ಥೆಯಾದ 'ಸೆಂಟ್ರಲ್ ಕೌನ್ಸಿಲ್ ಆಫ್ ಇಂಡಿಯನ್ ಮೆಡಿಸಿನ್(CCIM)' ನವೆಂಬರ್-2020ರ ಗೆಜೆಟ್ ಅಧಿಸೂಚನೆಯಲ್ಲಿ 39 ಸಾಮಾನ್ಯ ಶಸ್ತ್ರಚಿಕಿತ್ಸೆಗಳು ಹಾಗೂ ಕಣ್ಣು, ಕಿವಿ, ಮೂಗು ಮತ್ತು ಗಂಟಲು ಒಳಗೊಂಡಂತೆ ಸುಮಾರು 19 ಶಸ್ತ್ರಚಿಕಿತ್ಸಾ ಕಾರ್ಯವಿಧಾನಗಳನ್ನು ಪಟ್ಟಿ ಮಾಡಿದ್ದು, ಇಂಡಿಯನ್ ಮೆಡಿಸಿನ್ ಸೆಂಟ್ರಲ್ ಕೌನ್ಸಿಲ್ (ಸ್ನಾತಕೋತ್ತರ ಆಯುರ್ವೇದ ಶಿಕ್ಷಣ) 2016ರ ನಿಯಮಗಳಿಗೆ ತಿದ್ದುಪಡಿ ಮಾಡಿದೆ. ಸರ್ಕಾರದ ಈ ನಿರ್ಧಾರಕ್ಕೆ ಆಧುನಿಕ ವೈದ್ಯಕೀಯ ವಿಜ್ಞಾನ ವೈದ್ಯರ ಅತಿದೊಡ್ಡ ಸಂಸ್ಥೆಯಾದ ಭಾರತೀಯ ವೈದ್ಯಕೀಯ ಸಂಘ ಹಾಗೂ ದೇಶಾದ್ಯಂತ ಅಲೋಪತಿ ವೈದ್ಯರಿಂದ ತೀವ್ರ ಟೀಕೆ ವ್ಯಕ್ತವಾಗಿದೆ. ಈ ಕ್ರಮವನ್ನು ಖಂಡಿಸಿರುವ IMA "ಹಿಂಬಾಗಿಲಿನ ಮೂಲಕ ಆಧುನಿಕ ವೈದ್ಯ ವಿಜ್ಞಾನವನ್ನು ಹತ್ತಿಕ್ಕುವುದು" ಮತ್ತು "ವ್ಯವಸ್ಥೆಗಳನ್ನು ಮಿಶ್ರಣ ಮಾಡುವ ಹಿಮ್ಮುಖ ಹೆಜ್ಜೆ" ಎಂದು ವಿವರಿಸಿದೆ. ಸದ್ಯ ಈ ಆದೇಶವನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿರುವ IMA, ತಮ್ಮ ಪ್ರಾಚೀನ ಗ್ರಂಥಗಳಿಂದ ತಮ್ಮದೇ ಆದ ಶಸ್ತ್ರಚಿಕಿತ್ಸಾ ವಿಧಾನಗಳನ್ನು ಅಭಿವೃದ್ಧಿಪಡಿಸಿಕೊಳ್ಳುವಂತೆ ಮತ್ತು ಆಧುನಿಕ ವೈದ್ಯಕೀಯದ ಶಸ್ತ್ರಚಿಕಿತ್ಸಾ ವಿಧಾನಗಳನ್ನು ಬಳಸಿಕೊಳ್ಳದಂತೆ ಒತ್ತಾಯಿಸಿದೆ.

**ವಿವರ:**

ಕಳೆದ ಕೆಲವು ದಶಕಗಳಲ್ಲಿ ವೈದ್ಯಕೀಯ ತಂತ್ರಜ್ಞಾನದಲ್ಲಾದ ಪ್ರಗತಿಯು ಗುಣಪಡಿಸಲಾಗದು ಎಂದು ಪರಿಗಣಿಸಲ್ಪಟ್ಟಿದ್ದ ಅದೆಷ್ಟೋ ರೋಗ/ಅನಾರೋಗ್ಯ ಪರಿಸ್ಥಿಗಳನ್ನು ಗುಣಪಡಿಸಲು ಸಾಧ್ಯ ಎನ್ನುವಂತೆ ಮಾಡಿದೆ. ಆದಾಗ್ಯೂ ಆ ಬಗೆಯ ಚಿಕಿತ್ಸೆಗಳ ವೆಚ್ಚವು ತುಂಬಾ ಹೆಚ್ಚಾಗಿದ್ದು, ಮಧ್ಯಮ  ವರ್ಗದ ವ್ಯಕ್ತಿಗೆ ಅವುಗಳನ್ನು ಭರಿಸಲು ಅಸಾಧ್ಯವಾಗಿದೆ. ಈಗಿನ ಕಾಲಸಂದರ್ಭದಲ್ಲಿ ತಪಾಸಣೆ, ವೈದ್ಯಕೀಯ ಪರೀಕ್ಷೆಗಳು, ಔಷಧಿಗಳು, ಶಸ್ತ್ರಚಿಕಿತ್ಸೆಗಳು ಎಲ್ಲವೂ ದುಂದುವೆಚ್ಚದ್ದಾಗಿರುವುದರಿಂದ(ಅವುಗಳಿಗಾಗಿ ಲಕ್ಷಾಂತರ ರೂಪಾಯಿ ಹಣವನ್ನು ಖರ್ಚು ಮಾಡಬೇಕಿರುವುದರಿಂದ) ಆರೋಗ್ಯ ಸೌಲಭ್ಯಗಳು ಮಹತ್ತರವಾಗಿ ವಿಕಸನಗೊಂಡಿದ್ದರೂ ಸಹ, ಅವುಗಳ ಕೈಗೆಟುಕುವಿಕೆಯು ಹೆಚ್ಚಿನ ಭಾರತೀಯರಿಗೆ ತಲುಪಲು ಸಾಧ್ಯವಿಲ್ಲ ಎಂಬುದು ಸದ್ಯದ ಪರಿಸ್ಥಿತಿ. ಜನ ಇವುಗಳೆಲ್ಲದರಿಂದ ಪಾರಾಗಲು ಇತ್ತೀಚೆಗೆ ಆರೋಗ್ಯ ವಿಮಾ ಪಾಲಿಸಿಗಳನ್ನು ಖರೀದಿಸುವ ಬಗ್ಗೆ ಬಗ್ಗೆ ಹೆಚ್ಚಿನ ಒಲವು ತೋರಿಸುತ್ತಿದ್ದಾರೆ.
2017ರ ಒಂದು ಅಂಕಿ-ಅಂಶದ ಪ್ರಕಾರ ಭಾರತದಲ್ಲಿ ಒಟ್ಟೂ 31,560 ಶಾಸ್ತ್ರಚಿಕಿತ್ಸಕರಿದ್ದಾರೆ. 140 ಕೋಟಿ ಜನಸಂಖ್ಯೆ ಇರುವ ದೇಶದಲ್ಲಿ ಆಧುನಿಕ ವೈದ್ಯಕೀಯ ಪದ್ಧತಿಯ(ಅಲೋಪತಿ) ವೈದ್ಯರಿರುವುದು ಕೇವಲ 12 ಲಕ್ಷ. ಅಂದರೆ ಸಾವಿರ ಜನಸಂಖ್ಯೆಗೆ 0.77 ವೈದ್ಯರು ಮತ್ತು ಲಕ್ಷ ಜನಕ್ಕೆ ಒಬ್ಬ ಶಸ್ತ್ರಚಿಕಿತ್ಸಕ ಮಾತ್ರ. ರೋಗಿಗಳು ಮತ್ತು ವೈದ್ಯರ ಸಂಖ್ಯೆಯಲ್ಲಿ ಹೀಗೆ ಅಜಗಜಾಂತರ ವ್ಯತ್ಯಾಸವಿರುವುದರಿಂದ  ಇರುವ ವೈದ್ಯರು ಮತ್ತು ಶಸ್ತ್ರಚಿಕಿತ್ಸಕರಿಗೆ ಅತಿಹೆಚ್ಚು ಬೇಡಿಕೆ ಇದೆ.  ಇತ್ತ ಸರ್ಕಾರಿ ಆಸ್ಪತ್ರೆಗಳಲ್ಲಿ ಹೇಳಿಕೊಳ್ಳಬಹುದಾದಂತಹ ಗುಣಮಟ್ಟದ ಚಿಕಿತ್ಸೆ ಲಭ್ಯವಿಲ್ಲದೇ, ಸಣ್ಣ-ಪುಟ್ಟ ಕಾಯಿಲೆಗಳಿಗೆ ಮಾತ್ರ ಅಲ್ಲಿ ತಪಾಸಣೆ ಮತ್ತು ಚಿಕಿತ್ಸೆ ಮಾಡಿಸಲು ಸಾಧ್ಯ ಎನ್ನುವ ಪರಿಸ್ಥಿತಿ ಇರುವುದರಿಂದ ಗಂಭೀರ ಪರಿಸ್ಥಿತಿಗಳಲ್ಲಿ ಅನಿವಾರ್ಯವಾಗಿ ಖಾಸಗಿ ಆಸ್ಪತ್ರೆಗಳ ಕಡೆ ಮುಖ ಮಾಡಬೇಕಾದದು ರೋಗಿಗಳ ಪರಿಸ್ಥಿತಿಯಾಗಿದೆ. ಇದರ ಲಾಭ ಪಡೆಯುತ್ತಿರುವ ಖಾಸಗಿ ಆಸ್ಪತ್ರೆಗಳು ತಮ್ಮ ಸೇವೆಗೆ ಅತಿಹೆಚ್ಚಿನ ಶುಲ್ಕ ವಿಧಿಸುವ ಮೂಲಕ, ಇದನ್ನೇ ಹಣ ಮಾಡುವ ಒಂದು ದೊಡ್ಡ ದಂಧೆಯನ್ನಾಗಿಸಿಕೊಂಡಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ.

ಈ ಎಲ್ಲ ಕಾರಣಕ್ಕೆ ಗುಣಮಟ್ಟದ ತಪಾಸಣೆ ಮತ್ತು ಚಿಕಿತ್ಸೆಗಳಿರುವುದು ಕೇವಲ ಉಳ್ಳವರಿಗೆ ಮಾತ್ರ ಅನ್ನುವ ಸ್ಥಿತಿ ಹೆಚ್ಚುಕಮ್ಮಿ ಇಡೀ ದೇಶದಲ್ಲಿಯೇ ನಿರ್ಮಾಣವಾಗಿದೆ. ಇದರ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೂ ಹೆಚ್ಚಾಗಿ ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಎಲ್ಲಾ ಸೌಲಭ್ಯಗಳಿವೆ, ದೊಡ್ಡ-ದೊಡ್ಡ ತಪಾಸಣೆ ಮತ್ತು ಶಸ್ತ್ರಚಿಕಿತ್ಸೆಗಳನ್ನೂ ಮಾಡುತ್ತಿದ್ದೇವೆ ಎಂದು ಅಧಿಕಾರದಲ್ಲಿರುವವರು ಆಗಾಗ ಪತ್ರಿಕಾ ಹೇಳಿಕೆಗಳನ್ನು ನೀಡುವ ಮೂಲಕ ಪ್ರಚಾರ ಪಡೆಯುತ್ತಾರಾದರೂ, ಆಸ್ಪತ್ರೆಗಳಿಗೆ ಹೋದಾಗ ಅಲ್ಲಿಯ ವಾಸ್ತವತೆಯೇ ಬೇರೆಯಾಗಿರುತ್ತದೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಭರವಸೆಯ ಸೇವೆ/ಚಿಕಿತ್ಸೆ ಇಲ್ಲದಿರುವುದು, ಅಲ್ಲಿಯ ವೈದ್ಯರು ಮತ್ತು ಅರೆವೈದ್ಯಕೀಯ ಸಿಬ್ಬಂದಿಗಳು ಕೇವಲ ಸರ್ಕಾರ ನೀಡುವ ಸಂಬಳವನ್ನು ಎಣಿಸುತ್ತಾ ರೋಗಿಗಳ ಸ್ಥಿತಿ-ಗತಿಯ ಬಗ್ಗೆ ಮರುಕಪಟ್ಟುಕೊಳ್ಳದೇ ಅತ್ಯಂತ ನಿಷ್ಕಾಳಜಿಯಿಂದ ವರ್ತಿಸುವುದರಿಂದ, ಜೀವ ಉಳಿದರೆ ಸಾಕು, ಅಲ್ಲಿಯ ಅವ್ಯವಸ್ಥೆಯ ಸಹವಾಸವೇ ಬೇಡ ಎಂದು ಯೋಚಿಸುವ ಎಷ್ಟೋ ಜನ/ರೋಗಿಗಳು ಆ ಕಡೆ ಸುಳಿಯುವುದೂ ಇಲ್ಲ. ಖಾಸಗಿ ಆಸ್ಪತ್ರೆಗಳು ಈ ಪರಿಸ್ಥಿತಿ ಹಾಗೂ ಜನರ ಯೋಚನೆಯ ಲಾಭ ಪಡೆಯುತ್ತಿದ್ದು, ತಮ್ಮ ಸೇವೆಗೆ ಅತಿಹೆಚ್ಚು ಶುಲ್ಕ ವಿಧಿಸುವ ಜೊತೆಗೆ ಬೇಕಾದ-ಬೇಡವಾದ ಔಷಧಿಗಳು ಹಾಗೂ ತಪಾಸಣಾ ಪರೀಕ್ಷೆಗಳನ್ನು ಬರೆದು ಜನರ ರಕ್ತ ಹೀರುತ್ತಿವೆ. ಒಬ್ಬ ರೋಗಿ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾದನೆ/ಳೆಂದರೆ, ಬಿಲ್ ಕೌಂಟರ್ನಲ್ಲಿ ಹಣ ತುಂಬಿ-ತುಂಬಿ, ಗಳಿಸಿರುವ-ಉಳಿಸಿರುವ ಹಣ ಕಳೆದುಕೊಂಡು ಆ ಕುಟುಂಬದ ಉಳಿದವರು ದೈಹಿಕವಾಗಿ ಹಾಗೂ ಮಾನಸಿಕವಾಗಿ ರೋಗಿಗಳಾಗಿ ಬದಲಾಗಿರುತ್ತಾರೆ. ಒಬ್ಬ ಸರ್ಕಾರಿ ಅಥವಾ ಖಾಸಗಿ ನೌಕರ 40 ವರ್ಷ ಕಷ್ಟಪಟ್ಟು ದುಡಿದು ಒಂದಷ್ಟು ಆಸ್ತಿ-ಹಣ ಸಂಪಾದನೆ ಮಾಡಿದ್ದರೆ, ಅದೇ ಕುಟುಂಬದ ಯಾರಾದರು ಪ್ರಮುಖರು ಖಾಸಗಿ ಆಸ್ಪತ್ರೆಗೆ ಗಂಭೀರ ಕಾಯಿಲೆಯ ಚಿಕಿತ್ಸೆಗೆಂದು ದುರದೃಷ್ಟವಶಾತ್ ದಾಖಲಾದರೆ ಕೇವಲ ಒಂದು ವರ್ಷದಲ್ಲಿ ಅವರ 40 ವರ್ಷದ ಉಳಿತಾಯವನ್ನು ನುಂಗಿ-ನೀರುಕುಡಿದುಬಿಡುತ್ತವೆ(ದೇಶದಲ್ಲಿ ಈ ರೀತಿಯ ಪರಿಸ್ಥಿತಿ ಇರೋದಕ್ಕೇ ಆರೋಗ್ಯ ವಿಮೆಗೆ ಬೇಡಿಕೆ ಬಂದಿರುವುದು. ಜನ ತಮಗೆ ಇಷ್ಟವಿಲ್ಲದಿದ್ದರೂ ಸಂಭಾವ್ಯ ಪರಿಸ್ಥಿತಿಗೆ ಹೆದರಿ ಪ್ರತಿ ವರ್ಷ ಹತ್ತಾರು ಸಾವಿರ ರೂಪಗಳನ್ನು ವಿಮಾ ಕಂಪನಿಗಳ ಪಾಲುಮಾಡುತ್ತಿದ್ದಾರೆ). ಭಾರತದ ಆರೋಗ್ಯ ಕ್ಷೇತ್ರದಲ್ಲಿ ಸರ್ಕಾರಿ ಆಸ್ಪತ್ರೆಗಳ ಪರಿಸ್ಥಿತಿ, ಖಾಸಗಿ ಆಸ್ಪತ್ರೆಗಳ ಲೂಟಿ, ಔಷಧ ಕಂಪನಿಗಳ ಲಾಭಿ ಒಂದುಕ್ಕೊಂದು ಬೆಸೆದುಕೊಂಡು ಒಂದು ಮಾಫಿಯಾ ರೀತಿಯಲ್ಲಿ ಬೆಳೆದುನಿಂತಿದೆ. ಆದರೆ ಸರ್ಕಾರ ಮಾತ್ರ ಈ ಬಗ್ಗೆ ಗಂಭೀರವಾಗಿ ಚಿಂತಿಸದೇ, ಲೂಟಿಗೆ ಕಡಿವಾಣ ಹಾಕುವ ಕಠಿಣ ಕಾನೂನನ್ನು ಜಾರಿಗೊಳಿಸದೇ ಜಾಣಕುರುಡುತನ ಪ್ರದರ್ಶಿಸುತ್ತಿರುವು ದುರದೃಷ್ಟಕರ(ತಾತಾ ಗಳಿಸಿದ್ದು ಮೊಮ್ಮಕ್ಕಳಿಗೆ ಅನ್ನೋ ಹಳೆಯ ಗಾದೆಯಂತೆ, ನಾವು-ನೀವೂ ಗಳಿಸಿದ್ದು ವೈದ್ಯರ ಬಾಯಿಗೆ ಅನ್ನೋ ಹೊಸ ಗಾದೆ ಬರಬಹುದು).

**ಪರ್ಯಾಯ ಚಿಕಿತ್ಸಾ ಪದ್ಧತಿಗಳಿಗೆ ಸೇವಾ ಅವಕಾಶ ಅಗತ್ಯ:**

ಈ ಎಲ್ಲವನ್ನೂ ನೋಡಿ ಇತ್ತ ವೈದ್ಯರು ಮತ್ತು ರೋಗಿಗಳ ಸಂಖ್ಯೆ ವಿಚಾರಕ್ಕೆ ಬಂದಾಗ, ಮೇಲೆ ಹೇಳಿರುವ ಅಂಕಿ-ಅಂಶಗಳಲ್ಲಿ ಸುಧಾರಣೆಗೆ ತರಲು ಹತ್ತಾರು ವರ್ಷಗಳೇ ಬೇಕಾಗಬಹುದು, ಇನ್ನು ಸುಧಾರಣೆ ಎಂದು ಭಾವಿಸುವಷ್ಟರಲ್ಲಿ ಜನಸಂಖ್ಯೆ ಇನ್ನೂ ಎಲ್ಲಿಗೆ ಬಂದು ತಲುಪುತ್ತೋ ಗೊತ್ತಿಲ್ಲ. ಹಾಗಾಗಿ ಅಲೋಪತಿ ವೈದ್ಯ ಪದ್ಧತಿಯನ್ನೇ ನಂಬಿಕೊಂಡು ದೇಶದ ಆರೋಗ್ಯ ಪರಿಸ್ಥಿತಿಯನ್ನು ಸುಧಾರಿಸುತ್ತೇವೆ ಅನ್ನೋದು ನಂಬಲಸಾಧ್ಯ ಸಂಗತಿ. 140 ಕೋಟಿ ಜನಸಂಖ್ಯೆ ಇರುವ ದೇಶದಲ್ಲಿ, ಇರುವ ವೈದ್ಯರನ್ನೇ ನೆಚ್ಚಿ ನಾವು ಕ್ಯೂನಲ್ಲಿ ನಿಲ್ತೀವಿ ಅಂದ್ರೆ, ಕನಿಷ್ಠ ವೈದ್ಯನ ಮುಖವನ್ನೂ ನೋಡದೇ ಲಕ್ಷಾಂತರ ಜನ ಚಿಕಿತ್ಸೆ ಇಲ್ಲದೇ ಸತ್ತುಹೋಗಬಹುದು.

ಈ ಎಲ್ಲಾ ಪರಿಸ್ಥಿತಿ ಅವಲೋಕಿಸಿದಾಗ ಆಯುರ್ವೇದ ವೈದ್ಯ ಪದ್ಧತಿಯ ಶಲ್ಯ ಮತ್ತು ಶಲಾಕದಲ್ಲಿ (ಶಸ್ತ್ರಚಿಕಿತ್ಸಾ ಪದ್ಧತಿ) ಸ್ನಾತಕೋತ್ತರ ವೈದ್ಯ ಪದವಿ ಪೂರೈಸಿದವರಿಗೆ ಸೆಂಟ್ರಲ್ ಕೌನ್ಸಿಲ್ ಆಫ್ ಇಂಡಿಯನ್ ಮೆಡಿಸಿನ್ (ಸಿಸಿಐಎಂ) ಒಂದಷ್ಟು ಸಾಮಾನ್ಯ ಶಸ್ತ್ರಚಿಕಿತ್ಸೆಗಳನ್ನು ಮಾಡಲು ಅವಕಾಶ ಮಾಡಿರುವುದು ತಪ್ಪೇನೂ ಅಲ್ಲ. ಹಾಗೆ ನೋಡಿದರೆ ಇಂಗ್ಲೀಷ್ ಮೆಡಿಸಿನ್ ಎಂದು ಕರೆಯುವ ಅಲೋಪತಿ ವೈದ್ಯಪದ್ಧತಿ ಬರುವುದಕ್ಕಿಂತ ನೂರಾರು ವರ್ಷಗಳ ಹಿಂದೆಯೇ ಆಯುರ್ವೇದ, ಹೋಮಿಯೋಪತಿ, ಸಿದ್ಧ, ಯುನಾನಿಯಂತಹ ಅನೇಕ ವೈದ್ಯ ಪದ್ಧತಿಗಳು ಜನ್ಮ ತಾಳಿವೆ. ಸಾವಿರಾರು ವರ್ಷಗಳ ಹಿಂದಿನಿಂದಲೂ ಭಾರತದ ನಮ್ಮ ಆಯುರ್ವೇದ ಜನರ ಆರೋಗ್ಯ ಕಾಪಾಡಿಕೊಂಡುಬರುತ್ತಿದೆ.

ಇಷ್ಟೆಲ್ಲಾ ಇದ್ದು, ಆಯುರ್ವೇದದಂತಹ ವೈದ್ಯಪದ್ಧತಿಯವರಿಗೆ(ಅದೂ ಶಲ್ಯ ಮತ್ತು ಶಲಾಕದಲ್ಲಿ ಸ್ನಾತಕೋತ್ತರ ಪದವಿ ಮಾಡಿದವರು) ಸಾಮಾನ್ಯ ಶಸ್ತ್ರಚಿಕಿತ್ಸೆಗಳನ್ನು ಮಾಡಲು ಅವಕಾಶ ಮಾಡಿಕೊಡುವ ಸರ್ಕಾರದ ನಿರ್ಧಾರವನ್ನು ಭಾರತೀಯ ವೈದ್ಯಕೀಯ ಸಂಘ(ಇಂಡಿಯನ್ ಮೆಡಿಕಲ್ ಅಸೋಸಿಯೇಶನ್) ಪ್ರಶ್ನಿಸುತ್ತಿರುವುದು ಎಷ್ಟರ ಮಟ್ಟಿಗೆ ಸರಿ? ಅದು ಜನ ಮತ್ತು ದೇಶದ ಆರೋಗ್ಯ ಕ್ಷೇತ್ರದ ಬಗ್ಗೆ ಕಾಳಜಿ-ಜವಾಬ್ದಾರಿ ಹೊತ್ತಿರುವ ಸಂಸ್ಥೆಯಾಗಿದ್ದರೂ ಕೂಡ ಈ ಬಗೆಯ ಸಕಾರಾತ್ಮಕ ಬದಲಾವಣೆ ನಿರ್ಧಾರಗಳನ್ನು ವಿರೋಧಿಸಿದ್ದು ಅಲೋಪತಿಯೇತರ ವೈದ್ಯರಲ್ಲಿ ಅಸಮಾಧಾನ ಜೊತೆಗೆ ಸಾತ್ವಿಕ ಸಿಟ್ಟನ್ನು ಹುಟ್ಟುಹಾಕಿದೆ. "ಯಾವ ವೈದ್ಯನೇ ಆಗಿರಲಿ ಅಥವಾ ಶಸ್ತ್ರಚಿಕಿತ್ಸಕನೇ ಆಗಲಿ Practice ಮಾಡುತ್ತಾ-ಮಾಡುತ್ತಾನೇ ತನ್ನ ಚಿಕಿತ್ಸಾ ಜ್ಞಾನ ಮತ್ತು ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವುದು. ಬೇರೆ ವೈದ್ಯಕೀಯ ಪದ್ಧತಿಯವರಿಗೆ ಅವಕಾಶಗಳನ್ನು ಮಾಡಿಕೊಟ್ಟರೆ, ಅವರೂ ತಮ್ಮ ಕ್ಷೇತ್ರದಲ್ಲಿ ಮುಂದೆ ಬರಲು ಅವಕಾಶವಾಗುವ ಜೊತೆಗೆ ಜನಸಾಮಾನ್ಯರಿಗೆ ಚಿಕಿತ್ಸೆ ಇನ್ನಷ್ಟು ಹತ್ತಿರವಾಗಿ ಕೈಗೆಟಕುವಂತಾಗುತ್ತೆ(ಅವಕಾಶ ನೀಡುತ್ತಿರುವುದು ಸಣ್ಣ ಮತ್ತು ಸಾಮಾನ್ಯ ಚಿಕಿತ್ಸೆಗಳಿಗೆ, ಅತ್ಯಾಧುನಿಕ ಚಿಕಿತ್ಸಾ ಸಾಧನ ಮತ್ತು ಪರಿಣಿತಿ ಬಯಸುವ ಗಂಭೀರ ಚಿಕಿತ್ಸೆಗಳಿಗಲ್ಲ). ಹೀಗೆ ಯೋಚಿಸುವ ಬದಲು, ಎಲ್ಲವನ್ನೂ ನಾವೇ ಮಾಡುತ್ತೇವೆ, ಬೇರೆಯವರಿಗೆ ಅವಕಾಶ ಮಾಡಿಕೊಡಬೇಡಿ, ರೋಗಿಗಳಿಗೆ ಅದೆಷ್ಟೇ ತೊಂದರೆಯಾಗಲಿ, ನಮ್ಮ ಅಲೋಪತಿನೇ ಶ್ರೇಷ್ಠ,

ಉಳಿದದ್ದೆಲ್ಲಾ ಕನಿಷ್ಠ ಎನ್ನುವ ರೀತಿ ವರ್ತಿಸುವುದು ಮತ್ತು ಆ ಬಗೆಯ ಮನೋಭಾವದ ಪ್ರೋತ್ಸಾಹಕ್ಕೆ ಅವಕಾಶ ಮಾಡಿಕೊಡುವುದು ಸರಿಯಲ್ಲ. ಈ ಬಗೆಯ ಮಾತು-ನಡೆ ಏಕಸ್ವಾಮ್ಯತೆಯ ಲಕ್ಷಣಗಳಂತೆ ತೋರುತ್ತವೆ". ಎಂದು ರಾಯಚೂರು ಜಿಲ್ಲೆ ಸಿರವಾರ ತಾಲೂಕ ಆಸ್ಪತ್ರೆಯ ಆಯುಷ್ ವೈದ್ಯಾಧಿಕಾರಿಯಾಗಿರುವ ಡಾ. ಸುನೀಲ್.ಕೆ.ಎಸ್ ಅಭಿಪ್ರಾಯಪಟ್ಟಿದ್ದಾರೆ.

**ಉಪಸಂಹಾರ:**

ರೋಗಿಯ ಸೇವೆಯೇ ನನ್ನ ಪ್ರಧಾನ ಮನೋಧರ್ಮ ಎಂದು ವೈದ್ಯ ವಿದ್ಯಾರ್ಥಿ ಹಂತದಲ್ಲಿ ಪ್ರಮಾಣವಚನ ಸ್ವೀಕರಿಸುವ ಇವರು, ಅಗತ್ಯವಿದ್ದಲ್ಲಿ ಅದೇ ರೋಗಿಯನ್ನು ಕಾಪಾಡಲು ಬೇರೆಯವರಿಗೂ ಅವಕಾಶ ಮಾಡಿಕೊಡಬೇಕೆಂದು ಕನಿಷ್ಠ ಮಾನವೀಯತೆ ತೋರಬೇಕಲ್ಲವೇ? ಭಾರತೀಯ ವೈದ್ಯಕೀಯ ಸಂಘ ಹೀಗೆ ತಾನೇ ಪ್ರಧಾನ ಎಂದು ಸಾರಿಕೊಳ್ಳುವ ಅಥವಾ ಸುಧಾರಣೆಯ ಪ್ರತಿ ಹೊಸ್ತಿಲಲ್ಲಿ ಸರ್ಕಾರ ಮಟ್ಟದಲ್ಲಿ ಲಾಭಿ ಮಾಡುವ ಮನಸ್ಥಿತಿಯಿಂದ ಹೊರಬರದಿದ್ದರೆ ದೇಶದ ಆರೋಗ್ಯ ಕ್ಷೇತ್ರದ ಸ್ಥಿತಿ ಇನ್ನಷ್ಟು ಹದಗೆಟ್ಟು, ಲಕ್ಷಾಂತರ ಜನ ಪರಿಪರಿಯಾಗಿ ಒದ್ದಾಡಿ ಸಾಯುವುದಂತೂ ಖಂಡಿತ. ಭಾರತೀಯ ವೈದ್ಯ ಸಂಘವಾಗಲಿ ಅಥವಾ ಬೇರಾವುದೇ ಸಂಸ್ಥೆಯಾಗಲಿ ದೇಶ ಸೇವೆ ಮುಖ್ಯವಾಗಬೇಕು, ಕೇವಲ ತಮ್ಮ ಸದಸ್ಯರ ಏಳಿಗೆಯಲ್ಲ. ಆಧುನಿಕ ವೈದ್ಯಪದ್ಧತಿಯೇ ಶ್ರೇಷ್ಠ ಎಂದು ಕೋಟೆ ಕಟ್ಟಿಕೊಂಡು ಕುಳಿತಿರುವವರಿಂದಲೇ ಇಂದು ಆಯುರ್ವೇದ, ಯುನಾನಿ, ಹೋಮಿಯೋಪತಿ, ಯೋಗವಿಜ್ಞಾನದಂತ ಅನೇಕ ಸಾಂಪ್ರದಾಯಿಕ ವೈದ್ಯಪದ್ಧತಿಗಳು ಹಿಂದುಳಿಯುವ ಜೊತೆಗೆ ಹೆಚ್ಚಿನ ಅನುದಾನ-ಪ್ರೋತ್ಸಾಹಗಳಿಲ್ಲದೇ ತಮ್ಮ ಸಂಶೋಧನಾ ಕೇಂದ್ರಗಳ ಬಾಗಿಲು ಮುಚ್ಚಿ ಕುಳಿತಿವೆ. ಇನ್ನೂ ಸ್ವಲ್ಪ ದಿನ ಹೀಗೇ ಬಿಟ್ಟರೆ, ಇತಿಹಾಸದ ಪುಸ್ತಕಗಳಲ್ಲಿ ಈ ರೀತಿಯ ವೈದ್ಯಪದ್ಧತಿಯೊಂದಿತ್ತು ಎಂದು ಓದಿ ತಿಳಿಯಬೇಕಾದ ಪರಿಸ್ಥಿತಿ ಬಂದರೂ ಆಶ್ಚರ್ಯವಿಲ್ಲ. ಅಲೋಪತಿಯೇ ಶ್ರೇಷ್ಠ ಎಂದು ಸಾರುತ್ತಾ, ಬೇರೆ ವೈದ್ಯ ಪದ್ಧತಿಗಳ ಬೆಳವಣಿಗೆಗೆ ಕಡಿವಾಣ ಹಾಕುವ ಯಾವುದೇ ಸಂಘ-ಸಂಸ್ಥೆಯಾಗಿರಲಿ, ಅಂಥವರ ಮನಸ್ಥಿತಿ ಮತ್ತು ಸ್ವಾರ್ಥದ ವಿರುದ್ಧ ಹೋರಾಡಲು ಉಳಿದ ವೈದ್ಯ ಪದ್ಧತಿಯವರೂ ತಮ್ಮ-ತಮ್ಮ ಪ್ರಧಾನ ಸಂಸ್ಥೆಗಳ ಮೂಲಕ ಒಕ್ಕೊರಲಿನ ಧ್ವನಿ ಎತ್ತಬೇಕಿದೆ, ದೇಶದ ಆರೋಗ್ಯ ಕ್ಷೇತ್ರದ ಸುಧಾರಣೆಗೆ ನಮ್ಮದೂ ಪಾಲಿದೆ ಎಂಬ ಗಟ್ಟಿತನ ತೋರಬೇಕಿದೆ.

**ಗ್ರಂಥಸೂಚಿ:**

1) 'ದಿ ಹಿಂದೂ' ದಿನಪತ್ರಿಕೆ ಲೇಖನ: "Surgery by Ayurveda students | IMA demands withdrawal of amendments" - November 24, 2020

2) 'ದಿ ಪ್ರಿಂಟ್' ಅಂತರ್ಜಾಲ ಲೇಖನ: "No point mixing all in one — IMA to fight govt move to allow Ayurveda doctors to do surgery" - December 8, 2020

3) 'ದಿ ಎಕನಾಮಿಕ್ಸ್ ಟೈಮ್ಸ್' ಲೇಖನ: "Khichdificationn of medical education, practice: IMA on surgery nod for Ayurveda" - November 24, 2020

# ಉದ್ಯೋಗ ಖಾತ್ರಿ ಯೋಜನೆ ಮಹಿಳಾ ಪ್ರತಿಭಟನೆಯ ನೆಲೆಗಳು

**ಡಾ. ಭೀಮೇಶ್ ಮಾಚನೂರು**

ಮಹಿಳಾ ಅಧ್ಯಯನ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ಯರಗೇರಾ ರಾಯಚೂರು 584133

ಮೊಬೈಲ್ ನಂ: 9740372828

E mali ID: bheemeshdore@gmail.com

ಭಾರತದಲ್ಲಿ ಉದ್ಯೋಗ ಖಾತರಿ ಯೋಜನೆಯು ಜಾರಿಗೆ ಬಂದು ಸುಮಾರು 17 ವರ್ಷಗಳು ಕಳೆದಿವೆ. ಉದ್ಯೋಗ ಖಾತರಿ ಯೋಜನೆಯು ಕೂಲಿಕಾರ್ಮಿಕರಿಗೆ, ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ತುಂಬಾ ಅನುಕೂಲಗಳನ್ನು ಒದಗಿಸಿಕೊಟ್ಟಿದೆ. ಈ ಯೋಜನೆಯು ಕುಶಲವಲ್ಲದ ಅಕುಶಲ ಕೆಲಸವನ್ನು ಬಯಸಿ ಬರುವಂತ ಪ್ರತಿಯೊಂದು ಕುಟುಂಬಕ್ಕೆ ನೂರು ದಿನಗಳ ಕೆಲಸ ನೀಡುತ್ತದೆ. ಹಾಗೆಯೇ ಸಣ್ಣ ಮತ್ತು ಅತೀ ಸಣ್ಣ ರೈತರ ಜಮೀನಿನಲ್ಲಿ ಕೃಷಿ ಹೊಂಡಗಳನ್ನು, ಗಿಡ ನೆಡುವುದು, ಚೆಕ್‌ಡ್ಯಾಮ್, ಬದು ನಿರ್ಮಾಣ, ಭೂಮಿ ಸಮತಟ್ಟು ಮಾಡುವುದು ಇನ್ನು ಮುಂತಾದ ಕೆಲಸಗಳನ್ನು ಮಾಡಿಸಲು ಅವಕಾಶವನ್ನು ಒದಗಿಸಿಕೊಟ್ಟಿದೆ. ಈ ಕಾರಣಗಳಿಗಾಗಿ ಯೋಜನೆಯು ಏಕ ಕಾಲದಲ್ಲಿ ಬಡ ಕೂಲಿಕಾರರಿಗೂ ಮತ್ತು ಸಣ್ಣ, ಅತೀ ಸಣ್ಣ ರೈತರಿಗೂ ಒಂದು ವರದಾನವಾಗಿ ಪರಿಣಮಿಸಿದೆ. ಯೋಜನೆಯ ಮುಖ್ಯ ಉದ್ದೇಶ ಗ್ರಾಮೀಣ ಭಾಗದ ಜನರು ಉದ್ಯೋಗವನ್ನರಸಿ ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಪ್ಪಿಸುವುದರ ಸಲುವಾಗಿ ಮತ್ತು ಸಮಾಜದಲ್ಲಿನ ಲಿಂಗ ತಾರತಮ್ಯವನ್ನು ಹೋಗಲಾಡಿಸಲು ಜಾರಿಯಾದ ಈ ಯೋಜನೆ ಅದರ ಗುರಿ ಮುಟ್ಟಿದೆಯೇ ಎಂಬುದನ್ನು ಅವಲೋಕಿಸಿದರೆ, ಫಲಿತಾಂಶ ಮಾತ್ರ ಸಮಾಧಾನಕರವಾಗಿಲ್ಲದಿರುವುದು ಕಂಡುಬರುತ್ತದೆ. ಏಕೆಂದರೆ ಗ್ರಾಮೀಣ ಭಾಗದ ಸ್ಥಳೀಯ ರಾಜಕೀಯ ವ್ಯಕ್ತಿಗಳ ರಾಜಕಾರಣಕ್ಕೆ ಸಿಲುಕಿ ಈ ಯೋಜನೆಯ ಆಶಯ ಈಡೇರದಿರುವುದು ಅತ್ಯಂತ ಶೋಚನೀಯ ಸಂಗತಿಯಾಗಿದೆ.

ಕೊಪ್ಪಳ ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ಬೂದಗುಂಪಾ ಇಂದರಗಿ, ಇಂಕಲಗೇಡಾ ಹಾಸಗಲ್ ಮತ್ತು ಹಿರೇಬಗನಾಳ್ ಗ್ರಾಮ ಪಂಚಾಯತಿಗಳು ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ರಾಜ್ಯಾದ್ಯಂತ ಪ್ರಖ್ಯಾತಿಯನ್ನು ಪಡೆದವು. ಅಂದರೆ ಇಲ್ಲಿ ಉದ್ಯೋಗ ಖಾತರಿ ಯೋಜನೆಯ ಸರಿಯಾದ ಅನುಷ್ಠಾನಕ್ಕಾಗಿಯಲ್ಲದೆ, ಈ ಯೋಜನೆಯಲ್ಲಿ ಆದಂತಹ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಮತ್ತು ಯೋಜನೆಯ ಫಲಾನುಭವಿಗಳ ಮೇಲೆ ನಡೆದ ಲಾಠೀ ಚಾರ್ಜ್‌ನ ಕಾರಣಕ್ಕಾಗಿ ರಾಜ್ಯವ್ಯಾಪಿ ಹೆಸರನ್ನು ಪಡೆದುಕೊಂಡಿತು. ಈ ಕಾರಣಕ್ಕಾಗಿ ಈ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ವಾಸ್ತವ ಸ್ಥಿತಿಯನ್ನು ತಿಳಿಯುವುದರ ಸಲುವಾಗಿ ಕ್ಷೇತ್ರಕಾರ್ಯವನ್ನು ಕೈಗೊಂಡು ಮಾಹಿತಿಯನ್ನು ಸಂಗ್ರಹಿಸಲಾಯಿತು. ಬಹಳ ಮುಖ್ಯವಾಗಿ ಈ ಲೇಖನದಲ್ಲಿ ಯೋಜನೆಯ ಫಲಾನುಭವಿಗಳ ಅನುಭವಗಳನ್ನು ಅವರ ಮಾತುಗಳಲ್ಲಿಯೇ ವಿವರಿಸಿಕೊಳ್ಳುವುದರ ಮೂಲಕ ಲೈಂಗಿಕತಾವಾದಿಯಲ್ಲದ, ಗುಣಾತ್ಮಕ ಸಂಶೋಧನಾ ವಿಧಾನದಿಂದ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಇದು ಲೇಖನದ ಮಿತಿಯೂ ಆಗಿದೆ.

ಮೇಲೆ ತಿಳಿಸಿದ ಗ್ರಾಮ ಪಂಚಾಯತಿಗಳಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಿ ಪಾಲ್ಗೊಂಡ ಫಲಾನುಭವಿಗಳ ಮೇಲೆ ನಡೆದ ಲಾಠೀ ಚಾರ್ಜ್‌ನ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿನ್ನೆಲೆಯನ್ನು ನೋಡುವುದು ಮುಖ್ಯವಾಗುತ್ತದೆ.

**ಘಟನೆಯ ಹಿನ್ನೆಲೆ**

ಬೂದಗುಂಪಾ ಇಂದರಗಿ, ಇಲಕಲಗೇಡಾ ಹಾಸಗಲ್ ಮತ್ತು ಹಿರೇಬಗನಾಳ್ ಗ್ರಾಮ ಪಂಚಾಯತಿ ವ್ಯಾಪ್ತಿಗಳಲ್ಲಿನ ಬಡ ಕೂಲಿಕಾರರು, ಸಣ್ಣ ಮತ್ತು ಅತೀ ಸಣ್ಣ ರೈತರು ಉದ್ಯೋಗ ಖಾತರಿ ಯೋಜನೆಯಲ್ಲಿ ತಮಗೆ ಕೆಲಸ ಕೊಡುವಂತೆ ಗ್ರಾಮ ಪಂಚಾಯತಿಯ ಮೇಲೆ ಒತ್ತಡವನ್ನು ಹಾಕಿದ್ದಾರೆ. ಪರಿಣಾಮವಾಗಿ ಗ್ರಾಮ ಪಂಚಾಯತಿಯ ಅಧಿಕಾರಿಗಳು ಮತ್ತು ಚುನಾಯಿತ ಸದಸ್ಯರು ಉದ್ಯೋಗ ಖಾತರಿಯನ್ನು ಅನುಷ್ಠಾನಗೊಳಿಸಿ ಇವರನ್ನು ಕೆಲಸಕ್ಕೆ ಆಹ್ವಾನಿಸಿದ್ದಾರೆ. ಪ್ರತಿಯೊಂದು ಕುಟುಂಬದಿಂದ ಕನಿಷ್ಠ ಇಬ್ಬರ ಮೂರು ಜನರಂತೆ ನಿರಂತರವಾಗಿ ನಲವತ್ತರಿಂದ ನಲವತ್ತೈದು ದಿನಗಳ ಕಾಲ ಕೆಲಸವನ್ನು ಮಾಡಿದ್ದಾರೆ. ಒಂದು ಆರ್ಥಿಕ

ವರ್ಷದಲ್ಲಿ ಪಂಚಾಯತಿಯವರು ನೀಡಬೇಕಾದ ನೂರು ದಿನಗಳ ಕೆಲಸವನ್ನು ಪೂರೈಸಿದ್ದಾರೆ. ಯೋಜನೆಯ ನಿಯಮದ ಪ್ರಕಾರ ಕೆಲಸ ಮಾಡಿದ ಹದಿನೈದು ದಿನಗಳ ಒಳಗಾಗಿ ಕೂಲಿ ಪಾವತಿಸಬೇಕು. ಆದರೆ ಕೆಲಸ ಮುಗಿಸಿ ಒಂದು ತಿಂಗಳ ಮೇಲಾದರೂ ಗ್ರಾಮ ಪಂಚಾಯತಿಯ ಅಧಿಕಾರಿಗಳು ಕೆಲಸ ಮಾಡಿದ ಕೂಲಿಕಾರರಿಗೆ ಕೂಲಿ ಪಾವತಿಸಿಲ್ಲ. ಇದರಿಂದ ಸಿಟ್ಟಿಗೆದ್ದ ಮಹಿಳಾ ಕೂಲಿಕಾರ್ಮಿಕರು ಗ್ರಾಮ ಪಂಚಾಯತಿಗಳಿಗೆ ಮುತ್ತಿಗೆ ಹಾಕಿದ್ದಾರೆ. ಇದರಿಂದ ಯಾವುದೇ ಪ್ರಯೋಜನವಾಗದ ಕಾರಣ, ತಾಲೂಕ ಪಂಚಾಯತಿಗೆ ತೆರಳಿ ತಾಲೂಕ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗೆ ಘೇರಾವ್ ಹಾಕಿ ತರಾಟೆಗೆ ತೆಗೆದುಕೊಂಡಿದ್ದಾರೆ. ಆಗ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಹೊರಹೋಗಲು ಯತ್ನಿಸಿದ್ದಾರೆ. ಆದರೆ ಮಹಿಳಾ ಕೂಲಿ ಕಾರ್ಮಿಕರು ಅವರನ್ನು ಹೊರ ಹೋಗಲು ಬಿಡದೆ ತಡೆದಿದ್ದಾರೆ. ಪರಿಸ್ಥಿತಿ ಕೈ ಮೀರುವುದನ್ನು ಅರ್ಥಮಾಡಿಕೊಂಡ ಕಾರ್ಯನಿರ್ವಾಹಕ ಅಧಿಕಾರಿ ಅವರು 'ಪ್ರಕರಣವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇನೆ' ಎಂದು ಹೇಳಿದ ಮೇಲೆ ಘೇರಾವ್ ಹಿಂಪಡೆದಿದ್ದಾರೆ. ಆದ್ರೆ ಇದಾವುದೂ ಫಲಕಾರಿಯಾಗಲಿಲ್ಲ. ಈ ಮೊದಲೇ ಮನವಿ ಪತ್ರದಲ್ಲಿ ತಿಳಿಸಿದಂತೆ ದಿನಾಂಕ 22–3–2011ರಂದು ಈ ಐದು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವಂತ ಪ್ರತಿಯೊಂದು ಗ್ರಾಮದ ಕೂಲಿಕಾರ್ಮಿಕ ಮಹಿಳೆಯರು ಮತ್ತು ಪುರುಷರು ಸುಮಾರು 500 ರಿಂದ 600 ಜನ ಸೇರಿ ಕೊಪ್ಪಳ ತಾಲೂಕು ಪಂಚಾಯತಿಯ ಎದುರು ಧರಣಿಗೆ ಕುಳಿತುಕೊಂಡಿದ್ದಾರೆ. ಇದು ಅನಿರ್ದಿಷ್ಟಾವಧಿವರೆಗೆ ಮುಂದುವರೆಯಿತು. ಮುಂದೆ ಈ ಧರಣಿ ಬೇರೆಯದೇ ಸ್ವರೂಪವನ್ನು ಪಡೆಯಿತು.

ಕೂಲಿ ಕಾರ್ಮಿಕರಿಂದ ಪ್ರಾರಂಭವಾದ ಈ ಧರಣಿ ಮೊದಲ ದಿನ ಶಾಂತವಾಗಿ ನಡೆದಿದೆ. ಈ ಧರಣಿಯಲ್ಲಿ ಹೆಚ್ಚಾಗಿ ಮಹಿಳಾ ಕೂಲಿ ಕಾರ್ಮಿಕರು ಭಾಗವಹಿಸಿದ್ದರು. ಅದರಲ್ಲೂ ವಿಶೇಷವಾಗಿ ಚಿಕ್ಕ ಮಕ್ಕಳ ತಾಯಂದಿರು, ವಿಧವಾ ಮಹಿಳೆಯರು ಮತ್ತು ವಯಸ್ಸಾದ ಮಹಿಳೆಯರಿದ್ದರು. ಧರಣಿಯು ಎರಡನೇ ದಿನಕ್ಕೆ ಮುಂದುವರೆದು, ಮೂರನೆಯ ದಿನಕ್ಕೆ ಕಾಲಿಟ್ಟಿದೆ. ಆ ದಿನವೂ ಯಾವೊಬ್ಬ ಅಧಿಕಾರಿಯು ಬಂದು ಮಾತನಾಡದ ಕಾರಣ ಇದರಿಂದ ಕೋಪೋದ್ರಿಕ್ತಗೊಂಡ ಎಲ್ಲಾ ಕಾರ್ಮಿಕರು ಮನವಿ ಪತ್ರದಲ್ಲಿ ತಿಳಿಸಿರುವಂತೆ ನಾಲ್ಕನೆಯ ದಿನ ತಾಲೂಕು ಪಂಚಾಯತಿಗೆ ಬೀಗ ಮುದ್ರೆಯನ್ನು ಹಾಕಲು ಮುಂದಾಗಿದ್ದಾರೆ. ಆಗ ದಿಢೀರನೆ ಆಗಮಿಸಿದ ಪೊಲೀಸ್ ಅಧಿಕಾರಿಗಳು ಇದ್ದಕ್ಕಿದ್ದಂತೆ ಇವರ ಮೇಲೆ ಲಾಠಿ ಚಾರ್ಜ್ ಮಾಡಿದ್ದಾರೆ. ಮಹಿಳೆಯರು, ವಯಸ್ಸಾದ ವೃದ್ಧರು, ಚಿಕ್ಕ ಮಕ್ಕಳ ತಾಯಂದಿರು ಎನ್ನದೆ ಪ್ರತಿಯೊಬ್ಬ ಕೂಲಿ ಕಾರ್ಮಿಕರನ್ನು ಮನಬಂದಂತೆ ಲಾಠಿಯಿಂದ ಥಳಿಸಿದ್ದಾರೆ. ಪರಿಡಾಳಿಗೆ ಹಾಕಿದ ಕಟ್ಟಿಗೆಯಿಂದ ಹೊಡೆದಿದ್ದಾರೆ. ಬೂಟುಗಾಲಿನಿಂದ ಒದ್ದಿದ್ದಾರೆ. ಹಾಗೆಯೇ ಮಹಿಳೆಯರೆಂದು ಲೆಕ್ಕಿಸದೆ ಮಹಿಳೆಯರ ಮೈಮೇಲಿನ ಬಟ್ಟೆಗಳನ್ನು ಹಿಡಿದು ಎಳೆದಾಡಿ ಓಡಾಡಿಸಿ ಹೊಡೆದಿದ್ದಾರೆ. ಈ ಘಟನೆಯಲ್ಲಿ ಕೆಲವರಿಗೆ ಕೈ ಕಾಲು ಮುರಿದರೆ, ಒಬ್ಬ ಮಹಿಳೆ ತಮ್ಮ ಗರ್ಭಕೋಶವನ್ನೇ ಕಳೆದುಕೊಂಡಿದ್ದಾರೆ. ಕೆಲವು ಮಹಿಳೆಯರು ಕಣ್ಣು ಕಳೆದುಕೊಂಡಿದ್ದಾರೆ. ಆದರೆ ಈ ಭಾಗದಲ್ಲಿನ ಗ್ರಾಮ ಪಂಚಾಯತಿಗಳು ಈ ಎಲ್ಲಾ ಅವಕಾಶಗಳನ್ನು ರೈತರಿಗಾಗಲಿ ಅಥವಾ ಬಡ ಕೂಲಿಕಾರರಿಗಾಗಲಿ ಅವಕಾಶಗಳನ್ನು ಒದಗಿಸಿಕೊಟ್ಟಿಲ್ಲದಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ.

ಈ ಪ್ರಕರಣದಲ್ಲಿ ಲಾಠಿ ಚಾರ್ಜ್‌ಗೆ ಒಳಗಾದವರಲ್ಲಿ ಮಹಿಳೆಯರೆ ಹೆಚ್ಚಾಗಿದ್ದರು. ಹಾಗಾಗಿ ಇದರಿಂದ ಮಹಿಳೆಯರ ಮೇಲೆಯೆ ಹೆಚ್ಚಿನ ಪರಿಣಾಮ ಬೀರಿತು. ಈ ಕಾರಣಕ್ಕಾಗಿ ಹೆಣ್ಣುಮಕ್ಕಳ ಭಾಗವಹಿಸುವಿಕೆ ಮತ್ತು ಅವರು ಅನುಭವಿಸಿದ ನೋವು ಉದ್ಯೋಗ ಖಾತ್ರಿ ಯೋಜನೆಯಲ್ಲಿನ ಲಿಂಗದ ನೆಲೆಯಲ್ಲಿ ನಡೆಯುವ ಶೋಷಣೆಯನ್ನು ಎತ್ತಿ ತೋರಿಸುವಂತಿದೆ. ಒಟ್ಟಾರೆಯಾಗಿ ಲಾಠಿಚಾರ್ಜ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಘಟನೆಗಳ ಸದಸ್ಯರನ್ನು ಮತ್ತು ಮಹಿಳಾ ಮತ್ತು ಪುರುಷ ಕೂಲಿಕಾರರನ್ನು ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ನರೇಗಾ ಯೋಜನೆಯ ಅನುಷ್ಠಾನದ ಅವ್ಯವಸ್ಥೆಯನ್ನು ಬಿಂಬಿಸುವ ಮತ್ತು ಸರಕಾರದ ದಬ್ಬಾಳಿಕೆಯನ್ನು ತೋರಿಸುವ ಮಾದರಿಯನ್ನು ಲಾಠಿಚಾರ್ಜ್ ಪ್ರಕರಣ ಬಿಂಬಿಸುತ್ತಿದೆ. ಈ ಪ್ರಕರಣವನ್ನು ಕುರಿತ ಈ ಭಾಗದ ರೈತ ಕೂಲಿ ಕಾರ್ಮಿಕರ ನಿರೂಪಣೆಗಳು ಇದರ ಮತ್ತೊಂದು ಮಗ್ಗುಲನ್ನು ತೆರೆಯುತ್ತವೆ. ಹಾಗಾಗಿ ಉದ್ಯೋಗ ಖಾತರಿ ಯೋಜನೆಯ ಫಲಾನುಭವಿಗಳಾಗಿ ಲಾಠಿಚಾರ್ಜ್‌ಗೆ ಒಳಗಾದ ಮಹಿಳೆಯರನ್ನು ಸಂದರ್ಶಿಸಿ ಅವರ ಮಾತುಗಳಲ್ಲಿಯೇ ಅವರ ಅನುಭವಗಳನ್ನು ಮುಂದಿನಂತೆ ವಿಶ್ಲೇಷಿಸಲಾಗಿದೆ.

ಇಂಕಲಗಿಡದ ಅನ್ನಪೂರ್ಣಮ್ಮ ಎಂಬುವವರನ್ನು ಮಾತನಾಡಿಸಿದಾಗ, ಅವರು ಘಟನೆಯ ಬಗ್ಗೆ ಮತ್ತು ತಮಗಾದ ನೋವಿನ ಬಗ್ಗೆ ಹೀಗೆ ಹೇಳಿದರು. "ಯೋಜನೆದಾಗ ಒಂದ್ವರೆ ತಿಂಗಳ ಕೆಲ್ಸಾ ಮಾಡೀವಿ. ದುಡಿದ ಕೂಲಿ ಕೇಳಾಕ ಹೋದ್ರ ಪಂಚಾಯ್ತಿ ಅಧ್ಯಕ್ಷರಾಗಲಿ, ಸದಸ್ಯರಾಗಲಿ ಮತ್ತಾ ಸಕ್ರೆಟರಿ ಆಗಲಿ ಯಾರು ಗಮನಕ್ಕ ತಗಲಿಲ್ಲ. ಮತ್ತಾ ಯಾರು ಮೈಮ್ಯಾಲೆ ಹಾಕ್ಯಾಲಿಲ್ಲ. ಎಲ್ಲಾರು ಜಾರಿಕೆಂಡು ಜಾರಿಕೆಂಡು ಹೋಗಾಹತ್ತಿದ್ರು. ಜಾಸ್ತಿ ಬಿಗುವು ಮಾಡಿ ಕೇಳಿದಾಗ ಸರಕಾರದಿಂದ ರೊಕ್ಕ ಬಂದಿಲ್ಲ. ರೊಕ್ಕ ಬಂದಮ್ಯಾಲೆ ತಗಳ್ರಿ ಅಂತ ಸಾಗಾಹ್ಯಂತ ಬಂದ್ರು. ಒಂದಲ್ಲ ಎರಡು ದಿನ ಅಲ್ಲ, ಆರು ತಿಂಗಳ ಇದನ್ನೇ ಸಾಗಿಕೆದ್ರು. ಅದಾಮ್ಯೆಲೆ ದುಡಿಲಾರದವರು ಹೆಸರಮ್ಯಾಗ ಹಾಜರಿ ಹಾಕಿ ರೊಕ್ಕ ತಿಂದಾರಂತ ಗೊತ್ತಾತು. ಅವಾಗ ನಾವು ಎಲ್ಲಾರು ಕೂಲಿ ಕೆಲ್ಸ ಮಾಡಿದವರು. ಮತ್ತಾ ರೈತ ಸಂಘದವರು ಸೇರಿ

ಇಂಕಲಗೇಡ ಪಂಚಾಯ್ತಿ ಮುಂದ ಮೂರ್‍ನಾಲ್ಕು ದಿನ ಟ್ರೈಕ್ (ಸ್ಟ್ರೈಕ್) ಮಾಡಿದ್ವಿ, ಮೂರ್‍ನಾಲ್ಕೂ ದಿನ ಟ್ರೈಕ್ ಮಾಡಿದ ಮ್ಯಾಲೆ ನಮಗ ದುಡದುದರ ಕೂಲಿ ಕೊಡ್ತೀವಿ ಅಂತ ಆಗಲಿ, ದುಡಿಯಾಕ ಕೆಲ್ಸ ಕೊಡ್ತೀವಂತಾಗಲಿ ಯಾರು ಹೇಳಲಿಲ್ಲ. ಮತ್ತೆ ನಮ್ಮನ್ನ ಯಾರು ಮಾತಾಡ್ಸಲಿಲ್ಲ. ಹಿಂಗಾದ್ರೆ ಇದು ಬಗಿಹರಿದಿಲ್ಲಂತ ನಮ್ ಇಂಕಲಗೇಡದವರು, ಇಂದರಗಿಯವರು, ಮೆತ್ತಗಲ್ಲೂರು, ಹಾಸಗಲ್ಲೂರು ಮತ್ತ್ಯಾ ಬೂದಗುಂಪದವರು ಸೇರಿ ಕೊಪ್ಪಳ ತಾಲೂಕ ಆಫೀಸಿನ ಮುಂದ ಮೂರು ದಿನ ಟ್ರೈಕ್ ಮಾಡಿದ್ವಿ, ಕೊಪ್ಪಳದಾಗ ಸತೆ ಯಾ ಆಫೀಸರ್ ಬಂದು ನಮಗ ಮಾತಾಡ್ಸಲಿಲ್ಲ. ಯಾಕ ಟ್ರೈಕ್ ಮಾಡ್ತೀರಿ ಅಂತ ಒಂದು ಮಾತು ಕೇಳಲಿಲ್ಲ. ಅವಾಗ ನಮ್ ಸಂಘದವರು ಮತ್ತೆ ಕೂಲಿಕಾರರು ಸೇರಿ ತಾಲೂಕ ಆಫೀಸಿಗೆ ಬೀಗ ಹಾಕಾಕ ಹೋಗಿದ್ದೆ ತಡ ಪೋಲೀಸ್ರ ಎಲ್ಲಿದ್ರೋ, ಎಲ್ಲಿಲ್ಲೋ ಬಂದು ಬಂದಿದ್ದೇನು ನಮಗೆ ದನಕ್ಕ ಬಡದಂಗ ಎಳದಾಡಿ ಮನಸ್ಸಿಗೆ ಬಂದಾಗ ಹೊಡ್ಯಾಕತ್ತಿದ್ರು. ಪೆಂಡಾಲಿಗೆ ಹಾಕಿದ್ದ ಕಟಿಗಿ ತಗಂಡು ನಮ್ ಕೂಲಿಕಾರರಿಗೆ ಮತ್ತ್ಯಾ ರೈತ ಸಂಘದವರಿಗೆ ಸಿಕ್ಕಸಿಕ್ಕಂಗ ಹೊಡದ್ರು. ಪೋಲೀಸರು ಎಡ್ಯಾದು ನೋಡಿ ನಾನು ಓಡಿ ಹೋಗಾಣಂತ ಓಡುಕತ್ತಿದ್ದೆ ಆಗ ಸೀರೆ ಸೆರಿಗು ಹಿಡಿದು, ಎಳದು ನನಗ ಕಟಿಗಿ ತಗಂಡು ಎಡುದ್ರು. ಆ ಮ್ಯಾಲೆ ತುರುಬು ಹಿಡಿದು ಜಾಡ್ಸಿ ನೂಕಿಬುಟ್ರು. ಆಗ ನಾನು ತಾಲೂಕ ಆಫೀಸಿನ ಪಾಟಣಗಿಗೆ ಹೋಗಿ ಬಿದ್ದೆ ಬಿದ್ದಾಗ ನನಗ ಮೂರ್ಛೆ ಹೋಗಿಬುಡಿತು. ಮುಂದ ಏನಾಯಿತೋ ಗೊತ್ತಿಲ್ಲ. ಅವಾಗ ನಮ್ ಸಂಘದವರು ಸರಕಾರ ದವಾಖಾನಿ ಅಂಬ್ಯುಲನ್ಸ್‌ಗೆ ಫೋನು ಮಾಡಿ, ನನ್ನ ದವಾಖಾನಿಗೆ ಅಡ್ಮಿಟ್ ಮಾಡಿದ್ರಂತ. ಪೋಲೀಸರು ದಬ್ಬಿದಾಗ ಪಾಟಣಿಗಿ ಹೊಟ್ಟೆಗೆ ಬಡಿದು ಬಾಳ ಪೆಟ್ಟು ಆಗಿ ಗರ್ಭಕೋಶಕ್ಕ ಹೊಡ್ತಾ ಬಿದ್ದಾದ. ಅಂಗಾಗಿ ಆಪರೇಶನ್ ಮಾಡ್ಬೇಕು. ಐವತ್ತರಿಂದ ಅರುವತ್ತು ಸಾವಿರ ರೂಪಾಯಿ ಖರ್ಚು ಬರ್ತಾದ ಅಂತ ಹೇಳಿದ್ರು. ಅವಾಗ ನಾನು ಏನು ಮಾಡ್ಬೇಕು ಮೊದಲೇ ನಾವು ಬಡವುರು. ಅಡಿವ್ಯಾಗ ಎಕರೆ ಹೊಲ ಇಲ್ಲ. ಊರಾಗ ಅಂಗೈ ಅಗಲ ಮನೆ ಇಲ್ಲ. ಒಂದು ಹತ್ತು ವರ್ಷದ ಹಿಂದ ಸರಕಾರದ ಕಡಿಯಿಂದ ಒಂದು ಜನತಾ ಮನೆ ಆಗಿತ್ತು. ಅದ್ಬಿಟ್ರೆ ನನಗ ಸರಕಾರದಿಂದ ಏನು ಆಗಿಲ್ಲ. ಮನ್ಯಾಗ ಸಣ್ಣ-ಸಣ್ಣ ಮಕ್ಳು ಐದಾವ. ಜೀವ್ನ ನಡಿಸೋದೆ ಕಷ್ಟ ಆಗ್ಯಾದ ಅಂತದ್ರಾಗ ಐವತ್ತು ಅರುವತ್ತು ಸಾವ್ರರ ಕೊಟ್ಟು ಆಪರೇಶನ್ ಮಾಡ್ಸಿಗೆಂಬಾದು ನಮ್ಮಿಂದ ಆಗ್ತಾದೇನು? ಹಂಗಾಗಿ ಏನಾರ ಆಗಲಿ ಅಂತೇಳಿ ಹತ್ತುದಿನ ದವಾಖಾನ್ಯಾಗ ಇದ್ದ, ಆಮ್ಯಾಲೆ ಆ ದೇವರು ಇಟ್ಟಂಗ ಆಗ್ತಾದ 'ಬದುಕಿದ್ರೆ ಆ ದೇವರು ಪಾಲು ಸತ್ರೆ ಮಣ್ಣು ಪಾಲು' ಅಂತ ದೇವರ್ ಮ್ಯಾಲೆ ಬಾರ ಹಾಕಿ ಮನಿಗ್ಯಾ ಡಿಶ್ಚಾರ್ಜ್ ಮಾಡಿಕೆಂಡು ಬಂದ್ಬುಟ್ಟೆ ಮನಿಗೆ ಬಂದು ಹತ್ತು ದಿನಕ್ಕ ಹೊಟ್ಟೆ ಬಾವು ಬಂದು ಉಬ್ಬಿಕೆಂತು. ಕುಂಡಂಗ ನೋವು ಆಗಕತ್ತಿತು. ಏನು ಮಾಡಾಕ ದಾರಿ ಇಲ್ಲದಂಗ ಆಯಿತು. ನಮ್ ತವರು ಮನಿಯವ್ರು ಬಂದು ದವಾಖಾನಿಗೆ ಅಡ್ಮಿಟ್ ಮಾಡಿ ತೋರಿಸಿದ್ರು. ಆವಾಗ ಡಾಕ್ಟ್ರು ಗರ್ಭಕೋಶಕ್ಕ ಪೆಟ್ಟಾಗ್ಯಾದ್ರಿಂದ ಆಪರೇಶನ್ ಮಾಡಿ ಗರ್ಭಕೋಶ ತೆಗಿದುಹಾಕಿದ್ರು. ನೋಡ್ರಿ ಸಾರ್ ನಮ್ ಕತೆ ಹಿಂಗಾದ. ಯೋಜನದಾಗ ದುಡದುದರ ಕೂಲಿ ಕೇಳಾಕ ಹೋದ್ರ ನಮಗ ಈ ಗತಿ ಮಾಡ್ಯಾರ. ಹಿಂಗ ಮಾಡಿದ್ರೆ ನಮ್ಮಂತ ಬಡವರು ಎಲ್ಲಿಗೆ ಹೋಗ್ಬೇಕು ನಮ್ಮಂತ ಬಡಜನ ಯಂಗ ಬದುಕ್ಬೇಕು. ದುಡದುದರ ಕೂಲಿ ಕೊಡ್ಲಿಲ್ಲ. ಮತ್ತೆ ನಮ್ಮ್ಯಾಲೇ ಕೇಸ್ ಮಾಡ್ಯಾರ. ದುಡದುದರ ಕೂಲಿ ಕೇಳಾಕ ಹೋಗಿ ಬಡಿಸಿಗೆಂಡಿದ್ದು ಒಂದಾ ಐವತ್ತರಿಂದ ಅರುವತ್ತು ಸಾವ್ರರ ದವಾಖಾನಿಗೆ ಇಟ್ಟಿದ್ದು ಒಂದಾ ಮತ್ತೆ ನಮ್ಮ್ಯಾಲೆ ಕೇಸ್ ಮಾಡಿದ್ದು ಒಂದಾ ಇದು ಯಂಗ ಐತಿ ನೀವೆ ನೋಡ್ರಿ. ಇದು ಏನಿದ್ರೆ ಒಂಟಿ ಹೆಣ್ಮಕ್ಕಳು ಬಡವ್ರುರು ಬದ್ಕಂತ ಕಾನೂನೇ ಅಲ್ಲ ನೋಡ್ರಿ. ಮಾಡಿಕೆಂಡು ತಿಂದ್ರೆ ಮಂದಿ ಕಾಟ, ಬೇಡಿಕೆಂಡು ತಿಂದ್ರೆ ನಾಯಿ ಕಾಟಂತ ಹಂಗ ಆಗ್ಯಾತಿ ನಮ್ ಬಾಳೆವು" ಎಂದು ತಮ್ಮ ನೋವನ್ನು ತೋಡಿಕೊಂಡರು.

ಯೋಜನೆ ರೂಪಿತವಾಗಿರುವುದು ಬಡಜನರ ಅಭಿವೃದ್ಧಿಗಾಗಿ. ಆದರೆ ಈ ಯೋಜನೆ ಕಾರ್ಯಾನುಷ್ಠಾನಕ್ಕೆ ಬರುವ ಹೊತ್ತಿಗೆ ಅದು ಉಳ್ಳವರ ಪಾಲಾಗಿರುತ್ತದೆ. ಇದನ್ನು ಪ್ರಶ್ನಿಸಿದ ಜನರನ್ನು ಹಿಂಸೆಗೆ ದೂಡಲಾಗುತ್ತದೆ. ಇದು ಸಮಾಜದಲ್ಲಿನ ನೈಜ ಸ್ಥಿತಿ. ಇಲ್ಲಿ ಅನ್ನಪೂರ್ಣಮ್ಮ ದುಡಿದ ಕೂಲಿ ಕೇಳಲು ಹೋಗಿ ತನ್ನ ಜೀವನ ಪೂರ್ತಿ ನ್ಯಾಯಾಲಯಕ್ಕೆ ಓಡಾಡುವಂತಾಗಿದ್ದು ಮತ್ತು ತನ್ನ ಗರ್ಭಕೋಶವನ್ನೇ ತೆಗೆಸಿಕೊಂಡದ್ದು ಇವು ಸಮಾಜದಲ್ಲಿನ ಹಿಂಸಾತ್ಮಕ ಘಟನೆಗೆ ಹಿಡಿದ ಕನ್ನಡಿಯಂತಿದೆ.

ಕೊಪ್ಪಳ ತಾಲೂಕಿನ ಬೂದಗುಂಪ ಗ್ರಾಮಕ್ಕೆ ಹೋಗಿ ಗಂಗಪ್ಪ ಎನ್ನುವವರನ್ನು ಭೇಟಿಯಾಗಿ ಮಾತನಾಡಿಸಿದಾಗ ಇವರು ಹೇಳುವ ಮಾತಿನಲ್ಲಿ ಈ ಘಟನೆಯ ಸೂಕ್ಷ್ಮವನ್ನು ಅರ್ಥಮಾಡಿಕೊಳ್ಳಬಹುದು: "ನಮ್ಮೂರಾಗ ಎರಡ್ವರೆ ಮೂರು ವರ್ಸದ ಹಿಂದ ಕೆಲಸ ನಡದಿತ್ತು, ಅದ್ಬುಟ್ರೆ ಇಲ್ಲಿತನ ಯಾವ ಕೆಲ್ಸ ನಡದಿಲ್ಲ. ನಮ್ಮೂರಾಗ ಅರುವತ್ತು ಮಂದಿ ಹೆಣ್ಮಕ್ಕಳು ರೈತ ಸಂಘದಾಗ ಇದ್ದೀವಿ. ನಾವೆಲ್ಲಾರು ಸೇರಿ ನಮ್ಮ ಸಂಘದ ಕಡಿಯಿಂದ ಜನಕ್ಕ ಕೂಲಿ ಕೆಲ್ಸ ಕೊಡ್ಬೇಕು. ಇಲ್ಲಂದ್ರೆ ಜೀವ್ನ ಮಾಡೋದು ಬಾಳಾ ತ್ರಾಸ್ ಆಗ್ತಾದ. ಈ ಬ್ಯಾಸಿಗಿ ಟೈಮಿನ್ಯಾಗ ದುಡಿಯಾಕ ಕೂಲಿ ಕೆಲಸ ಇರಾಂಗಿಲ್ಲ. ಹಂಗಾಗಿ ಊರಾಗಿನ ಜನ ಬೆಂಗಳೂರು, ಮೈಸೂರು ಅಂತ ದೂರದ ಊರಿಗೆ ದುಡಿಯಾಕ ಹೋಗಾಕತ್ಯಾರ ಇಲ್ಲೆ ಪಂಚಾಯ್ತಿ ಕಡಿಯಿಂದ ಕೂಲಿ ಕೆಲ್ಸ ಕೊಡ್ಬೇಕು ಅಂತೇಳಿ ಐದ್ನೂರು ಮಂದಿ ಹೆಸರು ತಗಂಡು ಪಂಚಾಯ್ತಿಗೆ ಅರ್ಜಿ ಕೊಟ್ಟಿದ್ವಿ, ಅರ್ಜಿ ಕೊಟ್ಟು ಆರು ತಿಂಗಳ ಆದ್ರೂ ದುಡಿಯಾಕ ಪಂಚಾಯ್ತಿಯವರು ಕೆಲಸಾನೆ ಕೊಡ್ಲಿಲ್ಲ. ಹಿಂಗಾದ್ರೆ ಇದು ಬಗಿಹರಿದಿಲ್ಲ ಅಂದ್ಕಂಡು ರೈತ ಸಂಘದಾಗ ಇರೋ ಎಲ್ಲಾ ಹೆಣ್ಣು ಮಕ್ಕಳು, ಗಂಡುಮಕ್ಕಳು ಸೇರಿ ಗ್ರಾಮ

ಪಂಚಾಯ್ತಿಗೆ ಹೋಗಿ ದುಡಿಯಾಕ ಕೆಲಸ ಕೊಡಬೇಕು ಅಂತ ಎಲ್ಲಾರು ಪಟ್ಟುಹಿಡಿದ್ವಿ, ಆಮ್ಯಾಲೆ ಕೊಪ್ಪಳದಿಂದ ಸಕ್ರೆಟರಿ ಮ್ಯಾಲೆ ಇರಂತಹಾಲ್ಲ ಆ ಆಫೀಸರ್ ಬಂದು ನಿಮ್ಗ ಕೆಲಸ ಇನ್ನ ಹದಿನೈದು ದಿನದಾಗ ಕೊಡ್ತೀವಿ ಅಂತ ಹೇಳಿ ಹೋದ್ರು. ಆಮ್ಯಾಲ ನಮ್ಗ ಕೆಲ್ಸ ಕೊಟ್ರು, ಮೂನ್ನೂರಾ ಐವತ್ತರಿಂದ ನಾಲ್ಕೂನೂರ ಜನ ಬುಡದರಗ ನಲವತ್ತರಿಂದ ನಲವತ್ತೈದು ದಿನ ದುಡದೀವಿ". ಎಂದು ಹೇಳಿದರು. ನೀವು ಈ ಯೋಜನೆಯಲ್ಲಿ ಯಾವ ಯಾವ ಕೆಲಸವನ್ನು ಮಾಡಿದ್ದೀರಿ? ಎಂದು ಕೇಳಿದಾಗ,

"ನೋಡ್ರಿ ಸಾರ್ ಅದು ಹೇಳಬಾರದು ಸುಡುಗಾಡ್ಯಾಗ ಮುಳ್ಳು ಕಡದೀವಿ, ಕಲ್ಲು ಆರಿಸೀವಿ, ಸತ್ತವರ ಡೋಬಿ ಆರಿಸಿ ಕೂಡಾಕಿ ಸುಟ್ಟೇವಿ. ಹಗಿ ಹಚ್ಚೇವಿ. ಸಣ್ಣ-ಸಣ್ಣ ಕರಿ ತೋಡೀವಿ. ಟ್ರಂಚ್ ಕಡದೀವಿ. ಇಷ್ಟೆಲ್ಲ ಕೆಲ್ಸ ಮಾಡೀವಿ. ಆದ್ರ ನಸಸ್ನಾಟಗಳ್ರ ದುಡದಂತ ಕೂಲಿನೇ ಒಂದು ಪೈಸೆ ಕೊಡ್ಲಿಲ್ಲ, ಬದಲಿಗೆ ನಮ್ ಕೂಲಿ ರೊಕ್ಕ ಪಂಚಾಯ್ತಿಯವರು, ಅಧ್ಯಕ್ಷರು, ಮೆಂಬರ್‌ಗಳು, ಸಕ್ರೆಟರಿ ಮತ್ತೆ ನೀರಗಂಟಿಯವನು ಎಲ್ಲಾರು ಸೇರಿ ದುಡಿಯಾಕ ಬರಲಾರದವರ ಮ್ಯಾಗ ಹಾಜರಿ ಹಾಕಿ ನಮ್ ರೊಕ್ಕಾ ಎತ್ತಿಗರೆಡು ತಿಂದಾರಂತ ಗೊತ್ತಾಯಿತು. ಆವಾಗ ನಮ್ ಸಂಘದವರು ಮತ್ತೆ ಕೂಲಿಕಾರರು ಆಮ್ಯಾಲೆ ಹಾಸಗಲ್ ಪಂಚಾಯ್ತಿ, ಇಂದರಗಿ ಪಂಚಾಯ್ತಿ, ಇಂಕಲಗೇಡ ಪಂಚಾಯ್ತಿಯವರು ಮತ್ತೆ ಮೆತ್ತಗಲ್ ಅವರು ಈ ಎಲ್ಲಾ ಊರ ಕೂಲಿಕಾರರು ಮತ್ತೆ ಸಂಘದವರು ಎಲ್ಲಾರು ಸೇರಿ ದುಡದಂತ ಕೂಲಿ ನಮಗ ಕೊಡಾಕಬೇಕಂತೇಳಿ ಪಂಚಾಯ್ತಿ ಮುಂದ ಮೂರು ದಿನ ಹೋರಾಟ ಮಾಡಿದ್ವಿ, ಪಂಚಾಯ್ತಿಗೆ ಬೀಗ ಹಾಕಿದ್ವಿ, ಆದ್ರೆ ನಮ್ಗ ನ್ಯಾಯನೇ ಸಿಗ್ಲಿಲ್ಲ. ಹಿಂಗಾದ್ರೆ ಇವರು ಮಾತು ಕೇಳಾಂಗಿಲ್ಲಂದು ಬೂದಗುಂಪ, ಇಂಕಲಗೇಡ, ಇಂದರಗಿ, ಮೆತ್ತಗಲ್ ಮತ್ತೆ ಹಾಸಗಲ್ ಪಂಚಾಯ್ತಿಯವರು ಸೇರಿ ಐದು ನೂರು ಮಂದಿ ಕೊಪ್ಪಳ ತಾಲೂಕ ಪಂಚಾಯ್ತಿ ಮುಂದ ಮೂರು ದಿನ ಹಗಲು ರಾತ್ರಿ ಧರಣಿ ಮಾಡಿದ್ವಿ, ಆದ್ರೆ ಯಾ ಆಫೀಸರ್ ಬಂದು ನಮ್ಮನ್ನು ಮಾತಾಡ್ಸಲಿಲ್ಲ. ಆವಾಗ ನಮ್ ಕೂಲಿಕಾರರು, ರೈತ ಸಂಘದವರಿಗೆ ಮೂರುದಿನಮಾ ಹಗಲು ರಾತ್ರಿ ಕುಂತ್ರೂನು ಯಾರು ನಮ್ಮನ್ನು ಕೇಳಾವಲ್ರಂತ ಸಿಟ್ಟಿಗೆ ಬಂದು ತಾಲೂಕು ಆಫೀಸಿಗೆ ಬೀಗ ಹಾಕಾಕ ಹೋದ್ರು. ಬೀಗ ಹಾಕಾಕ ಹೋಗಿದ್ದೆ ತಡ ಪೊಲೀಸ್ರು ಎಲ್ಲಿದ್ರೋ ಎಲ್ಲಿಲ್ಲೋ ಬಂದು ಬಂದಿದ್ದೆ ತಡ ಬಡಿಗಿ ತಗಂಡು ಹೋಡ್ಯಾಡ್ಸಿ ಹೊಡದ್ರು. ಹೆಣ್ಣು ಮಕ್ಕಳು ಅನ್ಲಿಲ್ಲ, ವಯಸ್ಸಾದ ಮುದುಕ್ರು ಅನಲಿಲ್ಲ, ಸಣ್ಣ-ಸಣ್ಣ ಮಕ್ಕಳು ತಾಯಿದವರು ಅನಲಿಲ್ಲ. ಎಲ್ಲಾರ್ನ ಸಿಕ್ಕ ಸಿಕ್ಕಾಂಗ ಹೊಡದ್ರು. ಹೆಂಗಸರ್ನ ಸತೇ ಮೈಮೇಲಿನ ಬಟ್ಟಿ ಹಿಡಿದು, ಸೀರಿ ಸೆರಗು ಹಿಡಿದು, ಕೂದಲು ಹಿಡಿದು ಎಳದಾಡಿ ಓಡಾಡ್ಸಿ ಹೊಡದ್ರು. ಇದರಾಗ ಬಾಳಾ ಮಂದಿಗೆ ಕೈ ಕಾಲು ಮುಂದುತಾವ. ನಮ್ಮಂತ ವಯಸ್ಸಾದಂತ ಮುದಕರ್ನ ಸತೆ ಬುಡಲಿಲ್ಲ, ನನಗೆ ಮೈ ಕೈಗೆಲ್ಲ ಏಟು ಬಿದ್ದು ಹದಿನೈದು ದಿನ ದವಾಖಾನ್ಯಾಗ ಆಡ್ಮಿಟ್ ಆಗಿದ್ದೆ. ಈ ಗಲಾಟ್ಯಾಗ ನನ್ನ ಕೊಳ್ಳಾಗಿನ ಬೋರಮಳ ಸರ ಮತ್ತಾ ಕಿವ್ಯಾಗಿನ ಬುಗುಡಿ ಕಡ್ಡಿ ಕಳದು ಹೋದವು. ಪೊಲೀಸರಿಂದ ಬಡಾತ್ತ ತಿಂದವ್ರು ಇವತ್ತಿಗೂ ಕೈಕಾಲು ಬ್ಯಾನಿ ಆಗ್ತಾವ. ಇದರಾಗ ಹೆಂಗಸ್ರು, ಗಂಡಸ್ರು ಸೇರಿ ಒಟ್ಟಾ ಅರವತ್ತೇಳು ಮಂದಿಮ್ಯಾಲೆ ಕೇಸ್ ಮಾಡ್ಯಾರ. ಇದು ಯಂಗಾದ ನೀವೇ ನೋಡ್ರಿ ಸಾರ್? ನಾವು ದುಡದಂತ ಕೂಲಿ ರೊಕ್ಕ ಕೇಳಾಕ ಹೋದ್ರ ನಮ್ಮನ್ನ ಬಡ್ದು ಮತ್ತೆ ನಮ್ ಮ್ಯಾಲೆ ಕೇಸ್ ಮಾಡ್ಯಾರ. ಇಲ್ಲಿಗೆ ಮೂರು ವರ್ಷ ಆಯಿತು. ಇವತ್ತಿನತನ ಕೇಸ್ ಬಗಹರಿದಿಲ್ಲ? ನಮ್ ಮ್ಯಾಲೆ ಕೇಸ್ ಆಗಿ ಕೋರ್ಟಿಗೆ ತಿರುಗಾಡದು ನಮ್ ಬದುಕು ನಾಯಿ ಬದುಕಿಗಿಂತ ಕಡೆ ಆಗ್ಯಾದ ಸಾರ್? ಯಾಕಂದ್ರ ದುಡಿಯಾಕ ಹೋದವ್ರು ಎಲ್ಲಾರು ಬಡವರು ಇದ್ದೀವಿ. ಈ ಕಾಲದಾಗ ದುಡಕಂಡು ತಿನ್ನವರು ಬದಕ್ಯಾದೆ ಕಷ್ಟ ಐತೆ. ಅಂತದ್ರಾಗ ತಿಂಗಳ ತಿಂಗಳ ಕೋರ್ಟಿಗೆ ಅಡ್ಯಾಡದು ಅಂದ್ರೆ ಸುಮ್ನೆ ಆಗತ್ತೇನು? ಏನಿಲ್ಲಂದ್ರೆ ಒಂದ್ಸಲ ಕೋರ್ಟಿಗೆ ಹೋದ್ರ ಇನ್ನೂರು ರೂಪಾಯಿಬೇಕು. ನಾವು ದಿನ ಐವತ್ತು ಅರವತ್ತು ರೂಪಾಯಿ ಕೂಲಿ ದುಡಿದ್ರೆ ಮನಿ ಬಾಳೇವ್ಗೆ ಸಾಲದಿಲ್ಲ. ಇಂತದ್ರಾಗ ಕೋರ್ಟಿಗೆ ತಿರುಗಾಡಾ ಖರ್ಚು ಮತ್ತೆ ವಕೀಲ ಫೀಜ್ ಕೊಡ್ಬೇಕು. ಇಷ್ಟೆಲ್ಲ ಕಷ್ಟ ಅದ. ನಮ್ಗ ದುಡದಂತ ಕೂಲಿ ರೊಕ್ಕ ಬ್ಯಾಡ ಪಂಚಾಯ್ತಿ ಕೆಲ್ಸ ಬ್ಯಾಡ, ಕೇಸಿನಿಂದ ಹೊರಗ ಬಂದ್ರ ಸಾಕು. ನಾವು ಯಂಗಾದ್ರೂ ನಮ್ ತಿಪ್ಲ ಇದ್ದಂಗ ಬೆಂಗಳೂರು, ಪೂನಾ ಗೋವಾ ಹೋಗಿ ದುಡಕಂಡು ತಿಂತೀವಿ" ಎಂದು ಕಣ್ಣೀರಿಡುತ್ತಾ ತನ್ನ ನೋವನ್ನು ಹೇಳಿಕೊಂಡಳು.

ಗಂಗಪ್ಪನ ಮಾತಿನಲ್ಲಿ ಈ ಘಟನೆಯ ಹಿನ್ನಲೆ ಮತ್ತು ಅದು ನಡೆದ ಬಗೆಯನ್ನು ವಿವರಿಸಿದ್ದಾಳೆ. ಇಲ್ಲಿ ಮೊದಲು ಕೆಲಸದ ಅಗತ್ಯವನ್ನು ಗ್ರಾಮ ಪಂಚಾಯ್ತಿಯ ಗಮನಕ್ಕೆ ತಂದವರು ಮಹಿಳೆಯರು. ಇದರಲ್ಲಿ ಉದ್ಯೋಗ ಖಾತ್ರಿ ಯೋಜನೆಯು ಮುಖ್ಯವಾಗಿ ಹೆಣ್ಣುಮಕ್ಕಳಿಗೆ ಹೆಚ್ಚು ಅಗತ್ಯವಿದೆ ಎನ್ನುವುದನ್ನು ಈ ಮಾತಿನಿಂದ ಗುರುತಿಸಬಹುದು. ಈ ಮೇಲಿನ ಪ್ರತಿಭಟನೆಯಲ್ಲಿ ಗಂಗಪ್ಪ ತನ್ನ ಆಸ್ತಿಯಂತಿದ್ದ ಮೈಮೇಲಿನ ಒಡವೆಗಳನ್ನೆಲ್ಲಾ ಕಳೆದುಕೊಂಡಿದ್ದಾಳೆ. ಈ ಒಡವೆಗಳನ್ನು ಸಂಪಾದಿಸಲು ಗಂಗಪ್ಪ ಹಲವಾರು ವರ್ಷಗಳೇ ಕಾಯಬೇಕಾಗುತ್ತಿತ್ತೇನೋ? ಏಕೆಂದರೆ ಕಿತ್ತು ತಿನ್ನುವ ಬಡತನದಲ್ಲಿಯೇ ಕೂಲಿನಾಲಿ ಮಾಡಿ ಕೂಡಿಟ್ಟ ಹಣದಲ್ಲಿ ಒಡವೆಗಳನ್ನು ಮಾಡಿಸಿಕೊಂಡಿದ್ದಳು. ಆದರೆ ಕೂಲಿ ಪಡೆಯಲೆಂದು ಮಾಡಿದ ಧರಣಿಯು ಅವುಗಳನ್ನು ಕಿತ್ತುಕೊಂಡಿತ್ತು. ಇದರಿಂದ ತುಂಬಾ ಬೇಸರಗೊಂಡಿದ್ದಳು. ಹಾಗೂ ಪೊಲೀಸರ ಲಾಠಿಗಳಿಂದ ಒಡೆತಗಳು, ತಮ್ಮ ಮೇಲಿನ ಕೇಸ್‌ಗಾಗಿ ಕೋರ್ಟಿಗೆ ಓಡಾಡುವ ಖರ್ಚನ್ನು ಭರಿಸುವುದು ಇವುಗಳಿಂದ ಗಂಗಮ್ಮನ ಮನಸ್ಸು ತುಂಬಾ ಘಾಸಿಗೊಂಡಿತ್ತು. ಕುಟುಂಬದ ಎಲ್ಲಾ ಆಗು-ಹೋಗುಗಳಿಗೆ ಗಂಗಪ್ಪನೇ

ಆಧಾರವಾಗಿದ್ದರಿಂದ ಜೀವನದ ಭಾರವೂ ಅವಳ ಮೇಲಿತ್ತು. ಹಾಗಾಗಿ ಅವಳು ತುಂಬಾ ನೊಂದುಕೊಂಡಿದ್ದಳು. ಪ್ರತಿಭಟನೆಯ ಸಂದರ್ಭದಲ್ಲಿ ಪೊಲೀಸರಿಂದ ಲಾಠಿ ಏಟು ತಿಂದಂತಹ ಗಂಗಪ್ಪ ಇಂದಿಗೂ ಆ ನೋವುಗಳನ್ನು ಭರಿಸುತ್ತಲೇ ಇದ್ದಾಳೆ. ಪ್ರಸ್ತುತ ಕೋರ್ಟಿಗೆ ಓಡಾಡಲು ಹಣಕ್ಕೂ ಸಹ ಸಾಲ ಮಾಡಿ ಕೊಂಡಿದ್ದಾರೆ. ಇವರು ಎಷ್ಟರ ಮಟ್ಟಿಗೆ ನೊಂದಿದ್ದಾರೆ ಎಂದರೆ "ನಮ್ಗ ದುಡದಂತ ಕೂಲಿ ರೊಕ್ಕ ಬ್ಯಾಡ ಪಂಚಾಯ್ತಿ ಕೆಲ್ಸ ಬ್ಯಾಡ, ಕೇಸಿನಿಂದ ಹೊಂಗ ಬಂದ್ರ ಸಾಕು" ಎಂಬ ಮಾತು ಅವರ ಪರಿಸ್ಥಿತಿಗೆ ಸಾಕ್ಷಿಯಾಗಿದೆ.
ಪ್ರತಿಭಟನೆಯಲ್ಲಿ ಅಲ್ಪಸಂಖ್ಯಾತ ಮಹಿಳೆಯರೂ ಕೂಡ ಭಾಗವಹಿಸಿದ್ದರು. ಸಮಾಜದಲ್ಲಿ ಇವರ ಕಷ್ಟ ಹೇಳತೀರದು. ಇದಕ್ಕೆ ಒಂದು ಪ್ರಕರಣವನ್ನು ಇಲ್ಲಿ ವಿವರಿಸಲಾಗಿದೆ. ಬೂದಗುಂಪ ಗ್ರಾಮದ 55 ವರ್ಷದ ಮುಸ್ಲಿಂ ಸಮುದಾಯದ ಅನಕ್ಷರಸ್ಥ ಮಹಿಳೆ ತಾಹೆಂರಾ ಬೇಗಂ ಮಾತುಗಳು ಈ ಸಮಸ್ಯೆಯ ಮತ್ತೊಂದು ಮುಖವನ್ನು ಬಿಚ್ಚಿಡುತ್ತದೆ. ಬೂದಗುಂಪ ಗ್ರಾಮಕ್ಕೆ ಹೋಗಿ ತಾಹೆಂರಾಬೇಗಂ ಎನ್ನುವವರನ್ನು ಭೇಟಿಯಾಗಿ ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಕೇಳಿದಾಗ "ನೋಡ್ರಿ ಸಾಬ್ರೆ ಈ ಹಾಳಾದ ಉದ್ಯೋಗ ಖಾತ್ರಿ ಕೆಲ್ಸಕ್ಕೆ ಹೋಗಿ ಕೋರ್ಟಿಗೆ ತಿರಗ್ಯಾಡದು ಬಂದದ. ಮತ್ತೆ ನಮ್ ಊರಾಗ ನಮ್ಮನ್ನ ಜಾತಿಯಿಂದ ಬ್ಯಾರೆ ಇಟ್ಟಾರ" ಎಂದು ನಿಟ್ಟುಸಿರು ಬಿಟ್ಟರು.
ಯಾಕೆ ನಿಮ್ಮನ್ನ ಜಾತಿಯಿಂದ ಬೇರೆ ಇಟ್ಟಿದ್ದಾರೆ? ಎಂದು ಕೇಳಿದಾಗ,
"ಸಾಬ್ರೆ ನಾವು ತುಂಬಾ ಬಡವರು ಐದೀವಿ. ಹಂಗಾಗಿ ದುಡಿಬೇಕು ತಿನ್ನಬೇಕು ಇಲ್ಲಂದ್ರೆ ಒಂದು ದಿನ ಮನ್ಯಾಗ ಕುಂತ್ರ ಜೀವ್ನ ನಡ್ಯಾದಿಲ್ಲ. ಹಂಗಾಗಿ ಊರಾಗಿನ ತಿಳಿದವರು ಹೇಳಿದ್ರ ಸರಕಾರ ಬಡಜನಕ್ಕಾಗಿ ಉದ್ಯೋಗ ಖಾತ್ರಿ ಯೋಜನೆಯಾಗ ಪಂಚಾಯ್ತಿ ಕಡೆಯಿಂದ ಒಂದು ವರ್ಷದಾಗ ನೂರು ದಿನ ಕೆಲ್ಸ ಕೊಡ್ಬೇಕು ಅಂತೇಳಿ ಮಾಡ್ಯಾದ. ಆದ್ರ ಕೂಲಿ ಕೆಲಸ ಬಂದು ಒಂದು ವರ್ಷ ಆಯಿತು. ಇಲ್ಲಿತನ ನಮ್ಮೂರಾಗ ದುಡ್ಕಂಡು ತಿನ್ನವರಿಗೆ ಕೆಲಸಾನೇ ಕೊಟ್ಟಿಲ್ಲ. ಬ್ಯಾರೆ ಊರಾಗ ಬ್ಯಾಸಿಗಿ ಟೈಂದಾಗ ಕೆಲಸ ಕೊಟ್ಟಾರ. ಹಿಂಗಾದ್ರೆ ಪಂಚಾಯ್ತಿಯವರು ಮಾತು ಕೇಳಾದಿಲ್ಲ. ಕೂಲಿ ಮಾಡಂತ ಹೆಣ್ಮಕ್ಕಳು ಎಲ್ಲಾರು ಸೇರಿ ರೈತ ಸಂಘ ಸೇರ್ರಿ ನಾವು ನಿಮ್ಮೊಂದ ಇರ್ತೀವಿ. ಎಲ್ಲಾರು ಸೇರಿ ಕೆಲಸ ಕೊಡ್ಬೇಕು ಅಂತೇಳಿ ಹೋರಾಟ ಮಾಡಾನು ಅಂತ ಹೇಳಿದ್ರು. ಅದಕ್ಕ ನಾನು ರೈತ ಸಂಘಕ್ಕೆ ಸೇರಿದೆ. ಆಮ್ಯಾಲೆ ನಮ್ ಸಂಘದ ಕಡೆಯಿಂದ ಮಹಿಳೆಯರಲ್ಲ ಸೇರಿ, ಕುಡ್ಯಾ ನೀರಿನ ಸಲುವಾಗಿ ಟ್ರೈಕ್ ಮಾಡಿದ್ವಿ, ಆಮ್ಯಾಲೆ ಊರು ಒಳಗಿನ ರೋಡ್ ಕೆಟ್ಟಾವ ಅವುನ್ನ ಸರಿ ಮಾಡಬೇಕು ಅಂತೇಳಿ ಟ್ರೈಕ್ ಮಾಡಿದ್ವಿ, ಆಮ್ಯಾಲೆ ಪಂಚಾಯ್ತಿಯವರು ಕುಡ್ಯಾನೀರಿನ ವ್ಯವಸ್ಥೆ ಮಾಡಿದ್ರು. ಊರಾಗಿನ ರೋಡ್ ಮಾಡಿದ್ರು. ಇದೆಲ್ಲ ಆದ್ಮೇಲೆ ದುಡಿಯಾಕ ಕೆಲಸ ಕೊಡ್ಬೇಕು ಅಂತೇಳಿ ನಮ್ಮ ಸಂಘದ ಕಡೆಯಿಂದ ಅರ್ಜಿ ಕೊಟ್ಟು ಕೆಲಸ ತಗಂಡ್ವಿ, ನಾನು ಸಂಘಕ್ಕ ಯಾವಾಗ ಸೇರಿದ್ನೋ ಆವಾಗಿಂದ ಎಗಲ ಮ್ಯಾಲೆ ಹಸಿರು ಟವಲ್ ಹಾಕ್ಕಂಡು ಟ್ರೈಕ್ (ಸ್ಟ್ರೈಕ್, ಪ್ರತಿಭಟನೆ) ಮಾಡಾಕ ಹೋಗ್ತಿದ್ದೆ. ಮತ್ತೆ ಬರಿಗಳೂರಾಗ ಮೀಟಿಂಗ್ ಏನಾರ ಇದ್ರೆ ಹೋಗ್ತಿದ್ದೆ. ಎಲ್ಲ್ಯಾದರೂ ಹೋರಾಟ ಇದ್ರೆ, ಯಾವುದಾದ್ರೆ ಪಂಚಾಯ್ತಿಯಾಗ ಕೂಲಿಕಾರರಿಗೆ ಕೂಲಿ ಹಣ ಕೊಟ್ಟಿಲ್ಲ ಅಂದ್ರೆ ಟ್ರೈಕ್ ಮಾಡತ್ತಿದ್ವಿ, ಮತ್ತೆ ನಮ್ಮೂರಾಗ ನಾಲ್ಕುಜನ ಉದ್ಯೋಗ ಖಾತ್ರಿ ಕೆಲಸಕ್ಕೆ ಹೋದಂಗ ನಾನು ನನ್ನ ಸೊಸಿ ಇಬ್ರು ಕೆಲಸಕ್ಕೆ ಹೋಗ್ತಿದ್ವಿ, ಆದ್ರೆ ಇದ್ಯಾವದು ನಮ್ಮ ಜಾತಿಯವರಿಗೆ ಸೇರಿಕಿ ಇಂಲಿಲ್ಲ. ಯಾಕಂದ್ರ ನಮ್ ಜಾತಿಯಾಗ ಮನೆಯಿಂದ ಹೊಂಗಡೆ ಬಂದ್ರೆ ಎಲ್ಲಾ ಹೆಣ್ಣು ಮಕ್ಕಳು ಬುರ್ಖಾ ಹಾಕಂಡು ಹೊಂಗಡೆ ಹೋಗ್ತಾರ. ಮತ್ತೆ ನಮ್ ಜಾತಿಯಾಗ ಯಾರು ಟ್ರೈಕ್ ಮಾಡಾಕ ಆಗಲಿ, ಹೋರಾಟ ಮಾಡಾಕ ಆಗಲಿ, ಚಳವಳಿ ಮಾಡಾಕ ಆಗಲಿ, ಯಾರು ಹೋಗಾದಿಲ್ಲ. ಆದ್ರೆ ನಾನು ಸಂಘದಾಗ ಐದೀನಿ ನಾಲ್ಕು ಜನಕ್ಕ ಒಳ್ಳೆದಾಗ್ತದ ಅಂದ್ರೆ ನಾವ್ಯಾಕ ಟ್ರೈಕ್ ಮಾಡಾಕ ಹೋಗ್ಬಾರದು. ನಾನು ತಪ್ಪೇನು ಮಾಡಿಲ್ಲ ಅಂತ ತಿಳ್ಕಂಡು ಯಾರು ಏನೇ ಅಂದ್ರೂನ ನಾನು ಇಂತವುಕಲ್ಲ ಹೋಗ್ತಿದ್ದೆ. ಆಮ್ಯಾಲೆ ಏನಾಯಿತಂದ್ರೆ ಇಡೀ ನಮ್ ಜಾತಿಯವರೆಲ್ಲ ಬಂದು ನೀನು ಉದ್ಯೋಗ ಖಾತ್ರಿ ಕೆಲಸಕ್ಕೆ ಹೋಗಬಾರದು, ನೀನು ಸಂಘದಾಗ ಇರಬಾರದು, ಹಸಿರು ಟವಲ್ ಹಾಕಬಾರದು, ನೀನು ಇನ್ನ ಮುಂದ ಎಲ್ಲಿಗಾದ್ರೆ ಹೋದ್ರೆ ಬುರ್ಖಾ ಹಾಕ್ಕಂಡು ಅಡ್ಯಾಡಬೇಕು ಅಂತ ಬೆದರಿಕೆ ಹಾಕಿದ್ರು. ನಮ್ ಧರ್ಮದ ಗುರುಗಳು ಬಂದು ನಿನ್ನ ನಮ್ ಧರ್ಮದಾಗಿನಿಂದ ಹೊರಗಾ ಇಡ್ತೀವಿ ಅಂತ ಹೆದರಿಸಿದ್ರು. ಆದ್ರೆ ನಾನು ಇದು ಯಾವುದು ಲೆಕ್ಕಕ್ಕೆ ತಗಾಲಿಲ್ಲ. ಯಾಕಂದ್ರೆ ಎಲ್ಲಾರ ಮನಿ ಪರಿಸ್ಥಿತಿ ಒಂದ್ರೀತಿ ಇದ್ರೆ ನಮ್ ಮನೆ ಪರಿಸ್ಥಿತಿ ಬ್ಯಾರೆ ಐತಿ. ಯಾಕಂದ್ರೆ ನನ್ ಗಂಡ ಇರಾತನ ನಾನು ಹೊಂಗಡೆ ಕೂಲಿ ಕೆಲಸಕ್ಕೆ ಹೋಗಿದಿಲ್ಲ. ನನ್ ಗಂಡ ಸತ್ತಮ್ಯಾಲೆ ಮಕ್ಕಳು ಸಲುಹಬೇಕಾದ್ರೆ, ಸಂಸಾರ ನಿಭಾಯಿಸಬೇಕಾದ್ರೆ ನಾನು ಕೂಲಿ ಕೆಲಸಕ್ಕೆ ಹೋಗ್ಬೇಕಾತು. ನನಗ ಇಬ್ರು ಗಂಡ ಮಕ್ಕಳು, ಹಿರಿಮಗನಿಗಿ ಮದಿವಿ ಮಾಡಿದ್ದೆ. ಆದ್ರ ಮದಿವಿ ಮಾಡಿ ಬಹಳ ವರ್ಷಕ್ಕ ಅವನಿಗೆ ಜಡ್ಡು ಬಂದು ತೀರಿಕಂಡ. ಆಮ್ಯಾಲ ನನ್ನ ಸಣ್ಣ ಮಗನೂ ಆತ್ಮಹತ್ಯ ಮಾಡಿಕಂಡು ತೀರಿಕಂಡ. ಈಗ ಇರೋದು ಇಬ್ರೆ. ನಾನು ಮತ್ತ ನನ್ನ ಸೊಸಿ ಮಾತ್ರ. ಇವತ್ತು ಇಬ್ಬರು ದುಡದು ನಮ್ಮ ಕುಟುಂಬ ಸಲಹುತೀವಿ. ನಮ್ ಕಷ್ಟ ಹಿಂಗಿರಬೇಕಾದ್ರೆ ಈ ಹಾಳಾದ ಉದ್ಯೋಗ ಖಾತ್ರಿ ಯೋಜನದಾಗ ನನ್ ಸೊಸೆ, ನಾನು ಒಬ್ಬೊಬ್ರು ನಲವತ್ತೈದು ದಿನ ದುಡದೀವಿ. ಆದ್ರೆ ಪಂಚಾಯ್ತಿಯವರು ದುಡದಂತ ಕೂಲಿನೇ ಕೊಡ್ಲಿಲ್ಲ. ಆಮ್ಯಾಲೆ ನಾವು ದುಡದ ಕೂಲಿ ಕೇಳಿದ್ದಕ್ಕ ನಮ್ಮ ಮ್ಯಾಲ

ಲಾಟಿಚಾರ್ಜ್ ಮಾಡಿ ಕೇಸ್ ಮಾಡ್ಯಾರ. ಈಗ ಕೋರ್ಟಿಗೆ ಅಡ್ಡ್ಯಾಡಕತ್ತೀವಿ. ಈಗ ನಮ್ ಧರ್ಮದ ಗುರುಗಳು ಏನಂತಾರ ಅಂದ್ರೆ, ನಾವು ಹೇಳಿದ ಮಾತು ಕೇಳಲಿಲ್ಲ. ನಮ್ ಜಾತಿಗೆ ಅವಮಾನ ಮಾಡಿದ್ಲು. ಕುರಾನಿಗೆ ವಿರುದ್ಧವಾಗಿ ನಡಕಂಡ್ಲು. ಮತ್ತೆ ಬುರ್ಖಾ ಬುಟ್ಟು ಹಸಿರ ಟವಲ್ ಹಾಕ್ಕಂಡ್ ನಮ್ ಧರ್ಮಕ್ಕ ದ್ರೋಹ ಮಾಡಿದ್ಲು. ಹೋರಾಟ, ಟ್ರೈಕ್ ಮತ್ತೆ ಚಳುವಳಿ ಅಂತ ಮಾಡಾಕ ಹೋಗಿ ನಮ್ ಮುಸ್ಲಿಂ ಜಾತಿಗೆ ಅವಮಾನ ಮಾಡಿದ್ಲು ಹಂಗಾಗಿ ಇವತ್ತು ಆ ಅಲ್ಲಾನೇ ಬಂದು ನಿನಗ ತಕ್ಕಶಿಕ್ಷೆ ಕೊಟ್ಟಾನ. ನಿನಗ ಹಿಂಗ ಆಗಬೇಕಾಗಿತ್ತು ಹಂಗಾಗಿ ಆ ಅಲ್ಲಾ ಈ ರೂಪದಲ್ಲಿ ಬಂದು ಶಿಕ್ಷೆ ಕೊಟ್ಟಾನ ಅಂತೇಳಿ ನಮ್ ಧರ್ಮದ ಗುರುಗಳು ಮತ್ತೆ ಹಿಡೀ ನಮ್ ಜಾತಿ ಜನ ಮಾತಾಡಿಕಂತಾರ. ಹಂಗಾಗಿ ಇವತ್ತು ನಮ್ ಮನಿ ಒಂದನ್ನ ಜಾತಿಯಿಂದ ಬ್ಯಾರೆ ಇಟ್ಟಾರ. ಮತ್ತೆ ಒಬ್ಬೊಬ್ರು ಒಂದೊಂದು ಮಾತು ಆಡ್ತಾರ. ಸಣ್ಣ ವಯಸ್ಸಿಗೆ ಗಂಡ ಸತ್ರು ಬುದ್ದಿ ಬರಲಿಲ್ಲ ಅಂತ ಆಡಿಕಳ್ತಾರ. ಅಂಗೆ ಒಬ್ಬ ಮೊಮ್ಮಗಳು ಮದ್ವಿ ವಯಸ್ಸಿಗೆ ಬಂದಾಳ. ಆಕಿಗೆ ಮದ್ವಿ ಮಾಡಬೇಕಂದ್ರೆ ಯಾರು ನಮ್ ಮನ್ಯಾಗ ಬೀಗಸ್ತನ ಮಾಡಾಕ ಮುಂದ ಬರಲಿಲ್ಲ. ಬೀಗಸ್ತನ ಮಾಡಾಕ ಬಂದವರನ್ನೆಲ್ಲ ಅವರು ಮನ್ಯಾಗ ಬೀಗಸ್ತನ ಮಾಡಬ್ಯಾಡ್ರಿ. ಅವರ ಮನತಿನ ಚಲೋ ಇಲ್ಲ. ಅವರನ್ನ ನಮ್ ಜಾತಿಯಿಂದ ಹೊರಗಿಟ್ಟೀವಿ ಅಂತೇಳಿ ಹುಡಿಗಿನ್ನ ನೋಡಾಕ ಬಂದವರಿಗೆಲ್ಲ ಹೇಳಿ ಕಳಸ್ತಿದ್ರು. ಹಂಗಾಗಿ ನನ್ ಮೊಮ್ಮಗಳಿಗೆ ವರ ಬರಾದಿಲ್ಲಂತೇಳಿ ನಮ್ ಸಂಬಂಧಿಕರಾಗ ಮದ್ವಿ ಪಿಕ್ಸ್ ಮಾಡೀವಿ. ಈ ಹಾಳಾದ ಉದ್ಯೋಗ ಖಾತ್ರಿ ಯೋಜನೆ ಸೇರಿ, ಮತ್ತೆ ಈ ರೈತ ಸಂಘ ಅಂತೇಳಿ ಸೇರಿ ಇವತ್ತು ನಮ್ ಜಾತಿಯವರಲ್ಲಿ ನಮ್ಮನ್ನ ದೂರ ಇಟ್ಟಾರ. ನೋಡ್ರಿ ನಮಗ ಈ ಬ್ಯಾಸಿಗಿ ಟೈಂದಾಗ ಜೀವ್ನ ನಡಸಾದು ಬಾಳ ಕಷ್ಟ ಆಗ್ಯಾದ. ಯಾಕಂದ್ರ ನಾವು ಬರೀ ಮನ್ಯಾಗ ಹೆಣ್ಮಕ್ಕಳು ಇದ್ದವರು. ಮನ್ಯಾಗ ಗಂಡಮಕ್ಳು ಇದ್ದವರು ಆದ್ರೆ ಬ್ಯಾಸಿಗಿ ಟೈಮಿನ್ಯಾಗ ದುಡಿಯಾಕ ಬೆಂಗಳೂರು, ಪೂನಾ ಗೋವಾಕ್ಕ ದುಡಿಯಾಕ ಹೋಗ್ತಾರ. ಆದ್ರೆ ನಾವು ಬರೀ ಹೆಣ್ಣುಮಕ್ಕಳು ಇದ್ದವರು ಹೋಗಾಕ ಆಗ್ತಾದೇನು? ಗಂಡ ಸತ್ತ ಒಂಟಿ ಹೆಣ್ಣು ಮಕ್ಕಳನ್ನ ಈ ದುನಿಯಾ ಬಾಳಾ ಕೆಟ್ಟದಾಗಿ ನೋಡ್ತಾದ. ಅಂತದ್ರಾಗ ದೂರದ ಊರಿಗೆ ದುಡಿಯಾಕ ಹೋದ್ರೆ ಈ ಜನ ಸುಮ್ನೆ ಬಿಡ್ತಾರೇನು? ಹಂಗಾಗಿ ನಾವು ಇದ್ದ ಊರಾಗ ದುಡಕಂಡು ತಿನ್ನಾನು ಅಂದ್ರೆ ಪರಿಸ್ಥಿತಿ ಹಿಂಗಾದ ನೋಡ್ರಿ. ನಮಗ ಅಡಿವ್ಯಾಗ ಹೊಲ ಇಲ್ಲ ಊರಾಗ ಮನಿ ಇಲ್ಲ ದುಡಿಬೇಕು ತಿನ್ಬೇಕು. ಅಂತದ್ರಾಗ ಪ್ರತೀ ತಿಂಗಳು ಕೋರ್ಟಿಗೆ ಅಡ್ಡ್ಯಾಡಕತ್ತೀವಿ. ಕೋರ್ಟಿಗೆ ಅಡ್ಡ್ಯಾಡದು ಸುಮ್ನೆ ಆಗ್ತಾದ? ಒಂದ್ಸಲ ಕೋರ್ಟಿಗೆ ಹೋದ್ರ ಎರಡ್ನೂರು ರೂಪಾಯಿ ಖರ್ಚು ಬರ್ತಾದ. ನಾವು ದಿನ ಐವತ್ತು–ಅರವತ್ತು ರೂಪಾಯಿ ದುಡಿತೀವಿ ಇದರಾಗ ಸಂಸಾರ ನಡುಸಾದೆ ಕಷ್ಟ ಐತಿ. ಇಂತದ್ರಾಗ ತಿಂಗಳಾ–ತಿಂಗಳಾ ಕೋರ್ಟಿಗೆ ಹೋಗಾಕ ಎರಡ್ನೂರು ರೂಪಾಯಿ ಎಲ್ಲಿಂದ ತರಬೇಕು. ಹಂಗಾಗಿ ಸಾಲಮಾಡಿ ಕೋರ್ಟಿಗೆ ತಿರುಗ್ಯಾಡಂಗ ಆಗ್ಯಾದ ನಮ್ ಬಾಳೇವು.” ಎಂದು ಕಣ್ಣೀರಿಟ್ಟಳು.

ತಹೆರಾ ಬೇಗಂ ಅವರ ಮಾತುಗಳು ಹಲವು ಸಂಗತಿಗಳನ್ನು ಹೊರ ಹಾಕುತ್ತವೆ. ಹೈದರಾಬಾದ್ ಕರ್ನಾಟಕವು ಹಿಂದೂಮುಸ್ಲಿಂ ಸಮುದಾಯದವರು ಸಾಮರಸ್ಯದಿಂದ ಬಾಳುವ ಪ್ರದೇಶವಾಗಿದೆ. ಆದರೆ ಈ ಎರಡೂ ಧರ್ಮದ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಸಮಸ್ಯೆಗಳಿವೆ. ಏಕೆಂದರೆ ತಹೆರಾ ಬೇಗಂ ಜತೆಗೆ ರೈತ ಸಂಘಟನೆಯನ್ನು ಸೇರಿದ ಮತ್ತು ಪ್ರತಿಭಟನೆಯಲ್ಲಿ ಪಾಲ್ಗೊಂಡವರಲ್ಲಿ ಹಿಂದೂ ಧರ್ಮಕ್ಕೆ ಸೇರಿದ ಮಹಿಳೆಯರೂ ಇದ್ದರು. ಆದರೆ ಇವರುಗಳು ಅನುಭವಿಸಿದ ಕಷ್ಟಗಳು ಭಿನ್ನವಾಗಿವೆ. ತಹೆರಾ ಬೇಗಂ ಅವರು ಅನುಭವಿಸುತ್ತಿರುವುದು ಒಂದು ತಾನು ಜಾತಿಯಿಂದ ಮುಸ್ಲೀಂ ಎನ್ನುವ ಕಾರಣಕ್ಕಾಗಿ. ಇನ್ನೊಂದು ತಾನು ಹೆಣ್ಣು ಎನ್ನುವ ಕಾರಣಕ್ಕಾಗಿ. ಇಲ್ಲಿಯೂ ಧಾರ್ಮಿಕ ಪುರುಷರ ದಬ್ಬಾಳಿಕೆಯು ತಹೆರಾ ಬೇಗಂ ಮೇಲೆ ಆಗಿರುವುದನ್ನು ನೋಡಬಹುದು. ಮುಖ್ಯವಾಗಿ ಇಸ್ಲಾಂ ಧರ್ಮದಲ್ಲಿ ಮಹಿಳೆಯರು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದೇ ಅಪರೂಪ. ಅಂತಹುದ್ದರಲ್ಲಿ ತಹೆರಾ ಬೇಗಂ ಸಾರ್ವಜನಿಕವಾಗಿ ಕಾಣಿಸಿಕೊಂಡರು. ಹಾಗೆಯೇ ಯಾರ ಒಪ್ಪಿಗೆಯನ್ನೂ ಕೇಳದೆ (ಧಾರ್ಮಿಕ ಮುಖಂಡರು) ರೈತ ಸಂಘಟನೆಯನ್ನು ಸೇರಿದುದು, ಬುರುಖಾದ ಜಾಗದಲ್ಲಿ ಹಸಿರು ಟವಲ್ಲನ್ನು ಹಾಕಿಕೊಂಡಿದುದು ಇವು ಧಾರ್ಮಿಕ ಮುಖಂಡರನ್ನು ನಿದ್ರಗೆಡಿಸಿದ್ದವು. ಹೀಗೆ ಮಾಡುವುದು ಧರ್ಮದ ವಿರುದ್ಧ ನಡೆಯಾಗಿದೆ ಎಂಬುದು ಅವರ ವಾದವಾಗಿತ್ತು. ಈ ಎಲ್ಲಾವುಗಳನ್ನು ಸಹಿಸದ ಕೆಲವು ಮುಖಂಡರು ತಹೆರಾ ಬೇಗಂಳಿಗೆ, ಇವುಗಳೆಲ್ಲವುಗಳನ್ನು ಬಿಡುವಂತೆ ಒಂದು ಸಾರಿ ಎಚ್ಚರಿಕೆಯನ್ನೂ ಕೊಟ್ಟಿದ್ದರು. ಆದರೆ ಇದಾವುದನ್ನೂ ಕೇಳದೆ ಧಿಕ್ಕರಿಸಿದ್ದಳು. ಆ ಕಾರಣಕ್ಕಾಗಿ ತಹೆರಾ ಬೇಗಂಳನ್ನು ತಮ್ಮ ಧರ್ಮದಿಂದ, ಜಾತಿಯಿಂದ ಹೊರ ಹಾಕಿದ್ದರು. ಆದರೆ ಈ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುವುದು ಅವಳಿಗೆ ಅನಿವಾರ್ಯವಾಗಿತ್ತು. ಏಕೆಂದರೆ ಕಿತ್ತು ತಿನ್ನುವ ಬಡತನದಿಂದ ಜೀವನ ನಡೆಸುವುದೇ ಕಷ್ಟಕರವಾಗಿದ್ದಾಗ, ಅದನ್ನು ನಿಭಾಯಿಸುವುದು ಇನ್ನೂ ಕಷ್ಟಕರವಾಗಿತ್ತು. ಅಂತಹ ಸಂದರ್ಭದಲ್ಲಿ ನರೇಗಾ ಯೋಜನೆ ಒಂದು ಆಶಾ ಭಾವನೆಯನ್ನು ತಂದಿತ್ತು. ಆ ಕಾರಣಕ್ಕಾಗಿ ಸಾರ್ವಜನಿಕ ವಲಯದಲ್ಲಿ ಕಾಣಿಸಿಕೊಂಡಿದ್ದಳು. ಆದರೆ ಇದೂ ಕೂಡ ತಮ್ಮ ಜೀವನಕ್ಕೆ ಮುಳುವಾಯಿತು. ರೈತ ಸಂಘಟನೆಗೆ ಮತ್ತು ಉದ್ಯೋಗ ಖಾತರಿ ಯೋಜನೆಗೆ ಸೇರಿಕೊಂಡಿದ್ದಕ್ಕಾಗಿ ತಾನು ನ್ಯಾಯಾಲಯಕ್ಕೆ ತಿರುಗಾಡಬೇಕಾದ ಪರಿಸ್ಥಿತಿ ಒದಗಿ ಬಂತು ಮತ್ತು ಹೀಗೆ ಮಾಡಿದ ಕಾರಣಕ್ಕಾಗಿಯೇ ಅಲ್ಲಾನೇ ನಿನಗೆ ಸರಿಯಾದ ಶಿಕ್ಷೆ ಕೊಟ್ಟಿದ್ದಾನೆ ಎಂಬಂತಹ ಮೂದಲಿಕೆಯು

ಮಾತುಗಳು ತಮ್ಮ ಧರ್ಮದವರಿಂದ ಎದುರಿಸಬೇಕಾಯಿತು. ಆ ಕಾರಣಕ್ಕಾಗಿಯೇ ತನ್ನ ಮೊಮ್ಮಗಳ ಮದುವೆಗಾಗಿ ಹಲವಾರು ಕಷ್ಟಗಳನ್ನು ಅನುಭವಿಸಬೇಕಾಯಿತು ಎನ್ನುವ ತಹೆರಾ ಬೇಗಂಳಿಗೆ ತುಂಬಾ ನೋವಿನ ಸಂಗತಿಯಾಗಿ ಕಾಡತೊಡಗಿವೆ. ಇನ್ನು ಸರಕಾರಿ ಯೋಜನೆಗಳಲ್ಲಿ ಕೆಲಸ ಮಾಡುವುದಕ್ಕಿಂತ ಬೇರೆ ಊರುಗಳಿಗೆ ವಲಸೆ ಹೋಗಿ ತಮ್ಮ ಸ್ವಂತ ಇಚ್ಛೆಯಿಂದ ದುಡಿಯುವುದೇ ಉತ್ತಮ ಎಂಬುದು ಮತ್ತು "ಈ ಹಾಳಾದ ಉದ್ಯೋಗ ಖಾತ್ರಿ ಕೆಲ್ಸಕ್ಕೆ ಹೋಗಿ ಕೋರ್ಟಿಗೆ ತಿರುಗ್ಯಾಡುದು ಬಂದಾದ" ಎಂಬ ಧ್ವನಿ ಪದೇ ಪದೇ ತಹೆರಾ ಬೇಗಂ ಮಾತಿನಲ್ಲಿ ವ್ಯಕ್ತವಾಗಿರುವುದು ಉದ್ಯೋಗ ಖಾತರಿ ಯೋಜನೆಗೆ ಹಿಡಿದ ಕನ್ನಡಿಯಂತಿದೆ. ಪ್ರಾಚೀನ ಕಾಲದಿಂದಲೂ ಪ್ರಮುಖ ಧರ್ಮಗಳಲ್ಲಿ ಮಹಿಳೆ ಪುರುಷನಿಗೆ ಅಧೀನವಾಗಿರುವುದನ್ನೇ ಆದರ್ಶ ಎಂದು ಕರೆಯಲಾಗಿದೆ. ಹಾಗಾಗಿ ಜೀವನದ ಪ್ರತೀ ಹಂತದಲ್ಲಿ ಕೂಡ ಮಹಿಳೆ ಪುರುಷನ ಅಧೀನದಲ್ಲಿಯೇ ಇರಬೇಕು ಎಂಬುದು ಧಾರ್ಮಿಕ ಮೌಲ್ಯ, ಇದನ್ನು ಮಹಿಳೆಯಾದವಳು ಪಾಲಿಸಲೇಬೇಕು ಎಂಬಂತಹ ಮೌಲ್ಯಗಳನ್ನು ಬಿತ್ತುತ್ತಲೇ ಬರಲಾಗಿದೆ. ಒಂದುವೇಳೆ ಪುರುಷನಿಗೆ ಸಮನಾಗಿ ನಡೆದುಕೊಂಡಳು ಎಂದರೆ ಮಹಿಳೆಗೆ ನಾನಾ ರೀತಿಯ ಕಷ್ಟಗಳು ಶುರುವಾಗುತ್ತವೆ. ಧರ್ಮ ಜನರ ಜೀವನದ ಪ್ರತೀ ಹಂತದಲ್ಲೂ ತನ್ನ ಆಲೋಚನಾ ನೆಲೆಗಳನ್ನು ವಿಸ್ತರಿಸಿಕೊಂಡಿದೆ. ಹಾಗಾಗಿ ಧರ್ಮದ ಕಬಂಧ ಬಾಹುಗಳಿಂದ ಬಿಡಿಸಿಕೊಳ್ಳುವುದು ಅಷ್ಟು ಸುಲಭದ ಮಾತಲ್ಲ. ಒಂದುವೇಳೆ ಬಿಡಿಸಿಕೊಂಡರೂ ತಮ್ಮ ಧರ್ಮದಿಂದಲೇ ಬಹಿಷ್ಕಾರಕ್ಕೆ ಒಳಗಾಗಬೇಕಾಗುತ್ತದೆ. ಇದಕ್ಕೆ ಉತ್ತಮ ಉದಾಹರಣೆ ತಹೆರಾ ಬೇಗಂಳದ್ದು.

ಒಟ್ಟಾರೆಯಾಗಿ ಕೊಪ್ಪಳದಲ್ಲಿ ನಡೆದ ಲಾಠಿಚಾರ್ಜ್ ಪ್ರಕರಣದ ನಂತರ ಮಹಿಳೆಯರು, ಪುರುಷರು, ವಯೋವೃದ್ಧರು ಹೀಗೆ ಹಲವು ಜನರು ಹಲವಾರು ಕಷ್ಟಗಳನ್ನು ಅನುಭವಿಸಿರುವುದು ಕಂಡುಬರುತ್ತದೆ.

ಪರಿಸ್ಥಿತಿ ಇಷ್ಟೊಂದು ಜಟಿಲವಾಗಿದ್ದರೂ ಮಾಡದ ತಪ್ಪಿಗೆ ಲಾಠಿಚಾರ್ಜ್ ಪ್ರಕರಣದಲ್ಲಿ ಕೋರ್ಟಿಗೆ ಅಲೆಯುತ್ತಿರುವಂತ ಕೂಲಿ ಕಾರ್ಮಿಕರ ಪಾಲಿಗೆ ದೂರದ ಪ್ರದೇಶಗಳಿಗೆ ಗುಳೆ ಹೋಗಿ ದುಡಿದು ಬದುಕುವಂತ ಹಕ್ಕು ಇಲ್ಲದಂತಾಗಿದೆ. ಏಕೆಂದರೆ ಒಂದು ಸಲ ಕೋರ್ಟಿಗೆ ಹಾಜರಿ ಆಗೋದು ತಪ್ಪಿದ್ದೆಯಾದರೆ ಪೋಲೀಸ್ ಇಲಾಖೆಯವರು ವಾರೆಂಟ್ ಆರ್ಡರ್ ನೀಡಿ ಕೂಲಿಕಾರರನ್ನು ಬಂಧಿಸುವಂತ ಘಟನೆಗಳು ಸಂಭವಿಸುತ್ತಲೇ ಇವೆ. ಹಾಗಾಗಿ ಈ ಕಡೆ ಕೋರ್ಟಿಗೆ ಹೋಗೋದು ತಪ್ಪಿಸುವ ಹಾಗಿಲ್ಲ. ಮತ್ತೊಂದು ಕಡೆ ಹಸಿದು ತಿನ್ನುವ ಬಡತನವಿದ್ದರೂ ದೂರದ ಪ್ರದೇಶಗಳಿಗೆ ಹೋಗಿ ದುಡಿದು ಬದುಕುವ ಹಕ್ಕು ಇಲ್ಲದಂತಾಗಿದೆ. ಏಕೆಂದರೆ ಕೋರ್ಟಿಗೆ ಗೈರು ಹಾಜರಿಯಾದರೆ ಬಂಧಿಸುತ್ತಾರೆ ಎನ್ನುವಂತ ಭಯ ಮತ್ತೊಂದು ಕಡೆಯಾಗಿದೆ. ಇದೆಲ್ಲವನ್ನು ಮೀರಿ ಬೇಸಿಗೆ ಟೈಮ್‌ನಲ್ಲಿ ದುಡಿಯಲು ಪಂಚಾಯ್ತಿ ಕಡೆಯಿಂದ ಕೂಲಿ ಕೆಲಸವನ್ನು ಕೇಳೋಣವೆಂದರೆ ಮತ್ತೆಲ್ಲಿ ಇನ್ನೊಂದು ಪ್ರಕರಣವನ್ನು ಕೂಲಿಕಾರರ ಮೇಲೆ ದಾಖಲಿಸುತ್ತಾರೋ ಎನ್ನುವಂತಹ ಆತಂಕ ಈ ಭಾಗದ ಪ್ರತಿಯೊಬ್ಬ ಕೂಲಿಕಾರರಲ್ಲಿ ಮನೆಮಾಡಿಬಿಟ್ಟಿದೆ.

ರೈತ ಸಂಘಟನೆ ಯಾವಾಗಲೂ ಆಡಳಿತ ನಡೆಸುವ ಸರಕಾರದೊಂದಿಗೆ ಮುಖಾಮುಖಿಯಾಗುತ್ತಿರುತ್ತದೆ. ಆ ನಿಟ್ಟಿನಲ್ಲಿಯೇ ತನ್ನ ರಾಜಕೀಯ ಹಿತಾಸಕ್ತಿಯನ್ನು ಈಡೇರಿಸಿಕೊಳ್ಳುತ್ತಿರುತ್ತದೆ. ಕೊಪ್ಪಳದ ಈ ಲಾಠಿಚಾರ್ಜ್ ಪ್ರಕರಣ ಜಮೀನ್ದಾರಿ ಪದ್ಧತಿಯ ಸ್ಥಿರೀಕರಣಕ್ಕೆ ಕಾರಣವಾಗಿದೆ ಎಂದರೆ ತಪ್ಪಾಗಲಾರದು. ಏಕೆಂದರೆ ಈ ಕೇಸಿನಲ್ಲಿ ಸಿಲುಕಿಕೊಂಡವರು ಬಹಳಷ್ಟು ಜನರು ಬಡ ಕೂಲಿ ಕಾರ್ಮಿಕರೆ ಆಗಿದ್ದಾರೆ. ಇವರ ಮೇಲೆ ಎಫ್.ಐ.ಆರ್. ದಾಖಲಾಗಿರುವುದರಿಂದ ಇವರಾರೂ ಬೇರೆ ಊರುಗಳಿಗೆ ಹೋಗಿ ಕೆಲಸ ಮಾಡಲಾಗುತ್ತಿಲ್ಲ ಮತ್ತು ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸವನ್ನೂ ಸಹ ಕೇಳಲು ಆಗುತ್ತಿಲ್ಲ. ಹಾಗೆಯೇ ಸುಮ್ಮನೆ ಕುಳಿತುಕೊಂಡರೆ ಜೀವನ ನಡೆಸುವುದು ಕಷ್ಟವಾಗುತ್ತದೆ. ಆ ಕಾರಣಕ್ಕಾಗಿ ಅವರು ಸ್ಥಳೀಯ ಜಮೀನುದಾರರ ಹೊಲಗಳನ್ನೇ ಆಶ್ರಯಿಸಬೇಕಾದ ಸ್ಥಿತಿಗೆ ಬಂದಿದ್ದಾರೆ. ಇದರಿಂದ ಜಮೀನುದಾರರು ನಿಗದಿಪಡಿಸಿದ ಕೂಲಿಗೆ ಕೆಲಸ ಮಾಡಬೇಕಾದ ಅನಿವಾರ್ಯತೆಯನ್ನು ಎದುರಿಸುತ್ತಿದ್ದಾರೆ. ಹಾಗೆಯೇ ಈ ಸ್ಥಿತಿ ಕೂಲಿಯಲ್ಲಿನ ತಾರತಮ್ಯಕ್ಕೂ ಎಡೆ ಮಾಡಿಕೊಟ್ಟಿದೆ. ಹೀಗಾಗಿ ಸರಕಾರದ ವರದಿಯು ಸ್ಥಳೀಯ ಜಮೀನ್ದಾರರ ಪಾಲಿಗೆ ವರದಾನವಾಗಿದೆ. ಹಾಗಾಗಿ ಮಹಿಳೆಯರ ಎರಡೂ ಕಡೆ ಹಿಂಸೆಗೆ ಒಳಗಾಗಿರುವುದನ್ನು ಗಮನಿಸಬಹುದು. ಅಂದರೆ ವೇತನ ತಾರತಮ್ಯದ ಕಾರಣಕ್ಕಾಗಿ ಜಮೀನ್ದಾರರಿಂದ ಮತ್ತು ಕುಟುಂಬದಲ್ಲಿನ ಪಿತೃ ಪ್ರಧಾನ ಮೌಲ್ಯಗಳಿಂದ ಮಹಿಳೆಯರು ಹಿಂಸೆಯನ್ನು ಅನುಭವಿಸುತ್ತಲೇ ಇದ್ದಾರೆ. ಒಟ್ಟಾರೆಯಾಗಿ ಇಡೀ ಪ್ರಕರಣದಲ್ಲಿ ಮಹಿಳೆಯರ ಧ್ವನಿ ಮೇಲೇಳದಂತೆ ಮಾಡಲಾಗಿದೆ ಮತ್ತು ಆ ಮೂಲಕ ಹಿಂಸೆಯ ಪ್ರಮಾಣವನ್ನು ಅಧಿಕಗೊಳಿಸಿರುವುದು ಕಂಡುಬರುತ್ತದೆ.

ಸರಕಾರ ಹಲವಾರು ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ರೂಪಿಸುತ್ತಲೇ ಬಂದಿದೆ. ಆದರೆ ಇವುಗಳ ಅನುಷ್ಠಾನದಲ್ಲಿ ಹಲವಾರು ತೊಂದರೆಗಳನ್ನು ಎದುರಿಸುತ್ತಿವೆ. ಉದ್ಯೋಗ ಖಾತರಿ ಯೋಜನೆಯ ಸ್ಥಿತಿಯೂ ಸಹ ಹಾಗೆಯೇ ಆಗಿದೆ. ಇಂದು ಈ ಯೋಜನೆಯನ್ನು ತಮ್ಮ ಅಭಿವೃದ್ಧಿಗೆಂದು ಬಂದಂತಹ ಯೋಜನೆ ಎಂದು ಈ ಭಾಗದ ಜನರು ಯಾರೂ ಹೇಳದೆ ಇರುವಂತಹ ಸ್ಥಿತಿ ಬಂದೊದಗಿದೆ.

ಪರಿಸ್ಥಿತಿ ಹೀಗಿರುವಾಗ ಯೋಜನೆಯು ಸಾಫಲ್ಯಗೊಳ್ಳುವುದು ಹೇಗೆ? ಗ್ರಾಮೀಣ ಬಡ ಜನರ ಬದುಕು ಹಸನಾಗುವುದು ಯಾವಾಗ? ಎಂಬ ಪ್ರಶ್ನೆಗಳು ಕಾಡುತ್ತಲೇ ಇರುತ್ತವೆ.

ಉದ್ಯೋಗ ಖಾತರಿ ಯೋಜನೆಯು ಸಾಮಾನ್ಯ ಜನರಿಗೂ ಹಕ್ಕಿನ ಪರಿಭಾಷೆಯನ್ನು ಕಲ್ಪಿಸಿಕೊಟ್ಟಿದೆ. ಹಾಗಾಗಿ ಪ್ರತಿಯೊಂದು ಗ್ರಾಮ ಪಂಚಾಯಿತಿಗಳಲ್ಲಿನ ಜನರು ಈ ಯೋಜನೆಯಡಿ ತಮ್ಮ ಹಕ್ಕಿನ ಮೂಲಕ ಪ್ರತಿಫಲವನ್ನು ಪಡೆಯುವ ಅವಕಾಶವನ್ನು ಹೊಂದಿದ್ದಾರೆ.

**ಪರಾಮರ್ಶನ ಗ್ರಂಥಗಳು**


1. ಮೀನಾಕ್ಷಿ ಬಾಳಿ ಮತ್ತು ನೀಲಾ ಕೆ (ಸಂ), 2010, ನಲಿದ ನರೇಗಾ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ. ಕರ್ನಾಟಕ ರಾಜ್ಯ ಸಮಿತಿ.
2. ವರಿಕೋಬಂಗಾರ್, 2000, ನ್ಯಾಯಕ್ಕಾಗಿ ಮಹಿಳೆಯರ ಹೋರಾಟ, ದಿವ್ಯಚಂದ್ರ ಪ್ರಕಾಶನ, ಬೆಂಗಳೂರು.
3. ಶೈಲಜ ಎಮ್.ಸಿ ಮತ್ತು ಇತರರು, 2006, ದುಡಿಯುವ ಕೈಗಳಿಗೆ ಉದ್ಯೋಗ, ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೈಸೂರು.


**ದಿನಪತ್ರಿಕೆಗಳ ವರದಿಗಳು**


4. ಕೂಲಿ ಕಾರ್ಮಿಕರಿಂದ ತಾಲೂಕು ಪಂಚಾಯಿತಿಗೆ ಮುತ್ತಿಗೆ, ಮಾರ್ಚ್ 22. 2011, ಕನ್ನಡಪ್ರಭ ದಿನಪತ್ರಿಕೆ, ಬೆಂಗಳೂರು.
5. ಖಾತ್ರಿ ಕೂಲಿಗೆ ಆಗ್ರಹಿಸಿ ಧರಣಿ, ಮಾರ್ಚ್ 18. 2011, ಕನ್ನಡಪ್ರಭ ದಿನಪತ್ರಿಕೆ, ಬೆಂಗಳೂರು.
6. ಪೋಲಿಸ್ ಲಾಠಿಗೆ ರೈತರ ಬಾಯಿಕೋಲು, ಏಪ್ರಿಲ್ 12. 2011, ಸಂಯುಕ್ತ ಕರ್ನಾಟಕ ದಿನಪತ್ರಿಕೆ, ಬೆಂಗಳೂರು.
7. ಹಣವಂತರ ಹೆಸರಲ್ಲಿ ಹಣಗಳಿಸುವ ಭೂಪರು, ಏಪ್ರಿಲ್ 11. 2011, ಸಂಯುಕ್ತ ಕರ್ನಾಟಕ ದಿನಪತ್ರಿಕೆ, ಬೆಂಗಳೂರು.

# ಮಳೆಕೊಯ್ಲು ವ್ಯವಸ್ಥೆಯಲ್ಲಿ ಸಂಗ್ರಹಣಾ ಸಾಧನಗಳ ರಚನಾ ವಿನ್ಯಾಸ

**ಡಾ.ಮಂಜುನಾಥ ಕೆ**

ಮಳೆಕೊಯ್ಲು ಎಂಬುದು ಮಳೆನೀರನ್ನು ಒಟ್ಟುಗೂಡಿಸುವ ಅಥವಾ ಸಂಚಯನ ಮಾಡುವ ಮತ್ತು ಶೇಖರಿಸಿಟ್ಟುಕೊಳ್ಳುವ ವಿಧಾನ. ಇದನ್ನು ವಿಸ್ತಾರವಾಗಿ ಹೇಳುವುದಾದರೆ ಮಳೆಯ ನೀರನ್ನು ಸಂಗ್ರಹಿಸುವುದು, ತಡೆದು ನಿಲ್ಲಿಸುವುದು, ನಿಲ್ಲಿಸಿದ ನೀರನ್ನು ವ್ಯವಸ್ಥಿತವಾಗಿ ಬಳಸುವುದಾಗಿದೆ. ಅಲ್ಲದೇ ಮಳೆಯ ನೀರನ್ನು ಭೂಮಿಯಲ್ಲಿ ಇಂಗಿಸಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಕಾರ್ಯವೂ ಆಗಿದೆ. ಮಳೆಕೊಯ್ಲು ಪದ್ಧತಿ ಇಂದು ನಿನ್ನೆಯದಲ್ಲ. ಅದರ ಪ್ರಾಚೀನತೆ ಮಾನವ ಕೃಷಿ ಆರಂಭಿಸಿದ ಕಾಲ ಅಂದರೆ ನವಶಿಲಾಯುಗದಷ್ಟು ಹಿಂದಕ್ಕೆ ಹೋಗುತ್ತದೆ. ಅಲೆಮಾರಿಯಾಗಿದ್ದ ಮಾನವನು ಸ್ಥಿರವಾಗಿ ಒಂದೆಡೆ ನಿಲ್ಲಿಸಿ ಶೇಖರಿಸುವ ವಿಧಾನವನ್ನು ಅರಿತುಕೊಂಡಿದ್ದು ನವಶಿಲಾಯುಗದಲ್ಲಿ. ಕೃಷಿಗೆ ಬೇಕಾದ ಅಗತ್ಯ ನೀರನ್ನು ನೈಸರ್ಗಿಕ ಹಳ್ಳ–ಕೊಳ್ಳಗಳಿಗೆ ಅಡ್ಡಗಟ್ಟೆಯನ್ನು ನಿರ್ಮಿಸುವ ಸಂಗ್ರಹಣಾ ಸಾಧನಗಳನ್ನು ರಚಿಸುವ ವಿಧಾನ ಕಲಿತುಕೊಂಡಿದ್ದು ಸಹ ನವಶಿಲಾಯುಗದಲ್ಲೇ ಎನ್ನಬಹುದು. ಪ್ರಾಚೀನತೆಯಿಂದ ಆಧುನಿಕ ಕಡೆಗೆ ಬಂದಂತೆ ಕಾಲುವೆ, ಹೊಂಡ, ಒಡ್ಡು, ದೋಣೆಗಳನ್ನು ನಿರ್ಮಿಸಿದನು. ಈ ರೀತಿಯ ಸಂಗ್ರಹಣಾ ಸಾಧನಗಳಿಂದ ಮಳೆನೀರನ್ನು ಶೇಖರಿಸಿಟ್ಟುಕೊಳ್ಳುತ್ತಾ, ಅವಶ್ಯಕತೆಗೆ ತಕ್ಕಂತೆ ನೀರನ್ನು ಬಳಕೆ ಮಾಡುವುದನ್ನು ಕಲಿತನು.

ಸಂಗ್ರಹಣಾ ಸಾಧನಗಳೆಂದರೆ ಮಳೆನೀರು ಸಂಗ್ರಹಿಸುವ ದೋಣೆಗಳು, ಹೊಂಡಗಳು, ಕೊಳ, ಒಡ್ಡು, ಕಾಲುವೆಗಳಾಗಿವೆ. ಪ್ರಾಚೀನ ಕಾಲದಲ್ಲಿ ಸಿಗುವಂತಹ ನೈಸರ್ಗಿಕ ಸಂಪನ್ಮೂಲಗಳಾದ ಕಲ್ಲು, ಮಣ್ಣು, ಇಟ್ಟಿಗೆ, ಗಾರೆಗಚ್ಚು ಇವುಗಳನ್ನು ಬಳಸಿಕೊಂಡು ನೂರಾರು ವರ್ಷಗಳ ಕಾಲ ಬಾಳಿಕೆ ಬರುವಂತೆ ನಿರ್ಮಾಣ ಮಾಡಲಾಗಿದ್ದು, ಪ್ರಸ್ತುತ ಆ ವ್ಯವಸ್ಥೆಯ ಮೂಲಕವಾಗಿಯೇ ಇಂದಿಗೂ ಮಳೆನೀರು ಹೋಗಿ ಸಂಗ್ರಹಗೊಳ್ಳುತ್ತದೆ. ಇದರಿಂದಾಗಿ ಪ್ರಾಚೀನ ಕಾಲದಲ್ಲಿಯೆ ವೈಜ್ಞಾನಿಕ ಕ್ರಮಕ್ಕೂ ಮಿಗಿಲಾದ ಜ್ಞಾನ ಆ ಕಾಲದ ಜನರಿಗಿತ್ತು ಎಂದರೆ ತಪ್ಪಾಗಲಾರದು. ಪ್ರಾರಂಭದಲ್ಲಿ ದೋಣೆಗಳನ್ನು ನಂತರವಾಗಿ ಕಾಲುವೆಗಳ ಮೂಲಕವಾಗಿ ಕೊಳ, ಹೊಂಡಗಳಿಗೆ ಮಳೆನೀರನ್ನು ಹರಿಸಲಾಗಿದೆ.

ಚಿತ್ರದುರ್ಗ ಕೋಟೆ ಪರಿಸರದಲ್ಲಿ ಪ್ರಾಚೀನ ಕಾಲದಿಂದಲೂ ಮಳೆಕೊಯ್ಲು ವ್ಯವಸ್ಥೆಯನ್ನು ವೈಜ್ಞಾನಿಕ ಕಾಲದಿಂದಲೂ ಆಳವಡಿಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಚಿತ್ರದುರ್ಗದಂತಹ ದುರ್ಗಮ ಕೋಟೆ ಪರಿಸರದಲ್ಲಿ ಮಳೆನೀರಿನ ಸಂಗ್ರಹಣಾ ಸಾಧನಗಳನ್ನು ರಚಿಸುವುದೇ ರೋಚಕ. ಈ ನಿಟ್ಟಿನಲ್ಲಿ ಮಳೆಕೊಯ್ಲು ವ್ಯವಸ್ಥೆಯ ಸಂಗ್ರಹಾರಗಳನ್ನು ಯಾವ ರೀತಿಯಾಗಿ ರಚಿಸಿರುವರು ಎನ್ನುವುದನ್ನು ಈ ಲೇಖನದಲ್ಲಿ ತಿಳಿಸುವುದಾಗಿದೆ.

ಚಿತ್ರದುರ್ಗ ಕೋಟೆ ಪರಿಸರದಲ್ಲಿ ಪ್ರಥಮವಾಗಿ ದೋಣೆಗಳನ್ನು ನಿರ್ಮಿಸಿದ್ದು, ಗಾತ್ರದಲ್ಲಿ ಚಿಕ್ಕದಾಗಿ ನಿರ್ಮಿಸಲಾಗಿದ್ದು, ನೈಸರ್ಗಿಕ ತಗ್ಗಾದ ಕಲ್ಲು ಪೊಟರೆಗೆ ತಡೆಗೋಡೆಯಾಗಿ ಚಪ್ಪಡಿಕಲ್ಲನ್ನು ಬಳಸಿ ನೆಲ್ಲಿಕಾಯಿ ಸಿದ್ಧಪ್ಪನ ದೋಣೆಯನ್ನು ನಿರ್ಮಿಸಲಾಗಿದೆ. ಅತ್ಯಂತ ಎತ್ತರವಾದ ಈ ಬೆಟ್ಟದಲ್ಲಿ ಪಹರೆ ಕಾಯುವ ಸೈನಿಕರಿಗಾಗಿ ಈ ದೋಣೆಯನ್ನು ನಿರ್ಮಿಸಲಾಗಿದೆ. ಕುದುರೆದೋಣೆಯ ರಚನಾವಿನ್ಯಾಸದ ಲಕ್ಷಣಗಳನ್ನು ಗಮನಿಸಿದಾಗ, ವ್ಯವಸ್ಥಿತವಾಗಿ ಇಟ್ಟಿಗೆ, ಗಾರೆಯನ್ನು ಬಳಸಿ, ಬೃಹತ್ ಕಲ್ಲಾಸರೆಯನ್ನು ಬಳಸಿಕೊಂಡು 32ಅಡಿ ಉದ್ದದ ತಡೆಗೋಡೆಯೊಂದನ್ನು ಅಡ್ಡಲಾಗಿ ನಿರ್ಮಿಸಿ, ಆ ಮೂಲಕವಾಗಿ ಮಳೆನೀರನ್ನು ಅದರಲ್ಲಿ ಸಂಗ್ರಹಣೆಗೊಳ್ಳುವಂತೆ ಮಾಡುತ್ತಿದ್ದರು. ಈ ದೋಣೆಯ ಹೆಚ್ಚಾದ ನೀರನ್ನು ಇದರ ಕೆಳಭಾಗದಲ್ಲಿರುವ ಮತ್ತೊಂದು ಚಿಕ್ಕದೋಣೆಗೆ ಹರಿಯುವಂತೆ ಮಾಡಲಾಗಿ, ಅಲ್ಲಿಂದ ಹೆಚ್ಚುವರಿ ನೀರನ್ನು ಕಾಲುವೆಯ ಮೂಲಕ ಕೆಳಭಾಗಕ್ಕೆ ಹರಿಸಲಾಗುತ್ತಿತ್ತು. ಕಾಲುವೆಯನ್ನು ಕಲ್ಲಿನಿಂದ ಎರಡು ಬದಿಯಲ್ಲಿ ತಡೆಗೋಡೆಯಾಗಿ ನಿರ್ಮಿಸಿ ನೀರು ಹರಿಯುವ ತಳಭಾಗದಲ್ಲಿ ಗಾರೆಯಿಂದ ನಿರ್ಮಿಸಲಾಗಿರುವ ಉದ್ದೇಶ ನೀರು ಸರಾಗವಾಗಿ ಕೆಳಭಾಗಕ್ಕೆ ಹರಿಯುವಂತೆ ರಚಿಸಲಾಗಿದೆ. ಪ್ರಸ್ತುತ ಕಾಲುವೆಯು ಇಂದಿಗೂ ಸುವ್ಯವಸ್ಥಿತವಾಗಿದ್ದು, ಮಳೆ

ಬಂದಾಗ ಈ ಕಾಲುವೆಯ ಮೂಲಕವಾಗಿ ನೀರು ಹರಿಯುತ್ತವೆ. ಚಂದ್ರವಳ್ಳಿ ಪರಿಸರದಲ್ಲಿ ಬರುವ ಧವಳಪ್ಪನ ಬೆಟ್ಟದಲ್ಲಿಯೂ ಸಹ ಇಂದಿಗೂ ವ್ಯವಸ್ಥಿತವಾಗಿರುವ ದೋಣಿಯಿದೆ. ದೋಣೆಯು ಕಲ್ಲು, ಇಟ್ಟಿಗೆ, ಗಾರೆಯನ್ನು ಬಳಸಿ ರಚಿಸಲಾಗಿದೆ.

ಕೋಟೆಯೊಳಗೆ ಎರಡು ಕೊಳಗಳು ಕಂಡುಬಂದಿದ್ದು, ಒಂದು ನಾಗರಪಡೆ ಸುತ್ತು ಬಳಸಿಕೊಂಡು ನೆಲ್ಲಿಕಾಯಿ ಸಿದ್ದಪ್ಪನ ಬೆಟ್ಟಕ್ಕೆ ಹೋಗುವ ಮುಂಚೆ ಈ ಕೊಳವನ್ನು ನಿರ್ಮಿಸಲಾಗಿದೆ. ಕೊಳದ ರಚನೆಯ ತಳಪಾಯ ಮೂರು ಅಡಿಯಷ್ಟು ಕಲ್ಲಿನ ಚಪ್ಪಡಿಯ ಮೇಲೆ 6 ಅಡಿಯಷ್ಟು ಎತ್ತರದಲ್ಲಿ ಇಟ್ಟಿಗೆ, ಗಾರೆಯ ಜೊತೆಗೆ ನೈಸರ್ಗಿಕ ಕಲ್ಲಾಸರೆಯನ್ನು ಬಳಸಿಕೊಂಡು ನಿರ್ಮಿಸಲಾಗಿದೆ. ತುಪ್ಪದ ಕೊಳದ ಬತೇರಿಯಲ್ಲಿ ಕೊಳವೊಂದನ್ನು ನಿರ್ಮಿಸಲಾಗಿದೆ. ಬತೇರಿಯನ್ನು ಬಳಸಿಕೊಂಡು 31 ಅಡಿ ಅಂತರದಲ್ಲಿ ಇಟ್ಟಿಗೆ, ಗಾರೆಯನ್ನು ಬಳಸಿಕೊಂಡು ನಿರ್ಮಾಣ ಮಾಡಿದ್ದು, ಇದರ ವೈಶಿಷ್ಟ್ಯವೆಂದರೆ ಇಟ್ಟಿಗೆ ಗಾರೆಯ ತಡೆಗೋಡೆಯ ಹಿಂಬದಿಯಲ್ಲಿಯೇ ಮತ್ತೊಂದು ತಡೆಗೋಡೆಯನ್ನು ಕಲ್ಲಿನಿಂದ ನಿರ್ಮಾಣ ಮಾಡಲಾಗಿದ್ದು, ಇದರ ಉದ್ದೇಶ ತಡೆಗೋಡೆಯು ಇಳಿಜಾರು ಪ್ರದೇಶದಲ್ಲಿದ್ದು, ಇಟ್ಟಿಗೆ ಗೋಡೆಯ ಸಂರಕ್ಷಣಾ ಕ್ರಮದಿಂದಲೂ ಈ ರೀತಿಯಾಗಿ ಕೊಳವನ್ನು ರಚಿಸಲಾಗಿದೆ. ಕೊಳದ ಹೆಚ್ಚಾದ ನೀರು ಬತೇರಿಯ ಕೆಳಭಾಗದಲ್ಲಿರುವ ಗೋಪಾಲಸ್ವಾಮಿ ಹೊಂಡಕ್ಕೆ ಹರಿಸಲಾಗಿದೆ.

ಹೊಂಡಗಳ ರಚನಾವಿನ್ಯಾಸವು ಒಂದೇ ರೀತಿಯಾದಂತಹ ಲಕ್ಷಣಗಳನ್ನು ಒಳಗೊಂಡು ನಿರ್ಮಿಸಲಾಗಿದೆ. ಕೋಟೆಯ ಒಳಗಿರುವ ಹೊಂಡಗಳು ಮಾತ್ರ ಬೃಹತ್ ಕಲ್ಲಾಸರೆಗಳನ್ನು ಬಳಸಿಕೊಂಡು ನಿರ್ಮಿಸಲಾಗಿದೆ. ಅವುಗಳಲ್ಲಿ ನೆಲ್ಲಿಕಾಯಿ ಸಿದ್ಧಪ್ಪನ ಹೊಂಡ, ತಂಗಿ ಹೊಂಡಗಳು ಮಾತ್ರ ಚೌಕಾಕಾರವಾಗಿ ಕಲ್ಲಿನ ಕಟ್ಟಡದಿಂದ ನಿರ್ಮಿಸಲಾಗಿದ್ದು, ಅದರಲ್ಲೂ ತಂಗಿಯ ಹೊಂಡವು ಸುಂದರವಾಗಿ ಪಾಳೆಯಗಾರರ ಲಕ್ಷಣಗಳನ್ನೊಳಗೊಂಡ ನಾಗರಹಾವಿನ ಉಬ್ಬುಶಿಲ್ಪವು ಹೊಂಡದ ಒಳಭಾಗದ ಭಿತ್ತಿಯ ಮೇಲೆ ರಚಿಸಲಾಗಿದೆ. ಇದು ವಿಶೇಷವಾಗಿ ಉತ್ತರ ದಿಕ್ಕಿಗೆ ಪಾವಟಿಗೆಗಳನ್ನು ಒಳಗೊಂಡಿದೆ. ಈ ಹೊಂಡದ ಪಕ್ಕದಲ್ಲಿಯೇ ಇರುವ ದೇವಾಲಯಗಳ ಬಳಕೆಗಾಗಿಯೂ ಈ ಹೊಂಡವನ್ನು ಪಾವಟಿಗೆಯೊಂದಿಗೆ ಸುಂದರ ರಚನಾಶೈಲಿಯ ಮೂಲಕ ನಿರ್ಮಿಸಲಾಗಿದೆ. ಉಳಿದಂತೆ ಗೋಪಾಲಸ್ವಾಮಿ ಹೊಂಡವು ಅತ್ಯಂತ ಬೃಹತ್ ಆಗಿ ನಿರ್ಮಿಸಲಾಗಿದ್ದು, ಕೋಟೆಯ ಮೇಲಿಂದ ಬರುವ ಮಳೆನೀರು ಹೆಚ್ಚಾಗಿ ಸಂಗ್ರಹಣೆಯ ಸಲುವಾಗಿ ಬೃಹತ್ ಇಳಿಜಾರು ರೀತಿಯ ಬೆಟ್ಟವನ್ನು ಬಳಸಿಕೊಂಡು ಕಲ್ಲು ಮತ್ತು ಗಾರೆಯ ಮೂಲಕವಾಗಿ ನಿರ್ಮಿಸಲಾಗಿದೆ. ಹೊಂಡದ ಹೆಚ್ಚುವರಿ ನೀರನ್ನು ಕಾಲುವೆಯ ಮೂಲಕ ತಣ್ಣೀರುದೋಣೆಗೆ ಹರಿಸಲಾಗಿದೆ. ಅಲ್ಲಿಂದ ಸಿಹಿನೀರು ಹೊಂಡಕ್ಕೆ ಹೊಗುವ ವ್ಯವಸ್ಥೆಯನ್ನು ಮಾಡಿರುವರು. ನೀರಿನ ಶುದ್ಧತೆಗಾಗಿ ಗೋಪಾಲಸ್ವಾಮಿ ಹೊಂಡದಿಂದ ಸಿಹಿನೀರು ಹೊಂಡದವರೆಗೂ ನೀರು ಹರಿಯುವ ತಳಪಾಯದಲ್ಲಿ ನೈಸರ್ಗಿಕ ಮರಳುಮಿಶ್ರಿತ ಮಣ್ಣನ್ನು ಕಾಣುತ್ತೇವೆ. ಯಾವುದೇ ಗಾರೆಯಿಂದ ಮಾಡದೇ ಶುದ್ಧತೆಗಾಗಿ ಈ ರೀತಿಯಾದಂತಹ ರಚನಾ ವಿನ್ಯಾಸವನ್ನು ಮಾಡಿರುವರು.

ಕೋಟೆಯ ಕೆಳಭಾಗದಲ್ಲಿರುವ ಜನರಿಗಾಗಿ ಕ್ಷೇತ್ರಕಾರ್ಯದಲ್ಲಿ ಗುರುತಿಸಿರುವಂತೆ ಒಟ್ಟು ಹದಿನೇಳು ಹೊಂಡಗಳನ್ನು ಅಗತ್ಯಕ್ಕೆ ತಕ್ಕ ಸ್ಥಳಗಳಲ್ಲಿ ನಿರ್ಮಿಸಿರುವರು. ಇವುಗಳ ರಚನಾವಿನ್ಯಾಸದ ಲಕ್ಷಣಗಳು ಸರ್ವೆಸಾಮನ್ಯವಾಗಿ ಚೌಕಾಕಾರವಾಗಿದ್ದು, ಕಲ್ಲು ಮತ್ತು ಗಾರೆಯನ್ನು ಬಳಸಿಕೊಂಡು ನಿರ್ಮಾಣ ಮಾಡಲಾಗಿದೆ. ಅಗತ್ಯ ಇರುವಂತಹ ಹೊಂಡಗಳಲ್ಲಿ ಪಾವಟಿಗೆಗಳನ್ನು ನಿರ್ಮಿಸಲಾಗಿದ್ದು, ಇನ್ನು ಕೆಲವು ಹೊಂಡಗಳಲ್ಲಿ ಏತ ನೀರಾವರಿ ವ್ಯವಸ್ಥೆಯನ್ನು ಆಳವಡಿಸಿ ಆ ಮೂಲಕವಾಗಿ ನೀರನ್ನು ಬಳಸಿಕೊಳ್ಳುತ್ತಿದ್ದರು. ದೇವಾಲಯಗಳ ಬಳಕೆಗಾಗಿಯೂ ಹೊಂಡಗಳನ್ನು ನಿರ್ಮಿಸಲಾಗಿದ್ದ, ಅವುಗಳಲ್ಲಿ ಚೆನ್ನಕೇಶವಸ್ವಾಮಿ ಹೊಂಡ, ವೆಂಕಟರಮಣ ಹೊಂಡ, ಕರಿವರ್ತಿಶ್ವರ ಹೊಂಡ, ದಳವಾಯಿಹೊಂಡ, ಆಡುಮಲ್ಲೇಶ್ವರ ಹೊಂಡಗಳು ದೇವರ ಬಳಕೆಗಾಗಿಯೂ ನಿರ್ಮಿಸಿದಂತಹ ಹೊಂಡಗಳಾಗಿವೆ. ಹೊಂಡಗಳೆಲ್ಲವೂ ಸಹ ನೈಸರ್ಗಿಕವಾಗಿ ಸಿಗುವಂತಹ ಕಲ್ಲು, ಮಣ್ಣು, ಗಾರೆ, ಮರದ ದಿಂಬುಗಳನ್ನು ಬಳಸಿಕೊಂಡು ನಿರ್ಮಾಣ ಮಾಡಲಾಗಿದ್ದು, ಯಾವುದೇ ಲೋಹವನ್ನು ಬಳಸಿಲ್ಲವಾದರೂ ಈ ಹೊಂಡಗಳೆಲ್ಲವೂ ಸಹ ಇಂದಿಗೂ ಸುವ್ಯವಸ್ಥಿವಾಗಿದ್ದು, ಮಳೆಗಾಲದಲ್ಲಿ ಹೊಂಡಗಳೆಲ್ಲವು ತುಂಬಿರುತ್ತವೆ. ಹೊಂಡಗಳಲ್ಲಿ ಬೃಹತ್ ಆದ ಹೊಂಡವೆಂದರೆ(ನಗರದಲ್ಲಿರುವ) ಸಂತೆಹೊಂಡ ಆಗಿದೆ. ವಿಶಿಷ್ಟ ಲಕ್ಷಣ ಅಥವಾ ನಕ್ಷತ್ರಾಕಾರವಾಗಿ ಕಾಮನಬಾವಿ ಹೊಂಡವನ್ನು ನಿರ್ಮಿಸಲಾಗಿದೆ.

ಕಾಲುವೆಗಳ ನಿರ್ಮಾಣದಲ್ಲಿಯೂ ಸಹ ವ್ಯವಸ್ಥಿವಾಗಿ ಗಾರೆ ಮತ್ತು ಕಲ್ಲುಗಳನ್ನು ಬಳಸಿ ನಿರ್ಮಾಣ ಮಾಡಲಾಗಿದೆ. ಕ್ಷೇತ್ರಕಾರ್ಯದಲ್ಲಿ ದಾಖಲಿಸಿದಂತೆ ಎತ್ತರದ ಬೆಟ್ಟದಲ್ಲಿ ನೀರು ಸರಾಗವಾಗಿ ಹರಿದುಹೋಗುವಂತೆ ತಳದಲ್ಲಿ ಗಾರೆಯನ್ನು ಬಳಸಲಾಗಿದೆ. ಅದೇ ರೀತಿಯಾಗಿ ಸಮತಟ್ಟಾದ ಪ್ರದೇಶದಲ್ಲಿ ನೈಸರ್ಗಿಕವಾಗಿ ಮರಳುಮಿಶ್ರಿತ ನೆಲದಲ್ಲಿ ಮಳೆನೀರು ಹರಿದುಹೋಗುವುದನ್ನು ಗಮನಿಸಿದಾಗ ನೀರಿನ ಶುದ್ಧೀಕರಣದ ಒಂದು ತಂತ್ರವಾಗಿ ಪರಿಗಣಿಸಬೇಕಾಗುತ್ತದೆ. ಈ ರೀತಿಯಾಗಿ ಕಾಲುವೆಯು ಅರಮನೆ ಪ್ರಾಂಗಣ, ಗೋಪಾಲಸ್ವಾಮಿ ದೇವಾಲಯದ ಮುಂದಿರುವ ಸುರಂಗಮಾರ್ಗದ ಕಾಲುವೆಯಲ್ಲಿ ಮರಳು ಮಿಶ್ರಿತವಾಗಿರುವ ನೆಲದಲ್ಲಿ ನೀರು ಹರಿಸಲಾಗಿದೆ.

ಇವುಗಳನ್ನೆಲ್ಲ ಗಮನಿಸಲಾಗಿ ಆಯಕಟ್ಟಿನ ಸ್ಥಳಗಳಲ್ಲಿ ಮಾತ್ರ ನೀರಿನ ಜಲಸಂಗ್ರಹಾರಗಳನ್ನು ನಿರ್ಮಾಣ ಮಾಡಲಾಗಿದೆ. ಯಾವ ಸ್ಥಳದಲ್ಲಿ ಹೆಚ್ಚು ಮಳೆನೀರು ಹರಿಯುತ್ತವೆಯೋ ಅಲ್ಲಿ ಬೃಹತ್ ಆದ ಹೊಂಡ ಅಥವಾ ಕೆರೆಗಳನ್ನು, ಯಾವ ಸ್ಥಳದಲ್ಲಿ ಕಡಿಮೆ ಪ್ರಮಾಣದ ಮಳೆನೀರು ಹರಿಯುತ್ತವೆಯೋ ಅಲ್ಲಿ ದೊಣೆ, ಕೊಳಗಳನ್ನು ನಿರ್ಮಾಣ ಮಾಡಿರುವರು. ಒಟ್ಟಿನಲ್ಲಿ ಹೇಳುವುದಾದರೆ ಸಣ್ಣ ಪ್ರಮಾಣದಲ್ಲಾದರೂ ಸರಿ, ದೊಡ್ಡ ಪ್ರಮಾಣದಲ್ಲಾದರೂ ಸರಿ, ಒಂದು ಹನಿ ಮಳೆನೀರು ವ್ಯರ್ಥವಾಗದ ರೀತಿಯಲ್ಲಿ ಬಳಸಿಕೊಂಡಿರುವುದು ಅವರ ಚಾಣಕ್ಷತೆಗೆ ಸಾಕ್ಷಿಯಾಗಿದೆ.

ಚಿತ್ರದುರ್ಗದ ಕೋಟೆಯೊಳಗೆ ಸೈನಿಕರ ವಸತಿನಿಲಯಗಳಿದ್ದು, ಇಂತಹ ವಸತಿನೆಲೆಗಳ ಬಳಿ ಜೀವನಾಶ್ಯಕವಾಗಿ ಬೇಕಾದ ನೀರಿನ ಆಶ್ರಯತಾಣಗಳಾದ ಹೊಂಡಗಳು ಇಲ್ಲಿವೆ. ಇದರ ಜೊತೆಗೆ ಆ ವಸತಿ ನಿಲಯಗಳಿಗೆ ಮಳೆನೀರು ಹೊಗದಂತೆ ವಸತಿ ನಿಲಯಗಳನ್ನು ರಚಿಸಿರುವರು. ಸೈನಿಕರ ವಸತಿನಿಲಯಗಳ ಬಳಿ ಸುತ್ತಲೂ ಭದ್ರವಾದ ಕೋಟೆ, ಕಂದಕ, ಬಾಗಿಲು, ಏರ್ಪಡಿಸಲಾಗಿದೆ. ಸೈನಿಕರು ಕೋಟೆಯ ಸೂಕ್ಷ್ಮ ಪ್ರದೇಶವನ್ನು ದಿನವಿಡಿ ಕಾವಲು ಕಾಯಬೇಕಾಗುತ್ತಿತ್ತು. ಇಂತಹ ಪ್ರದೇಶಗಳಲ್ಲಿ ಮಂಟಪಗಳನ್ನು ನಿರ್ಮಿಸಿ, ಸೈನಿಕರಿಗೆ ವಸತಿಯ ಅವಕಾಶ ಕಲ್ಪಿಸಲಾಗುತ್ತಿತ್ತು. ಮಂಟಪಕ್ಕೆ ಸುತ್ತಲೂ ಮಣ್ಣಿನ ಹೆಂಡೆಗಳಿಂದ ಭಿತ್ತಿಯನ್ನು ನಿರ್ಮಿಸಿ, ವಸತಿ ನೆಲೆಯಾಗಿ ಮಾಡಿಕೊಳ್ಳಲಾಗಿದೆ. ಮಂಟಪಗಳ ಮೇಲ್ಛಾವಣಿಯನ್ನು ಗಾರೆಗಚ್ಚುಗಳಿಂದ ಮುಚ್ಚಲಾಗಿದ್ದು, ಮಂಟಪದೊಳಗೆ ಮಳೆಯ ನೀರು ಹೋಗದಂತೆ ವಸತಿಗಳನ್ನು ರಚಿಸಲಾಗಿದೆ. ಬೃಹತ್ ಬಂಡೆಗಳ ಮೇಲೆ ಬಿದ್ದ ಮಳೆನೀರು ವಸತಿ ಪ್ರದೇಶಕ್ಕೆ ಹೊಗದಂತೆ, ಬಂಡೆಗಳ ಮಧ್ಯದಲ್ಲಿ ಕಾಲುವೆಗಳನ್ನು ಕಡೆದು ನೀರು ಹೋಗದಂತೆ ಮಾಡಿರುವುದನ್ನು ಎಲ್ಲಾ ವಸತಿನಿಲಯಗಳಲ್ಲಿ ಕಾಣಬಹುದು. ಅದೇ ರೀತಿ ತಿಮ್ಮಣ್ಣನಾಯಕನ ಕೆರೆಯ ಬಳಿಯು ವಸತಿನಿಲಯವನ್ನು ರಚಿಸಲಾಗಿದ್ದು, ಬೃಹತ್ ಕಲ್ಲುಗುಂಡನ್ನು ಮೇಲ್ಛಾವಣಿಯಾಗಿ ಬಳಸಿಕೊಂಡು ವಸತಿಗೃಹವನ್ನು ನಿರ್ಮಿಸಲಾಗಿದೆ. ಈ ಗುಂಡುವಿನ ಮೇಲೆ ಬಿದ್ದ ಮಳೆನೀರು ವಸತಿಗೃಹದೊಳಗೆ ಹೊಗದಂತೆ 22 ಅಡಿಯಷ್ಟು ಉದ್ದದ ಚಿಕ್ಕ ಕಾಲುವೆಯನ್ನು ಕಡೆದಿರುವರು. ಇದರಿಂದ ನಮಗೆ ತಿಳಿದುಬರುವುದೇನೆಂದರೆ "ಜಲಸಂಗ್ರಹಾಗಾರಗಳ ರಕ್ಷಣೆಯ ದೃಷ್ಟಿಯಿಂದಲೂ ಸೈನಿಕರನ್ನು ಕಾವಲಿಗೆ ನೇಮಿಸಲಾಗುತ್ತಿತ್ತು" ಎಂಬುದು ತಿಳಿಯುತ್ತದೆ.

ಈ ಮೇಲ್ಕಾಂಡ ಅಂಶಗಳನ್ನು ಗಮನಿಸಿದಾಗ ಚಿತ್ರದುರ್ಗ ಕೋಟೆ ಪರಿಸರದಲ್ಲಿ ಮಳೆಕೊಯ್ಲು ವ್ಯವಸ್ಥೆಯಲ್ಲಿ ಮಳೆನೀರನ್ನು ವ್ಯವಸ್ಥಿತವಾಗಿ ಹಿಡಿದಿಡುವ, ಮಳೆನೀರಿನ ಮಹತ್ವವನ್ನು ಅರಿತವರಾಗಿ ಇಲ್ಲಿ ಆಳ್ವಿಕೆ ನಡೆಸಿದ ಮನೆತನಗಳೆಲ್ಲವೂ ಸಂಗ್ರಹಣಾ ಸಾಧನಗಳನ್ನು ವೈಜ್ಞಾನಿಕವಾಗಿ, ಇಂದಿಗೂ ಆ ಸಂಗ್ರಹಣಾ ಸಾಧನಗಳ ಮೂಲಕವಾಗಿಯೇ ಮಳೆನೀರು ಸಂಗ್ರಹಗೊಳ್ಳುವುದನ್ನು ಕಂಡಾಗ ಅವರು ಆ ಸಾಧನಗಳ ರಚನೆಯಲ್ಲಿಯೂ ಅಷ್ಟೇ ಮಹತ್ವವನ್ನು ಅವರು ನಿಡುತ್ತಿದ್ದರು ಎಂದು, ಇಂದು ಅವರು ನಿರ್ಮಿಸಿದ ಸಾಧನಗಳ ರಚನೆಯಿಂದ ತಿಳಿಯಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


1) ಹುಲ್ಲೂರು ಶ್ರೀನಿವಾಸ ಜೋಯಿಸ ಸಂಪುಟ ಲೇಖನ.
2) ರಾಜಶೇಖರಪ್ಪ ಬಿ., ದುರ್ಗಶೋಧನ, 2001, ಮಾಧವ ಪ್ರಕಾಶನ.
3) ಶಂಕರ್ ಎಸ್. ಅಥಣಿ, ಹುಲ್ಲೂರು ಶ್ರೀ ಪಾಂಡುರಂಗಜೋಯಿಸ್, ಚಿತ್ರದುರ್ಗ ಏಳುಸುತ್ತಿನ ಕೋಟೆ.
4) ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗಕ್ಕೆ ಬನ್ನಿ, ಸಚಿತ್ರ ಪ್ರವಾಸಿ ಮಾರ್ಗದರ್ಶಿ.
5) ಸೋಮಶೇಖರ್ ಎಸ್.ವೈ. ಕರ್ನಾಟಕ ದೇವಾಲಯ ಕೋಶ: ಚಿತ್ರದುರ್ಗ ಜಿಲ್ಲೆ, ಪ್ರಸರಾಂಗ, ಕ.ವಿ.ವಿ.

6) ಶ್ರೀನಿವಾಸ ಶರ್ಮಾ ಎಚ್.ಪಿ. ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ನೀರು ಸರಬರಾಜಿನ ವ್ಯವಸ್ಥೆ.

# Street Children and Social Work Interventions: Evidences from Hyderabad Karnataka Region

**Dr. Sharanabasavraj**
Department of Social Work, Raichur University, Raichur

**INTRODUCTION:**

India is one of the highly concentrated countries in the world when it comes to street children, according an UNICEF estimate (Ferrara and Ferrara, 2005). Rane and Shroff (1994) have emphasised the role of institutions of Social Work in evolving systematic modules of training for personnel working with street children. D'Souza et al (20024) in their study have also documented the 'street child' phenomenon. Ferguson, et al (2005) provided profile of street children's organisations in Mumbai and review the range of services provided.

The schools of social work may play a very significant role in addressing the needs of street children in many ways. The training module may be devised and implemented with police and judiciary who deal with street children. Field action and research project may be done in order to understand conditions of street children and make direct intervention with the help of social work students. Also it can be played important role by advocating at different levels in policy formulation and designing developmental programmes. In fact, these types of activities provide good opportunities for the fieldwork placement of social work students. Further, a forum for street children may be established in order to bring together the agencies working for street children on a common platform to discuss their problems for effective working.

**INTERVENTION MODULE:**

Interventions need to consider the root causes of the problem, which range from personal pathology to structural failings ranging from social control to social change. The model is based on the multidisciplinary of street children. The children are innocent, vulnerable and dependent. They are also active and full of hope. But for many children the reality of childhood is totally shattered. This study on such children has highlighted certain realities regarding their state of life. Their time should be one of joy and peace and their future should be shaped in harmony. Hence based on the major findings of the study, the following recommendations are made to make the future of these nameless children brighter.

**SHELTER HOMES:**

The extent of the problem of street children in Gulbarga city is only growing in a steady manner. Hence it is felt that the existing shelter homes cannot reach out to all these children in need. Hence new shelter homes should be started in different parts of the city. The existing shelter homes are situated in the south zone where there is more concentration of street children. More shelter homes could be thought about in this zone. Since street children are present in all the four zones of the city the new shelter homes can be started in the remaining three zones.

The need for a shelter home was felt by the children themselves. They are very much in need of a decent place for their night rest. All the other problems like police harassment, anti-social elements, brokers and drug abuse, expressed by the children also arises because of the lack of proper shelter. Hence through the services of more shelter home most of these problems of children can be tackled.

Free shelter home services should be given a rethinking. There should also be a contribution by the street children themselves as they are daily wage earners. Apart from these shelter homes, few centres could be started near the main bus-stands and the railway station that can serve as 'open shelter' to which any street boy can come at any time. Where in basic facilities and first aid could be offered. These centres can be of help of build up rapport with new street children.

A separate shelter home should be thought about for the special care of smaller street children where food and non formal education can be provided since they cannot be encouraged to work. As it was revealed in the study smaller children usually left home due to lack of love and care. Hence a homely atmosphere can be created with a person as a 'Mother' for 4 to 5 years children like in S.O.S. village. Thus, abuse of smaller children by the grown-up boys can be avoided.

**HOME FOR STREET GIRLS:**

The word street child has come to refer to only boys because of their large number and the numerous services available for them. The fact that there are also street girls can not be denied even though they are small in number. It is they who are in need of protection more than the boys. Added to all the other problem of a street child, they are also being sexually abused. Hence, a shelter home for the care of such runway, street and neglected girls could be started in the city.

**TECHNICAL TRAINING:**

As per the study, many children left home due to their dislike for studies. Hence it is not advisable to force them with education again. They themselves desired, that technical education can be given along with non-formal education. The technical training should be directed to get job opportunities for them.

**EMPLOYMENT OPPORTUNITY:**

Majority of the children's' expectation from the government is only employment. They firmly believe that the government can give job opportunities for them. The efforts of World Vision and some NGO's to create job opportunities for street children should be appreciated. Through this scheme, the children have received a social status and a permanent means for their livelihood, which has brightened up the lives of many street children in the city and has paved the way for a new way of life. Similar schemes could be thought about and can be initiated by the government for the welfare of such children.

**HOME PLACEMENT:**

The shelter homes should not become like boarding or hostels for the street children. The children also should not be permitted to make the shelter home their permanent residence. As soon as a street child is brought to the centre, the first step should be always to trace out his/her family and find out the real reason for leaving home and the centre should try to place the children back at home immediately. If the home environment is not conductive to leave, the particular child at home then the agency can plan and start the rehabilitation process for that child.

**STREET BASED CENTRE:**

All the street children cannot be expected to come to the agency and rehabilitated. Since the children are hostile to the adult world, initially they hesitate to come to such centres. Hence for such children street-based centres started in their place of work where non-formal education can be given. The existing agency is already doing it very effectively.

**A CENTRE FOR PROBLEMATIC CHILDREN:**

The experience of working with such children showed that many of these children had number of problems. They do become addicted to drugs, a special de-addiction centre different from already existing centres could be started. Since these children are also different from the rest of the people. They are in need of a special treatment process appropriate to their situation. This de-addiction centre should also be equipped to treat the violent and problematic street children, since the existing shelter homes are not able to concentrate on such children. They are in need of a special care and understanding.

**STAFF TRAINING:**

The staffs who are working in such agencies should be given regular training especially in skills of counselling. They should be taught to be patient and more understanding towards these children. Each staff has to go for regular street contacts. It is there in the field that they can feel one with these children and this will help them to understand the children better. The

children expect the staff working in these agencies to be available to them at any time. They are in need of someone who can listen to them, someone with to whom they can share their troubles and problems.

**LINK WITH GOVERNMENT SERVICES:**

Government through the effective structure is helping the neglected children of the society in its own way. It can be made more effective if services like Juvenile Guidance Bureau, JAPU (Juvenile, Aid Police Unit), Probation Officers of Social Defence and prison department are linked with the local voluntary agencies, since all of them are reaching out to the same target group. There are chances of street children becoming juvenile delinquents and vice versa. Those delinquents who do not have any one to care for can be sent to those agencies working for street children.

The service of "May I help You" booths run by the police department in the bus stands and railway stations can also be linked with these voluntary agencies. They can be of much help to these agencies in identifying the neglected children found loitering in these places and in sending them to these agencies to be rehabilitated.

There is also a strong feeling among the voluntary agencies that the health services in the government hospitals could be made more easily available to these children. It is felt that these children are neglected when they approach the government hospitals and are not given proper care. Hence identity cards can be issued to these children for better care and treatment.

**TRAINING FOR LAW ENFORCES:**

Law enforcing authorities like the police, Juvenile Home officials, Probation officers and corporation personnel who are immediately connected to the street children should be given a special training regarding the concept, background and nature of street children. They should also be trained in skills of counselling.

**ENHANCING EDUCATIONAL SYSTEM:**

One of the main reasons for children dropping out of school was their dislike for studies or fear the teachers. Hence there is a need for enhancing the existing educational system to create situation of learning especially for the rural children. This might prevent children from being runaways to a certain extent.

**AWARENESS TO THE SOCIETY:**

The society, which always looks at, these children with suspension and hatred need to be given awareness regarding the concept and nature of street children. A guided interaction with these street children might help in removing the negative attitude of the people. They should also be taught to help these children by giving employment opportunities.
Today, street children are an inevitable sight in almost all-metropolitan cities and developing cities like Gulbarga in India. Their number keeps on growing every day and it is considered as a serious problem. They are often labelled as antisocial elements, land in the eyes of the law enforcers, they are considered as criminals. But it should be always remembered that they too are human beings and they also have feelings like the rest of us, which should be respected. Hence, their rights as human beings and much more as children should be considered. More than mere programmes, children expect love, affection and opportunities from the society which has alienated them. If the street children grow up in an environment of trust and confidence, they will be better prepared to face the upcoming challenges of life towards turning up as a responsible citizen of the country.

**REFERENCES:**

D'Souza, B. (2004). A model for rehabilitation of male street addicted adolescents in Mumbai. In Understanding adolescents at risk. D'Souza, B., Sonavat, R., and Madangopal, D. (Eds.), Mumbai: Multitech Publishing Co., p. 43.

Ferguson, K., Spruijt-Metz, D., Dyrness, G., Miller, D., Dabir, N., and Dortzbach K. (2005). Innovative programs servicing homeless and street-living children around the world: A compilation of best-practice models from Los Angeles, Mumbai, India and Nairobi, Kenya. USA: Urban Initiative Urban Research Publication.

Ferrara, F. and Ferrara, V. (2005). The Children's Prison: Street Children and India's Juvenile Justice System.

Rane, A. and Shroff, N. (1994). Street children in India, Emerging need for social work intervention. In Street children: A challenge to social work profession. Rane, A. (Ed.), Mumbai: Tata Institute of Social Sciences.

# ಭಾರತದ ಸಂಸತ್ತಿನಲ್ಲಿ ರಾಜಕೀಯ ಪಕ್ಷಗಳ ಪಾತ್ರ

**ಡಾ. ಚನ್ನಬಸವ**
ರಾಜ್ಯಶಾಸ್ತ್ರ ಅಧ್ಯಯನ ವಿಭಾಗ,
ರಾಯಚೂರು ವಿಶ್ವವಿದ್ಯಾಲಯ, ಯರಗೇರಾ, ರಾಯಚೂರು–584133

**ಪೀಠಿಕೆ**

ರಾಜಕೀಯ ಪಕ್ಷಗಳಿಲ್ಲದ ಪ್ರಜಾಪ್ರಭುತ್ವವನ್ನು ಕಾಣಲು ಅಸಾಧ್ಯ. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ ಮತ್ತು ಜನತೆಯ ನಡುವಿನ ಬಾಂಧವ್ಯದ ಸೇತುವೆ ನಿರ್ಮಿಸುವಲ್ಲಿ ಹಾಗೂ ರಾಷ್ಟ್ರದ ಆಡಳಿತ ವ್ಯವಸ್ಥೆಯಲ್ಲಿ ಪಕ್ಷಗಳನ್ನು ಕೇಂದ್ರಬಿಂದುವೆಂದು ಪರಿಗಣಿಸಲಾಗುತ್ತದೆ. ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿರುವಂತಹ ರಾಷ್ಟ್ರಗಳಲ್ಲಿ ಪಕ್ಷಪದ್ಧತಿ ಸರ್ಕಾರ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುವುದಕ್ಕೆ ಸಹಾಯಕಾರಿಯಾಗುತ್ತದೆ. ರಾಜಕೀಯ ಪಕ್ಷಗಳ ಪ್ರಮುಖ ಕಾರ್ಯವೆಂದರೆ ಮತದಾರರ ಆಕರ್ಷಣೆ, ಅವರ ಮೇಲೆ ಪ್ರಭಾವ ಬೀರುವುದು ಮತ್ತು ಚುನಾವಣೆಯಲ್ಲಿ ಗೆಲ್ಲುವುದೇ ಆಗಿರುತ್ತದೆ. ಇದಕ್ಕಾಗಿ ತಮ್ಮದೆ ಆದ ನೀತಿ ಮತ್ತು ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ತಮ್ಮ ಚುನಾವಣಾ ಪ್ರಣಾಳಿಕೆಯನ್ನು ಪ್ರಕಟಿಸುತ್ತವೆ. ಚುನಾವಣಾ ಆಯೋಗದ ಅನುಮತಿಯ ಮೇರೆಗೆ ಯಾರು ಯಾವಾಗ ಬೇಕಿದ್ದರು ಹೊಸ ಪಕ್ಷಗಳನ್ನು ಸಂಘಟಿಸಬಹುದು.

ರಾಜಕೀಯ ಘಟಕಗಳಾಗಿ ಸಂಘಟಿತರಾಗಿರುವ ಮತ್ತು ಮತಾಧಿಕಾರದಿಂದ ಸರ್ಕಾರದ ಆಡಳೀತವನ್ನು ನಿಯಂತ್ರಿಸಲು ಹಾಗೂ ಅದರ ಸಾಮಾನ್ಯ ಧೋರಣೆಗಳನ್ನು ಈಡೇರಿಸಲು ಉದ್ದೇಶಿಸಿರುವ ನಾಗರಿಕ ಗುಂಪು. ಹಲವಾರು ವ್ಯಕ್ತಿಗಳು ಒಟ್ಟಿಗೆ ಸೇರಿ ತಮ್ಮದೇ ಆದ ರಾಜಕೀಯ ತತ್ವಗಳನ್ನು ಅಳವಡಿಸಿಕೊಂಡು ಚುನಾವಣೆಯಲ್ಲಿ ಸ್ಪರ್ಧಿಸಿ ರಾಜಕೀಯ ಅಧಿಕಾರವನ್ನು ಪಡೆಯಲು ಯತ್ನಿಸುವ ಗುಂಪಿಗೆ ರಾಜಕಿಯ ಪಕ್ಷ ಎಂದು ಕರೆಯಬಹುದು.

ಕೆಲವು ತತ್ವಗಳ ಆಧಾರದ ಮೇಲೆ ರಾಷ್ಟ್ರೀಯ ಹಿತಾಸಕ್ತಿಗಳನ್ನು ಸಂಯುಕ್ತ ಪ್ರಯತ್ನಗಳಿಂದ ವೃದ್ಧಿಗೊಳಿಸಲು ಒಟ್ಟಾಗಿ ಸೇರುವ ಅನೇಕ ವ್ಯಕ್ತಿಗಳ ಸಂಘಟನೆಯೇ ರಾಜಕೀಯ ಪಕ್ಷ – ಎಡ್ಮಂಡ್ ಬರ್ಕ್.

**ಬಹುಪಕ್ಷ ಪದ್ಧತಿ**

ಎರಡು ರಾಜಕೀಯ ಪಕ್ಷಗಳಿರುವುದನ್ನು ದ್ವಿಪಕ್ಷ ಪದ್ಧತಿ ಮತ್ತು ಎರಡಕ್ಕಿಂತ ಹೆಚ್ಚು ರಾಜಕೀಯ ಪಕ್ಷಗಳಿರುವುದನ್ನು ಬಹುಪಕ್ಷ ಪದ್ಧತಿ ಎನ್ನುವರು. ಭಾರತದಲ್ಲಿ ಅನೇಕ ರಾಜಕೀಯ ಪಕ್ಷಗಳು ಇರುವುದರಿಂದ ಬಹುಪಕ್ಷ ಪದ್ಧತಿ ಕಂಡು ಬರುವುದು. ಕಾರಣ ವಿವಿಧ ಧರ್ಮಗಳು, ಜನಾಂಗಗಳು, ಪ್ರದೇಶಗಳು, ಭಾಷೆಗಳು ಮತ್ತು ವಿಭಿನ್ನ ಸಂಸ್ಕೃತಿಗಳು ಇರುವುದರಿಂದ ಹಲವಾರು ಪಕ್ಷಗಳು ಉಗಮವಾಗಿವೆ. ಉದಾ: ಕಾಂಗ್ರೆಸ್ ಭಾಜಪಾ, ಸಮಾಜವಾದಿ, ಸಿಪಿಎಂ, ಸಿಪಿಐ, ಎನ್‌ಸಿಪಿ, ಮುಂತಾದವು. ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳ ಪ್ರಜಾಸತ್ಯಯಲ್ಲಿ ಎರಡು ಪ್ರಮುಖ ಪಾತ್ರ ವಹಿಸುವ ರಾಜಕೀಯ ಪಕ್ಷ ಪದ್ಧತಿ ಕಂಡು ಬರುವುದು. ಉದಾ: ಅಮೇರಿಕಾದ ಡೆಮಾಕ್ರಟಿಕ್ ಮತ್ತು ರಿಪಬ್ಲಿಕನ್, ಇಂಗ್ಲೆಂಡಿನ್ ಕನ್ಸರ್ವೆಟಿವ್ ಮತ್ತು ಲೇಬರ ಪಕ್ಷ.[1]

**ರಾಜಕೀಯ ಪಕ್ಷಗಳ ಜವಾಬ್ದಾರಿ**

ಪ್ರಜಾಪ್ರಭುತ್ವದ ತಳಹದಿಯೇ ಪಕ್ಷಪದ್ಧತಿಯಾಗಿದ್ದರಿಂದ ಸಂಸತ್ತಿನಲ್ಲಿ ಒಂದು/ಕೆಲವು ಪಕ್ಷವು/ಗಳು ಆಡಳತ ಪಕ್ಷವಾದರೆ ಉಳಿದ ಪಕ್ಷಗಳು ವಿರೋಧ ಪಕ್ಷಗಳಾಗಿ ಕಾರ್ಯ ನಿರ್ವಹಿಸುತ್ತವೆ. ಸಂಸತ್ತಿನಲ್ಲಿ ದಕ್ಷ ವಿರೋಧ ಪಕ್ಷವಿದ್ದಾಗ ಮಾತ್ರ ಅಲ್ಲಿ ಆಡಳಿತಾರೂಢ ಪಕ್ಷ ತನ್ನ ಆಡಳಿತವನ್ನು ಜವಾಬ್ದಾರಿಯಿಂದ ನಿರ್ವಹಿಸುವುದು. ಎಲ್ಲಿ ಪ್ರಬಲವಾದ ವಿರೋಧ ಪಕ್ಷಗಳಿರುವವೂ ಅಲ್ಲಿ ಜವಾಬ್ದಾರಿಯುತ ಸರ್ಕಾರ ಕಂಡುಬರುವುದು.

[1] ರಾಜಶೇಖರ, ಎಚ್. ಎಂ., (2009). ಭಾರತ ಸರ್ಕಾರ ಮತ್ತು ರಾಜಕೀಯ, ಮೈಸೂರು; ಕಿರಣ ಪ್ರಕಾಶನ

ಸಂಸತ್ತಿನಲ್ಲಿ ವಿರೋಧ ಪಕ್ಷವು ಯಾವಾಗಲು ಆಡಳಿತಾರೂಡ ಪಕ್ಷದ ಆಗುಹೋಗುಗಳನ್ನು ಗಮನಿಸುತ್ತಲೇ ಇರುವುದರಿಂದಲೇ ವಿರೋಧ ಪಕ್ಷವನ್ನು 'ಕಾವಲು ನಾಯಿ' (Watch Dog) ಗೆ ಹೋಲಿಕೆ ಮಾಡಲಾಗಿದೆ. ವಿರೋಧ ಪಕ್ಷಗಳ ಜವಾಬ್ದಾರಿಯೆಂದರೆ ಆಡಳಿತಾರೂಢ ಪಕ್ಷದ ಅಥವಾ ಸರ್ಕಾರದ ಎಲ್ಲ ತಿರ್ಮಾನ ಹಾಗೂ ಕಾರ್ಯಕ್ರಮಗಳನ್ನು ವಿರೋದಿಸುವುದಲ್ಲ. ಸರ್ಕಾರ ಕೈಗೊಳ್ಳುವಂತಹ ರಚನಾತ್ಮಕ ಕಾರ್ಯ ಯೋಜನೆಗಳಿಗೆ ಬೆಂಬಲ ನೀಡುವ ಹಾಗೂ ಅದು ಕೈಗೊಳ್ಳುವಂತಹ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಹಕರಿಸುವಂತಹ ವಿಶಾಲ ಭಾವನೆಯನ್ನು ಹೊಂದಿರಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷವು ಆಡಳಿತಾರೂಢ ಪಕ್ಷದಷ್ಟೇ ಪ್ರಾಮುಖ್ಯತೆಯನ್ನು ಹಾಗೂ ಜವಾಬ್ದಾರಿಯನ್ನು ಹೊಂದಿರುವುದರಿಂದ ಆಡಳಿತಾರೂಢ ಪಕ್ಷ ಮಾಡುವಂತಹ ತಪ್ಪುಗಳ ಬಗೆಗೆ ಎಚ್ಚರಿಕೆಯಿಂದ ಕಾರ್ಯವನ್ನು ಅಥವಾ ಪಾತ್ರವನ್ನು ನಿರ್ವಹಿಸಿ ಸರ್ಕಾರವನ್ನು ಒರೆಗಲ್ಲಿಗೆ ಹಚ್ಚುವುದು ಹಾಗೂ ಜನತೆಯ ವಿಶ್ವಾಸವನ್ನು ಗಳಿಸಲು ಅವಕಾಶವಾಗುವಂತಹ ಕಾರ್ಯಗಳನ್ನು ನಿರ್ವಹಿಸುವುದು ಅತ್ಯವಶ್ಯಕ.[2]

**ಸಂಸತ್ತಿನ ಒಳಗೂ ಹಾಗೂ ಹೊರಗೂ ರಾಜಕೀಯ ಪಕ್ಷಗಳ ಕಾರ್ಯಗಳು**

1. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳು ಚುನಾವಣೆಗೆ ಸರಿಯಾದ ವ್ಯಕ್ತಿಗಳನ್ನು ಆಯ್ಕೆ ಮಾಡುವುದು.
2. ನೀತಿ–ನಿರ್ಣಯ ಕೈಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.
3. ಪಕ್ಷಗಳು ಸರ್ಕಾರ ರಚನೆ ಮಾಡುತ್ತವೆ ಮತ್ತು ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸುತ್ತವೆ.
4. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಕ್ಷಗಳು ಇಡೀ ದೇಶದ ಜನತೆಯನ್ನು ಪ್ರನಿಧಿಸುತ್ತವೆ.
5. ರಾಜಕೀಯ ಪಕ್ಷಗಳು ಸರ್ಕಾರ ಮತ್ತು ಜನರ ನಡುವೆ ಸಂಪರ್ಕ ಒದಗಿಸಿ, ಮತದಾರರಿಗೆ ರಾಜಕೀಯ ಶಿಕ್ಷಣದ ತಿಳುವಳಿಕೆ ನೀಡಿ ಅವರನ್ನು ಸಕ್ರಿಯಗೊಳಿಸಲು ಪ್ರಯತ್ನಿಸುತ್ತವೆ.
6. ಸಂಸದೀಯ ಪದ್ಧತಿಯ ಸರ್ಕಾರದ ಕಾರ್ಯ ನಿರ್ವಹಣೆಗೆ ರಾಜಕೀಯ ಪಕ್ಷಗಳು ಅತ್ಯಾವಶ್ಯಕವಾಗಿವೆ. ಇವುಗಳ ಅಸ್ತಿತ್ವದಿಂದಾಗಿಯೇ ಸಂಸದೀಯ ಪ್ರಜಾಪ್ರಭುತ್ವ ಸರ್ಕಾರದ ಕಾರ್ಯನಿರ್ವಹಣೆ ಸಾಧ್ಯವಾಗಿದೆ.
7. ರಾಜಕೀಯ ಪಕ್ಷಗಳು ಸಮಸ್ಯೆಗಳನ್ನು ಪ್ರಸ್ತಾಪಿಸಿ ಜನತೆಯ ಕಲ್ಯಾಣಕ್ಕಾಗಿ ಶ್ರಮಿಸುತ್ತವೆ.
8. ಪ್ರಜಾಸತೆಯು ಯಶಸ್ವಿಯಗಬೇಕಾದರೆ ಜನತೆಯನ್ನು ಸಂಘಟಿಸಬೇಕು.[3]

**ಸಂಸತ್ತಿನಲ್ಲಿ ರಾಜಕೀಯ ಪಕ್ಷಗಳ ಪ್ರಭಾವ**

